MADAM SPEAKER.—Motion moved. The question is :

"That leave be granted to introduce the Karnataka Public Premises (Eviction of Unauthorised Occupants) (Amendment) Bill, 1976."

The motion was adopted and leave was granted.

SRI N. HUTCHAMASTHY GOWDA.—Madam, I beg to introduce the Bill.

MADAM SPEAKER.—This Bill is introduced. * *

KARNATAKA URBAN LAND TAX (AMENDMENT) BILL, 1976.

Governors Recommendation

MADAM SPEAKER.—I have received the recommendation of Governor for the introduction of the Karnataka Urban Land Tax (Amendment) Bill, 1976 under Art. 207 of the Constitution of India.

INTRODUCTION

SRI N. HUTCHAMASTHI GOWDA.—I beg to move :

"That leave be granted to introduce the Karnataka Urban Land Tax Bill, 1976".

MADAM SPEAKER.—Motion moved. The question is :

"That leave be granted to introduce the Karnataka Urban Land Tax Bill, 1976".

The motion was adopted and leave was granted.

SRI N. HUTCAHMASTHI GOWDA.—I beg to introduce the Bill.

MADAM SPEAKER.—The Bill is introduced. * *

Motion re : Scarcity Conditions and relief measures taken and to be taken by Government

SRI N. HUTCHMASTHI GOWDA (Minister for Revenue) —I beg to move :

"That the Scarcity conditions in certain areas of the State and relief measures taken and to be taken by Government be taken into consideration."

MADAM SPEAKER.—Motion moved :

"That the scarcity conditions in certain areas of the state and relief measures taken and to be taken by Government be taken into consideration."

---

* * Bill appended as Annexure to this volume

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ನಮ್ಮ ದುರಾದೃಷ್ಟದಿಂದ ಅಭಾವ ಪರಿಸ್ಥಿತಿ ಉಂಟಾಗಿ ಜನಗಳು ಬಹಳ ನಷ್ಟಕ್ಕೆ ಈಡಾಗಿದ್ದಾರೆ. ಮುಂಗಾರು ಮಳೆ ಸಕಾಲದಲ್ಲಿ ಬಾರದೆ ಅನೇಕ ಕಡೆ ಜನಗಳಿಗೆ ತೊಂದರೆಯುಂಟಾಗಿ ಸಕಾಲಕ್ಕೆ ಬಿತ್ತನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಸಾಮಾನ್ಯವಾಗಿ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಫೆಬ್ರುವರಿ ಮತ್ತು ಮಾರ್ಚಿ ತಿಂಗಳಲ್ಲಿ ಬಿತ್ತನೆ ಮಾಡಿ ಬೆಳೆ ತೆಗೆಯುತಕ್ಕ ಪ್ರದೇಶಗಳು ಇವೆ. ಈ ಪ್ರದೇಶಗಳಲ್ಲಿಯೂ ಮಳೆ ಬಾರದೆ ಬಿತ್ತನೆಯಾಗಿಲ್ಲ. ಬೆಳೆ ಸಂಪೂರ್ಣವಾಗಿ ನಾಶವಾಯಿತು. ಮತ್ತೆ ಮುಂಗಾರು ಬೆಳೆ ಹಾಕತಕ್ಕ ಕಾಲದಲ್ಲಿ. ಮೇ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ಮಳೆ ಬಂದು ಬಿತ್ತನೆಯಾಗಬೇಕಾಗಿತ್ತು. ಮೇ ಜೂನ್, ಜುಲೈ ಈ ಮೂರು ತಿಂಗಳ ಕಾಲ ಮಳೆಯಾಗದೆ ಅನೇಕ ಕಡೆ ಬಿತ್ತನೆಯಾಗಿಲ್ಲ. ಬಿತ್ತಿದ್ದ ಬೆಳೆಯೂ ಕೂಡ ಕೆಲವು ಭಾಗಗಳಲ್ಲಿ ಒಣಗಿ ಹೋಗಿದೆ; ಈ ವರ್ಷ ನಮ್ಮ ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಹೆಚ್ಚಾಗಿ ಈ ತೊಂದರೆ ಪ್ರಾರಂಭದಲ್ಲಿ ಉಂಟಾಗಿತ್ತು. ಉತ್ತರ ಭಾಗದ ಕೆಲವು ಜಿಲ್ಲೆಗಳಲ್ಲಿ ಕೆಲವು ಭಾಗದಲ್ಲಿ ಮುಂಗಾರು ಬೆಳೆಗೆ ಬಿತ್ತನೆಯಾಯಿತು. ಆದರೆ ಅದೂ ಸರಿಯಾದ ಫಲ ಕೊಡತಕ್ಕ ಪರಿಸ್ಥಿತಿ ಕಂಡುಬರಲಿಲ್ಲ. ಇದಾದಮೇಲೆ ಆಗಸ್ಟ್ ತಿಂಗಳಲ್ಲಿ. ಮತ್ತು ಸೆಪ್ಟಂಬರ್ ತಿಂಗಳಲ್ಲಿ ಕೆಲವು ಅಗತ್ಯವಾದ ಮಳೆ ಆಗಬೇಕಾಗಿದ್ದಂಥ ಕಾಲದಲ್ಲಿ ಮಳೆ ಆಗಲಿಲ್ಲ. ಉಬ್ಬೆ, ಉತ್ತರೆ. ಹಸ್ತ, ಚಿತ್ತ, ಸ್ವಾತಿ ಈ ಐದು ಮಳೆಗಳೂ ಕೂಡ ಸಂಪೂರ್ಣವಾಗಿ ಆಗಲಿಲ್ಲ. ಎಲ್ಲೆಲ್ಲಿ ಮೊದಲು ಬಿತ್ತನೆಯಾಗಬೇಕಾಗಿತ್ತೋ ಅಲ್ಲಿ ಆಗದೆ, ಬಿತ್ತನೆಯಾಗಿದ್ದಂಥ ರಾಗಿ, ಬೆಳೆಯಾಗಲಿ, ಜೋಳದ ಬೆಳೆಯಾಗಲಿ, ಒಣಗಿ ಹೋಗಿ ನಷ್ಟವಾಗತಕ್ಕ ಪರಿಸ್ಥಿತಿ ಕಂಡುಬಂದಿತು. ಮೊಟ್ಟಮೊದಲು ಸುಮಾರು ೩೨ ತಾಲ್ಲೂಕುಗಳಲ್ಲಿ ಈ ಅಭಾವ ಪರಿಸ್ಥಿತಿಯುಂಟಾಯಿತು. ಈ ೯ ಜಿಲ್ಲೆಗಳಲ್ಲಿ ಅಭಾವಪರಿಸ್ಥಿತಿ ಇದೆಯೆಂದು ಗೊತ್ತಾದ ಕೂಡಲೇ ಜಿಲ್ಲೆಗೆ ಐದು ಲಕ್ಷ ರೂಪಾಯಿಗಳಂತೆ ೯ ಜಿಲ್ಲೆಗಳಿಗೂ ಹಣವನ್ನು ನಾವು ಒದಗಿಸಿಕೊಟ್ಟಿದ್ದೇವೆ ಆ ಪ್ರದೇಶಗಳಲ್ಲಿ ಕೂಡಲೇ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇವೆ. ಇಷ್ಟಾದ ಮೇಲೆ ಮತ್ತೆ ೭—೮ ದಿವಸಗಳೊಳಗೆ ಇನ್ನು ನಾಲ್ಕು ಜಿಲ್ಲೆಗಳಲ್ಲಿ ಅಭಾವ ಇದೆಯೆಂದು ಐದು ಲಕ್ಷ ರೂಪಾಯಿಗಳ ಹಾಗೆ ಒಟ್ಟು ೧೩ ಜಿಲ್ಲೆಗಳಿಗೆ ಹಣವನ್ನು ಒದಗಿಸಿ ಕೆಲಸಗಳನ್ನು ಪ್ರಾರಂಭ ಮಾಡುವ ಹಾಗೆ ಏರ್ಪಾಡು ಮಾಡಿದ್ದೇವೆ. ಬಡ್ಜೆಟ್ಟಿನಲ್ಲಿ ಯಾವ ಯಾವ ಕೆಲಸಗಳಿಗೆ ಹಣವನ್ನು ಒದಗಿಸಿ ಕೆಲಸವನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಕೆಲಸಗಳನ್ನೆಲ್ಲಾ ತೆಗೆದುಕೊಳ್ಳಬೇಕು ಎಂದು ೮–೭–೧೯೭೬ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮತ್ತು ಲೋಕೋಪಯೋಗಿ ಅಧಿಕಾರಿಗಳಿಗೂ ತಿಳಿಸಿ, ಕೆಲಸಗಳನ್ನು ಪ್ರಾರಂಭ ಮಾಡಿ ಜನಗಳಿಗೆ ಉದ್ಯೋಗವನ್ನು ಒದಗಿಸಿಕೊಡಬೇಕು ಎಂದು ನಾವು ತಕ್ಕ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಅದಾದಮೇಲೆ ಬಹಳ ಮುಖ್ಯವಾದ ತೊಂದರೆ ಎಂದರೆ, ಕುಡಿಯುವ ನೀರಿನದು. ಈ ಕುಡಿಯುವ ನೀರಿನ ತೊಂದರೆ ಕಂಡುಬಂದಿದ್ದರಿಂದ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಉಂಟಾಗಿತ್ತೋ ಆ ಜಿಲ್ಲೆಗಳಲ್ಲಿದ್ದಂಥ ರಿಗ್ ಯಂತ್ರಗಳನ್ನು ತರಿಸಿ ಬಾವಿಗಳನ್ನು ತೆಗೆಯುವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಆಜ್ಞೆಯನ್ನು ಹೊರಡಿಸಲಾಯಿತು. ಈ ಪ್ರಕಾರವಾಗಿ ಕೆಲವು ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭವಾಯಿತು. ಇವತ್ತಿನ ಪರಿಸ್ಥಿತಿಯಲ್ಲಿ ತೊಂದರೆಯುಂಟಾಗಿರತಕ್ಕ ಜಿಲ್ಲೆಗಳಲ್ಲಿ ೧೧೯ ರಿಗ್ ಯಂತ್ರಗಳು ಕೆಲಸ ಮಾಡುತ್ತವೆ. ಜಿಲ್ಲಾವಾರು ಅಂಕಿ ಅಂಶಗಳನು ನಾನು ಒದಗಿಸಿಕೊಡಬಹುದು, ಆದರೆ ಅದು ಬಹಳ ವಿವರವಾಗುತ್ತದೆಂದು ತಿಳಿದು ಇಷ್ಟು ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಟ್ಟು ೧೫ ತಾಲ್ಲೂಕುಗಳಲ್ಲಿ ೩೯೯೫ ಬಾವಿಗಳನ್ನು ರಿಗ್ ಯಂತ್ರಗಳಿಂದ ತೆಗೆಯಬೇಕು ಎಂದು ಹೇಳಿ ನಾವು ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ ಈಗಾಗಲೇ, ೧೭೬ಳ ಬಾವಿಗಳನ್ನು ರಿಗ್ ಯಂತ್ರಗಳಿಂದ ತೆಗೆದುದ್ದು ಆಗಿದೆ. ಇದರಲ್ಲಿ ೧೩೦೩ ಬಾವಿಗಳು ಜಯಪ್ರದವಾಗಿ ಇದರಲ್ಲಿ ನೀರು ಬರುತ್ತಿದೆ. ಅಷ್ಟೇ ಅಲ್ಲದೆ, ಇನ್ನು ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಆ ಪ್ರದೇಶಗಳಲ್ಲಿ ನಮ್ಮ ಜಿಲ್ಲಾಧಿಕಾರಿಗಳು ಖುದ್ದಾಗಿ ಪರಿಶೀಲನೆ ಮಾಡಿ ಎಲ್ಲೆಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅಲ್ಲೆಲ್ಲ ತಕ್ಕಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಮ್ಮ ಅಧಿಕಾರಿಗಳಿಗೆ ತಿಳುವಳಿಕೆಯನ್ನು ಕೊಟ್ಟಿದ್ದೇವೆ ಇಷ್ಟೆಲ್ಲಾ ಆದರೂ ಕೆಲವು ಊರುಗಳಲ್ಲಿ ಸುಮಾರು ೧೦—೧೨ ಬಾವಿಗಳಲ್ಲಿ ಉಪ್ಪು ನೀರು ಬಂದಿತು. ಅದಕ್ಕಾಗಿ ಅಂಥ ಊರುಗಳಿಗೆ ಬೇರೆಕಡೆಯಿಂದ ನೀರನ್ನು ತಂದು ಒದಗಿಸುತ್ತಿದ್ದೇವೆ.

ಇಷ್ಟೇ ಅಲ್ಲದೆ, ಎಲ್ಲೆಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ನಡೆಯುತ್ತಿದೆಯೋ ಎಲ್ಲಿ ಕುಡಿಯುವ ನೀರು ಇಲ್ಲ. ಅಂಥ ಕಡೆ ಕುಡಿಯುವ ನೀರನ್ನು ಬೇರೆ ಸ್ಥಳಗಳಿಂದ ತಂದು ಒದಗಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಜನಗಳಿಗೆ ಕುಡಿಯುವ ನೀರಿನ ತೊಂದರೆ ಎಳ್ಳಷ್ಟು ಇಲ್ಲದ ಹಾಗೆ ನೋಡಿ

ಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಜನಗಳಿಗೆ ಕುಡಿಯುವ ನೀರಿನ ಜೊತೆಗೆ ದನಗಳಿಗೂ ಕೂಡ ಕುಡಿಯುವ ನೀರಿನ ತೊಂದರೆಯುಂಟಾಗಿದೆ. ಜನಗಳಿಗೆ ರಿಗ್ ಯಂತ್ರಗಳಿಂದ ಬಾವಿಗಳನ್ನು ತೆಗೆಯಿಸಿ ನೀರನ್ನು ಸುಲಭವಾಗಿ ಒದಗಿಸಬಹುದು, ಆದರೆ ದನಗಳಿಗೆ ನೀರನ್ನು ಒದಗಿಸುವುದು ಬಹಳ ಕಷ್ಟ. ಅದಕ್ಕಾಗಿ ಎಲ್ಲೆಲ್ಲಿ ಕೆರೆಗಳು ಬತ್ತಿ ಹೋಗಿವೆ, ಎಲ್ಲೆಲ್ಲಿ ನೀರು ಇಲ್ಲವೋ, ಯಾವ ಕೆರೆ ಅಂಗಳದಲ್ಲಿ ನೀರು ಸುಲಭವಾಗಿ ಮೇಲೆ ಬರುತ್ತದೆ ಎಂದು ಆಯಾ ಸ್ಥಳಗಳ ವಿದ್ಯಮಾನಗಳನ್ನು ತಿಳಿದು ಅಲ್ಲಿ ನೀರನ್ನು ಒದಗಿಸಿಕೊಡುವುದಕ್ಕೋಸ್ಕರ ಪಿಟ್ ವೆಲ್ಸ್‌ಗಳನ್ನು ತೆಗೆಯುತಕ್ಕ ಕೆಲಸವನ್ನು ಕೈಗೊಂಡಿದ್ದೇವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅನೇಕ ಕಡೆಗಳಲ್ಲಿ ಕಳೆದ ವರ್ಷ ಉತ್ತಮವಾದಂಥ ಬೆಳೆ ಆಗಿದ್ದರೂ ಕೂಡ ಜನಗಳಿಗೆ ಮೇವಿನ ಅಭಾವ ಇತ್ತು. ಮೇವಿನ ಅಭಾವವನ್ನು ತಪ್ಪಿಸುವುದಕ್ಕೋಸ್ಕರ ಹುಲ್ಲನ್ನು ಬೇರೆ ಕಡೆಗಳಿಂದ ತರಿಸುವುದಕ್ಕೋಸ್ಕರ, ಇದಕ್ಕೆ ತಗಲತಕ್ಕ ಖರ್ಚನ್ನು ಸರ್ಕಾರವೇ ಕೊಡಬೇಕೆಂದು ತೀರ್ಮಾನ ಮಾಡಿ ನಾವು ಅಧಿಕಾರಿಗಳಿಗೆ ತಿಳಿಸಿದ್ದೇವೆ ಹುಲ್ಲನ್ನು ಸಾಗಿಸಿಕೊಂಡು ಬರತಕ್ಕ ಕಾಲದಲ್ಲಿ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಲಾರಿಗಳನ್ನಾಗಲೀ, ತಾಲ್ಲೂಕು ಸೊಸೈಟಿಗಳ ಲಾರಿಗಳನ್ನಾಗಲೀ ಉಪಯೋಗಿಸಿಕೊಂಡು ಹುಲ್ಲನ್ನು ತರಬೇಕು ಎಂದು ಸರ್ಕಾರದಿಂದ ಆಜ್ಞೆಯನ್ನು ಮಾಡಿ ಅಧಿಕಾರಿಗಳಿಗೆ ತಿಳಿಸಿದ್ದೇವೆ ಇದಕ್ಕೆ ತಕ್ಕ ಕಾರ್ಯಕ್ರಮವನ್ನೂ ನಾವು ಕೈಕೊಂಡಿದ್ದೇವೆ.

ನಾನು ಮೊದಲೇ ಹೇಳಿದ ಹಾಗೆ, ಬಡ್ಜೆಟ್ಟಿನಲ್ಲಿ ಯಾವ ಯಾವ ಕೆಲಸಗಳು ಮಂಜೂರು ಆಗಿದ್ದವೋ, ಯಾವ ಯಾವ ಕೆಲಸಗಳಿಗೆ ಹಣವನ್ನು ಒದಗಿಸಿದ್ದರೋ ಆ ಕೆಲಸಗಳನ್ನೆಲ್ಲಾ ಈಗ ತೆಗೆದುಕೊಂಡು ಜನಗಳಿಗೆ ಉದ್ಯೋಗವನ್ನು ಒದಗಿಸುವಂಥ ಒಂದು ಕಾರ್ಯಕ್ರಮವನ್ನು ನಾವು ಕೈಕೊಂಡಿದ್ದೇವೆ. ಈ ಪ್ರಕಾರ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೆಲಸಕಾರ್ಯಗಳು ನಡೆಯುತ್ತಿವೆ. ಈ ರೀತಿಯಾಗಿ ನಮ್ಮ ಕೆಲಸಕಾರ್ಯಗಳು ನಡೆಯುತ್ತಾ ಇರುವಾಗ ಕೇಂದ್ರ ಸರ್ಕಾರದವರ ಸಹಾಯ ನಮಗೆ ಆವಶ್ಯಕ ಎಂದು ನಮಗೆ ಕಂಡುಬಂದಿದ್ದರಿಂದ ಕೇಂದ್ರ ಮಂತ್ರಿಗಳಾದ ಶ್ರೀ ಶಿಂಧೆ ಅವರು ಇಲ್ಲಿಗೆ ಬಂದಿದ್ದಾಗ ನಮ್ಮ ಪರಿಸ್ಥಿತಿಯನ್ನು ಅವರಿಗೆ ತಿಳಿಸಿದ್ದೆವು. ಅವರು ಇಲ್ಲಿಂದ ಹೋದ ಕೆಲವು ದಿವಸಗಳಲ್ಲಿ ಒಂದು ಸ್ಟಡಿ ಟೀಮು ಅನ್ನು ಇಲ್ಲಿಗೆ ಕಳುಹಿಸಿ ಅಭಾವ ಇರತಕ್ಕ ಅನೇಕ ತಾಲ್ಲೂಕುಗಳಲ್ಲಿ ಅವರೇ ಖುದ್ದಾಗಿ ಪರಿಶೀಲನೆ ಮಾಡಿ ಅಲ್ಲಿರುವ ಸ್ಥಿತಿಯನ್ನು ತಿಳಿದುಕೊಂಡು ಬಂದಿದ್ದಾರೆ. ಅವರ ಜೊತೆಯಲ್ಲಿ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಇದ್ದರು. ಅಲ್ಲದೆ ಆ ಟೀಮ್‌ನವರ ಜೊತೆಯಲ್ಲಿ ನಾನೂ ಕೂಡ ಪ್ರವಾಸ ಮಾಡಿ ಅಲ್ಲಿ ಇರತಕ್ಕಂಥಾ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದುಕೊಂಡು ಬರುವುದಕ್ಕೆ ಅವಕಾಶ ಮಾಡಿದೆ. ಅನಂತರ ಇಲ್ಲಿಂದ ಹೋದ ಮೇಲೆ ಅವರು ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಬಂದಂಥಾ ಸಂದರ್ಭದಲ್ಲಿ ನಾವೂ ಕೂಡ ಅವರಿಗೆ ಒಂದು ಮನವಿಯನ್ನು ಕೊಟ್ಟಿದ್ದೇವೆ. ಈ ಮೊದಲನೇ ಮನವಿಯಲ್ಲಿ ನಮಗೆ ೧೪ ಕೋಟಿ ರೂಪಾಯಿಗಳು ಅಷ್ಟು ಬೇಕಾಗಿದೆ ಎಂದು ಕೊಟ್ಟಿದ್ದೆವು. ಏತಕ್ಕೆಂದರೆ ನಾನು ಮೇಲೆ ಹೇಳಿದ ಹಾಗೆ ಮೊದಲು ಬರೇ ೩೨ ತಾಲ್ಲೂಕುಗಳಲ್ಲಿ ಮಾತ್ರ ಪರಿಸ್ಥಿತಿ ಕೆಟ್ಟಿತ್ತು. ಅನಂತರ ೪೫ ತಾಲ್ಲೂಕುಗಳಲ್ಲಿ ವಿಸ್ತರಿಸಿತು. ಅನಂತರ ೬೨ ತಾಲ್ಲೂಕುಗಳಿಗೆ ಈ ಪರಿಸ್ಥಿತಿ ವಿಸ್ತರಿಸಿತು ಅನಂತರ ೭೨ ತಾಲ್ಲೂಕುಗಳಿಗೆ ವಿಸ್ತರಿಸಿತು, ಈ ೮೨ ತಾಲ್ಲೂಕುಗಳಿಗೂ ನಾವು ಗಮನ ಕೊಡಬೇಕಾಯಿತು. ಈಗ ರಾಜ್ಯದಲ್ಲ ೧೦೪ ತಾಲ್ಲೂಕುಗಳಲ್ಲಿ ಈ ಅಭಾವ ಪರಿಸ್ಥಿತಿ ಉಂಟಾಗಿದೆ. ಯಾವಾಗ ೮೨ ತಾಲ್ಲೂಕುಗಳಲ್ಲಿ ಏನು ಅಭಾವ ಪರಿಸ್ಥಿತಿ ಉಂಟಾಯಿತೋ ಅದಕ್ಕೆ ೨೧½ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಎರಡನೇ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟೆವು. ಈ ರೀತಿಯಾಗಿ ಎರಡನೇ ಮನವಿಯನ್ನು ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟ ಮೇಲೆ ನಂತರ ಮಳೆ ಬರಬಹುದು ಎಂದು ತಿಳಿದಿದ್ದೆವು. ಆವಾಗಲೂ ಮಳೆ ಬರಲಿಲ್ಲ. ಸಕಾಲದಲ್ಲಿ ಬಿತ್ತನೆ ಮಾಡುವುದಕ್ಕೆ ಹಿಂಗಾರಿನ ಮಳೆಯೂ ಬರಲಿಲ್ಲ, ಆದುದರಿಂದ ಸಕಾಲದಲ್ಲಿ ಬಿತ್ತನೆ ಮಾಡುವುದಕ್ಕೆ ಆಗಲಿಲ್ಲ.

2-00 P. M.

ಇನ್ನು ಕೆಲವು ಜಿಲ್ಲೆಗಳಲ್ಲಿ ರಾಗಿ ಬೆಳೆ ಇದ್ದದ್ದು ಅದೂ ಕೂಡ ಒಣಗಿ ಹೋಗತಕ್ಕಂಥಾ ಪರಿಸ್ಥಿತಿ ಉಂಟಾಯಿತು. ನಾವು ಈ ಮಳೆಯಾದರೂ ಬರುತ್ತದೆ ಸಾಕಷ್ಟು ಚೇತರಿಸಿಕೊಳ್ಳಬಹುದು ಎಂದು ಏನು ತಿಳಿದುಕೊಂಡಿದ್ದೆವೋ ಅದು ಆಗಲಿಲ್ಲ. ನಮ್ಮ ಅದೃಷ್ಟವೋ ಏನೋ ಈಗ ಮತ್ತೆ ೪-೫ ದಿವಸದ ಹಿಂದೆ ಸ್ವಲ್ಪ ಭಾಗದಲ್ಲಿ ಮಳೆಯಾಗಿದೆ. ಕೆಲವು ಕಡೆ ನಿಜವಾಗಿಯೂ ಇದರಿಂದ ಸ್ವಲ್ಪ ಪ್ರಯೋಜನಾಗಿದೆ

ಆದರೆ ಎಲ್ಲಾ ಕಡೆಯೂ ಪ್ರಯೋಜನ ನಾವು ಗಮನ ಇಡತಕ್ಕಂಥಾ ರೀತಿಯಲ್ಲಿ ಹೆಚ್ಚಿಗೆ ಆಗಿಲ್ಲ. ಮತ್ತು ಈ ಮಳೆಯಿಂದ ಕೆರೆಗಳಿಗೆ ನೀರು ಬರುವಷ್ಟು ಪ್ರಯೋಜನ ಆಗಿಲ್ಲ. ಅನೇಕ ಜಿಲ್ಲೆಗಳಲ್ಲಿ ನೀರಿಗೆ ತೊಂದರೆಯಾಗಿರುವುದೂ ಉಂಟು. ನಮ್ಮ ರಾಜ್ಯದಲ್ಲಿ ಒಟ್ಟು ೧೨ ಸಾವಿರ ಕೆರೆಗಳು ಇವೆ. ಈ ೧೨ ಸಾವಿರ ಕೆರೆಗಳಲ್ಲೂ ಕೂಡ ಯಾವ ಕೆರೆಯಲ್ಲೂ ಕೂಡ ನೀರು ಬರಲಿಲ್ಲ. ಅಲ್ಪಸ್ವಲ್ಪ ನೀರು ಬಂದಿದ್ದ ಕಡೆ ಭತ್ತ ಫಸಲಿಗೆ ನೀರು ಕೊಡುವುದಕ್ಕೆ ಸಹಾಯವಾಗಿದೆ, ಆದರೆ ಖುಷ್ಕಿ ಫಸಲಿಗೆ ಸಹಾಯವಾಗಿಲ್ಲ. ನಮ್ಮ ರಾಜ್ಯದಲ್ಲಿ ಈ ೧೨ ಸಾವಿರ ಎಕರೆಗಳಲ್ಲಿ ಇರತಕ್ಕಂಥಾ ತರೀ ಜಮೀನಿನ ವಿಸ್ತೀರ್ಣ ಸುಮಾರು ೧೦ ಲಕ್ಷ ಎಕರೆ ಇದೆ ೧೦ ಲಕ್ಷ ಎಕರೆ ತರೀ ಜಮೀನಿಗೆ ನೀರು ಇಲ್ಲದೇ ಹೋದರೆ ರಾಜ್ಯದಲ್ಲಿ ಎಷ್ಟು ತೊಂದರೆಯಾಗಬಹುದು ಅದನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈ ಕಡೆ ತರೀ ಬೆಳೆಯೂ ಇಲ್ಲ, ಆ ಕಡೆ ಖುಷ್ಕಿ ಬೆಳೆಯೂ ಇಲ್ಲ. ಇಷ್ಟೇ ಅಲ್ಲದೆ ಎಷ್ಟೋ ಜಮೀನಿಗಳಲ್ಲಿ ಬಿತ್ತನೇ ಮಾಡದೇ ಇರತಕ್ಕಂಥಾ ಪರಿಸ್ಥಿತಿಯೂಕೂಡ ಇದೆ. ಈಗಾಗಲೇ ನಾವು ಸುಮಾರು ೧೩–೧೪ ಕೋಟಿರೂಪಾಯಿನವರೆಗೆ ನಾನಾ ಭಾಗಕ್ಕೆ ನಾನಾ ಇಲಾಖೆಗಳ ಮುಖಾಂತರ ಖರ್ಚು ಮಾಡಿದ್ದೇವೆ ಯಾವ್ಯಾವುದಕ್ಕೆ ಖರ್ಚು ಮಾಡಿದ್ದೇವೆ ಎಂದರೆ ಮೈನರ್ ಇರ್ರಿಗೇಷನ್‌ಗೆ ಸುಮಾರು ೪ ಕೋಟಿ ೭೮ ಲಕ್ಷ ರೂಪಾಯಿ ರೂರಲ್ ಕಮ್ಯೂನಿಕೇಷನ್‌ಗೆ ೪ ಕೋಟಿ ೯೦ ಲಕ್ಷ ರೂಪಾಯಿ ಸಾಯಿಲ್ ಕನ್‌ಸರ್ವೇಷನ್‌ಗೆ ೧ ಕೋಟಿ ೨ ಲಕ್ಷ ರೂಪಾಯಿ ಅಫಾರ್‌ಸ್ಟೇಷನ್‌ಗೆ ೧ ಕೋಟಿ ೪ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದರ ಜೊತೆಗೆ ೨೮ನೇ ಸ್ಕೇರ್ಸಿಟಿ ರಿಲೀಫ್‌ನಿಂದ ಸುಮಾರು ೧$\frac{3}{4}$ ಕೋಟಿ ರೂಪಾಯಿ ಒದಗಿಸಿ ಇಷ್ಟು ಹಣವನ್ನು ಖರ್ಚು ಮಾಡಿದೇವೆ. ಇದರ ಜೊತೆಗೆ ಮೊನ್ನೆತಾನೇ ಮತ್ತಷ್ಟು ಹಣವನ್ನು ಒದಗಿಸಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದೆಲ್ಲಾ ನಾರ್ಮಲ್ ಬಡ್ಜೆಟ್‌ನಲ್ಲಿ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಬಡ್ಜೆಟ್‌ನಲ್ಲಿ ಎಷ್ಟು ಹಣ ಒದಗಿಸಿದ್ದೇನೆ, ಎಷ್ಟು ಖರ್ಚು ಮಾಡಿದ್ದಾರೆ ಅಂತ ಹೇಳಿದ್ದೇನೆ. ಬಡ್ಜೆಟ್‌ನಲ್ಲಿ ಪ್ಲಾನ್‌ನಲ್ಲಿ ಒದಗಿಸತಕ್ಕಂಥಾ ಹಣ ಮೇಜರ್ ಇರ್ರಿಗೇಷನ್‌ಗೆ – ಕೋಟಿ ರೂಪಾಯಿ ಮೈನರ್ ಇರ್ರಿಗೇಷನ್‌ಗೆ ೨ ಕೋಟಿ ರೂಪಾಯಿ ಈ ಕೆಲಸವನ್ನು ಮತ್ತಷ್ಟು ತೆಗೆದುಕೊಳ್ಳಬೇಕು ಮತ್ತೆ ಹಣವನ್ನು ಒದಗಿಸಿದ್ದೇವೆ. ಇಷ್ಟೇ ಅಲ್ಲದೆ ಈ ಅಭಾವ ಇರತಕ್ಕಂಥಾ ತಾಲ್ಲೂಕುಗಳಲ್ಲಿ ಸರ್ಕಾರಕ್ಕೆ ಅವರು ಕೊಡಬೇಕಾದಂಥಾ ಕಂದಾಯ, ಬೆಟರ್‌ಮೆಂಟ್ ಲೆವಿ ಮತ್ತು ವಾಟರ್‌ರೇಟ್ ಇದನ್ನು ವಸೂಲ್ ಮಾಡ ಕೂಡದು ಎಂದು ಮಾಡಿದ್ದೇವೆ ಮೊದಲು ಇದನ್ನು ಸ್ಲೋ–ಡೌನ್ ಆಗಿ ವಸೂಲ್ಮಾಡಬೇಡಿ ಎಂದು ಹೇಳಿದ್ದೆವು ಅನಂತರ ಪರಿಸ್ಥಿತಿ ಗೊತ್ತಾದ ಮೇಲೆ ಇದನ್ನು ವಸುಲ್ಮಾಡಬೇಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇನೆ. ನಮ್ಮ ರೆವಿನ್ಯೂ ಇಲಾಖೆ ಜೊತೆಗೆ ಸಹಕಾರಿ ಇಲಾಖೆಯವರು ಅವರು ಒಂದು ಆಜ್ಞೆಯನ್ನು ಹೊರಡಿಸಿ ಅವರು ತಮ್ಮ ಒಂದು ವಸೂಲಿ ಕ್ರಮವನ್ನು ಕೂಡ ನಿಲ್ಲಿಸುವುದಕ್ಕೆ ಕಾರ್ಯಕ್ರಮ ಕೈಗೊಂಡಿದ್ದಾರೆ.

ಇನ್ನು ಇದರ ಜೊತೆಗೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರು ಕೂಡ ತಮಗೆ ಸೇರಿರತಕ್ಕಂಥಾ ನೀರಾವರಿ ಕಾಮಗಾರಿಗಳನ್ನು ಕೂಡ ೧೦ ಎಕರೆ ಕಡಿಮೆ ಇರತಕ್ಕಂಥಾ ಕೆರೆಗಳಿಗೆ ೫೦ ಲಕ್ಷ ರೂಪಾಯಿ ಹಣವನ್ನು ಒದಗಿಸಿ ಅವರೂ ಕೂಡ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ತಿಳಿಸಿದ್ದೇವೆ.

ಇನ್ನು ಭೂ ಅಭಿವೃದ್ಧಿ ಬ್ಯಾಂಕ್‌ನವರು ಇರ್ರಿಗೇಷನ್ ವೆಲ್ಸ್‌ಗೆ ಏನು ಹಣ ಕೊಟ್ಟಿದ್ದರೋ ಅದನ್ನೆಲ್ಲಾ ಪೂರ್ಣ ಮಾಡಬೇಕು ಎಂದು ಅವರಿಗೆ ತಿಳಿಸಿದ್ದೇನೆ. ಇನ್ನು ಖಾದಿ ವಿಲೇಜಸ್ ಅಂಡ್ ಬೋರ್ಡ್‌ನವರು ಚರಕಗಳನ್ನು ಕೊಟ್ಟು ಕೆಲವರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರು ಈ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಇನ್ನು ಇದರ ಜೊತೆಗೆ ವಿದ್ಯುತ್ ಇಲಾಖೆಯವರಿಗೆ ತಿಳಿಸಿದ್ದೇನೆ ನೀರಾವರಿ ಆಗಿರತಕ್ಕಂಥಾ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ನೀರಾವರಿ ಬಾವಿಗಳು ಪೂರ್ಣವಾಗಿದೆಯೋ ಅಂಥಾ ಕಡೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಪ್ರಾಮುಖ್ಯತೆ ಕೊಡಿ ಎಂದು ತಿಳಿಸಿದ್ದೇನೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಅವರಿಂದಲೂ ಕೂಡ ಅಲ್ಲಲ್ಲಿ ಹೆಚ್ಚೆಚ್ಚು ಕೆಲಸ ನಡೆದಿದೆ. ಹೆಚ್ಚು ಹೆಚ್ಚು ಜನರಿಗೆ ಉದ್ಯೋಗ ಒದಗಿಸತಕ್ಕಂಥಾ ಕೆಲಸ ಇದರಿಂದ ಆಗಿದೆ. ಈಗ ಇರುವ ಹಾಗೆ 923 ಸೆಂಟರ್ಸ್‌ನಲ್ಲಿ ಕೆಲಸ ಆಗಿದೆ. 8–11–1976ರ ಒಂದು ಅಂಕಿ ಅಂಶದ ಪ್ರಕಾರ 84 ಸಾವಿರದ 264 ಜನ ಕೆಲಸ ಮಾಡುತ್ತಾ ಇದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನರು ಕೆಲಸ ಮಾಡುತ್ತಿದ್ದಾರೆ, ಎಷ್ಟೆಷ್ಟು ಸೆಂಟರ್ಸ್‌ಗಳು ಇವೆ ಅನ್ನುವ ವಿವರಗಳು ಅವಶ್ಯಕವಾಗಿ ಕಂಡುಬಂದರೆ, ಮಾನ್ಯ ಸದಸ್ಯರು ಅಪೇಕ್ಷೆಪಟ್ಟರೆ ಅದನ್ನೂ ಕೂಡ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಮತ್ತೆ ಆ ಭಾಗದಲ್ಲಿ ಆಹಾರ ಧಾನ್ಯವನ್ನೂ ಕೂಡ ಒದಗಿಸಿಕೊಡತಕ್ಕಂಥಾ ವ್ಯವಸ್ಥೆಯೂ ಕೂಡ ಆಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಹಳ್ಳಿಗಾಡಿನಲ್ಲಿ ಸೊಸೈಟಿಗಳಿಗೆ ಹಣವನ್ನು ಒದಗಿಸಿ ಆ ಮುಖಾಂತರ ಆಹಾರ ಧಾನ್ಯವನ್ನು ಅವರು ಕೊಂಡುಕೊಂಡು ಬಂದು ಅವರಿಗೆ ಹಂಚುವುದಕ್ಕೆ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದ್ದೇನೆ. ಇದರ ಜೊತೆಗೆ ಇನ್ನೆಷ್ಟು ಜನರಿಗೆ ಕೆಲಸವನ್ನು ಒದಗಿಸಿ ಕೊಡಬೇಕು ಅದರ ಬಗ್ಗೆ ಒಂದು ಅಂದಾಜು ಮಾಡುತ್ತಿದ್ದಾರೆ. 1972-73 ರಲ್ಲಿ ಉಂಟಾಗಿದ್ದ ಅಭಾವ ಪರಿಸ್ಥಿತಿಗೂ 1973-74 ರಲ್ಲಿ ಉಂಟಾಗಿದ್ದ ಪರಿಸ್ಥಿತಿಗೂ ಮತ್ತು ಈಗ ಯಾವ ಪರಿಸ್ಥಿತಿ ಇದೆ, ಇದರಿಂದ ಎಷ್ಟು ಜನರು ತೊಂದರೆಗೆ ಈಡಾಗಿದ್ದಾರೆ ಎನ್ನುವುದನ್ನು ಈ ಮಾನ್ಯ ಸಭೆಯ ಮುಂದೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಈಗ ಒಟ್ಟು ಒಂದು ಕೋಟಿ 19 ಲಕ್ಷ ಜನರಿಗೆ ತೊಂದರೆ ಉಂಟಾಗಿದೆ. ಈಗ ತೊಂದರೆಗೆ ಈಡಾಗಿರುವ ತಾಲ್ಲೂಕುಗಳಲ್ಲಿ ನಾವು ಸಂಗ್ರಹ ಮಾಡಿರುವ ಅಂಕಿ ಅಂಶಗಳ ಪ್ರಕಾರ 23,65,628 ಜನ ವ್ಯವಸಾಯದ ಕೂಲಿಗಾರರಿದ್ದಾರೆ. ಇವರ ಪೈಕಿ 10,82,905 ಜನರು ತೊಂದರೆಗೆ ಈಡಾಗಿದ್ದಾರೆ.

ಇನ್ನು ಟೇಬಲ್-2ರಲ್ಲಿ ಹೇಳಿರುವ ಪ್ರಕಾರ, 1972-73ರಲಿ 104.19 ಲಕ್ಷ ಜನರು ತೊಂದರೆಗೆ ಈಡಾಗಿದ್ದರು. 1973-74ರಲ್ಲಿ 82.02 ಲಕ್ಷ ಜನರು ತೊಂದರೆಗೆ ಈಡಾಗಿದ್ದರು. ಈಗ ಅದು 119 ಲಕ್ಷವಾಗಿದೆ. ಮುಂದಿನ ವರ್ಷದ ಮಾರ್ಚಿ ತಿಂಗಳ ಹೊತ್ತಿಗೆ ನಾವು 3 ಲಕ್ಷದ 35 ಸಾವಿರದ 550 ಜನರಿಗೆ ಉದ್ಯೋಗ ಒದಗಿಸಿಕೊಡಬೇಕಾಗಬಹುದೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈಗ ಹಾಲಿ ನವೆಂಬರ್ ತಿಂಗಳಲ್ಲಿ 2 ಲಕ್ಷದ 31 ಸಾವಿರದ 339 ಜನರಿಗೆ ಕೆಲಸ ಒದಗಿಸಿದ್ದೇವೆ. ಇದರ ಜೊತೆಗೆ ತೊಂದರೆಗೆ ಈಡಾಗಿರುವ ತಾಲ್ಲೂಕಗಳಲ್ಲಿರತಕ್ಕಂಥ ಸಣ್ಣ ಸಣ್ಣ ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಕೊಂಡು ಮುಗಿಸಬೇಕೆಂದಿದ್ದೇವೆ. ಸುಮಾರು 15 ಕೋಟಿ ರೂಪಾಯಿಗಳಷ್ಟು ಕೆಲಸಗಳಿವೆ. ಈ ಬಗ್ಗೆ ಒಂದು ಪಟ್ಟಿ ಮಾಡಿ, ಅದಕ್ಕೆ ಬೇಕಾದ ಅಂದಾಜುಗಳನ್ನು ತಯಾರು ಮಾಡಿ ಸಿದ್ಧವಾಗಿ ಇಡ ಬೇಕೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಅವರು ವಿವರಗಳನ್ನೆಲ್ಲಾ ತರಿಸಿ ಇನ್ನು ಒಂದು ವಾರ ದೊಳಗಾಗಿ ಪಟ್ಟಿ ತಯಾರು ಮಾಡುವವರಿದ್ದಾರೆ. ಇನ್ನು ಸಾಯಿಲ್ ಕನ್ಸರ್‌ವೇಷನ್ ಸೆಂಟರ್‌ಗಳನ್ನು ಹೆಚ್ಚಾಗಿ ಮಾಡಬೇಕಾಗಿ ಬರಬಹುದು. ಒಟ್ಟಿನಲ್ಲಿ ತೊಂದರೆಗೆ ಈಡಾಗಿರುವವರಿಗೆಲ್ಲಾ ಉದ್ಯೋಗ ಒದಗಿಸುವಂತಹ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಮತ್ತು ಅದರಂತೆ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸಭೆಗೆ ತಿಳಿಸಬೇಕೆಂದರೆ, ಪ್ರತಿವಾರವೂ ಮಂತ್ರಿಮಂಡಲದ ಸಭೆ ಸೇರುತ್ತದೆ. ಅದರ ಹಿಂದಿನ ದಿವಸ ನಾವು ತೊಂದರೆಗೆ ಈಡಾಗಿರುವ ತಾಲ್ಲೂಕಿನಲ್ಲಿ ಏನೇನು ತೊಂದರೆ ಇದೆ, ಕೂಡಲೇ ಏನು ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ ಎಂಬುದನ್ನೆಲ್ಲಾ ಅಧಿಕಾರಿಗಳ ಜೊತೆ ಅಂಕಿಅಂಶಗಳನ್ನು ತರಿಸಿಕೊಂಡು ಚರ್ಚೆ ಮಾಡಿ ನಂತರ ಪ್ರತಿ ಮಂತ್ರಿಮಂಡಲದ ಸಭೆಯ ಮುಂದೆಯೂ ಸಹ ಚರ್ಚೆ ಮಾಡಿ ಮುಂದಿನ ಕಾರ್ಯಕ್ರಮ ಕೈಕೊಳ್ಳುತ್ತಿದ್ದೇವೆ. ಮಾನ್ಯ ಸಭೆಗೆ ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ಏನೆಂದರೆ, ಸರ್ಕಾರಕ್ಕೆ ಎಷ್ಟೇ ಕಷ್ಟವಾಗಲೀ, ಎಷ್ಟೇ ಕೋಟಿ ರೂಪಾಯಿಗಳು ಖರ್ಚಾಗಲಿ, ಅದಕ್ಕೆ ಹಿಂದೆಗೆಯದೆ ಎಷ್ಟು ಜನರಿಗೆ ಬೇಕಾದರೂ ಕೆಲಸ ಒದಗಿಸುವುದಕ್ಕೆ ನಾವು ಸರ್ವ ಸಿದ್ಧತೆಯನ್ನು ಮಾಡಿ ಕೊಳ್ಳುತ್ತಿದ್ದೇವೆ. ಆದ ಕಾರಣ ಮಾನ್ಯ ಸದಸ್ಯರೂ ಸಹ ತಮ್ಮ ತಮ್ಮ ಕ್ಷೇತ್ರ ಗಳಲ್ಲಿ ಏನೇನು ತೊಂದರೆಗಳಿವೆ, ಎಷ್ಟು ಜನರಿಗೆ ಉದ್ಯೋಗ ಒದಗಿಸಬೇಕಾಗಿದೆ, ನೀರಿನ ತೊಂದರೆ ಏನಾದರೂ ಇದೆಯೇ ಎಂಬುದನ್ನೆಲ್ಲಾ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ತಮ್ಮುಗಳ ಸಲಹೆಯನ್ನು ಪಡೆಯುವುದಕ್ಕಾಗಿಯೇ ಈ ಸಭೆಯ ಮುಂದೆ ಈ ಚರ್ಚೆಯ ವಿಷಯವನ್ನು ನಾನು ಮಂಡಿಸಿದ್ದೇನೆ. ತಾವು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಸಚಿವರು ಕೆಲವು ಅಂಕಿಅಂಶಗಳನ್ನು ಕೊಟ್ಟರು. ಏನೆಂದರೆ 119 ಲಕ್ಷ ಜನರು ಬರಗಾಲ ಪೀಡಿತ ಪ್ರದೇಶಗಳಲ್ಲಿದ್ದಾರೆ, ಇವರ ಪೈಕಿ ವ್ಯವಸಾಯದ ಕೂಲಿಗಾರರು 10,82,905 ಜನರಿದ್ದಾರೆ. ಇವರುಗಳ ಪೈಕಿ 3 ಲಕ್ಷದ 35 ಸಾವಿರ ಜನರಿಗೆ ಉದ್ಯೋಗ ಒದಗಿಸಬೇಕಾಗಿದೆ ಎಂದು ಹೇಳಿದರು. ಅಂದರೆ ಇನ್ನುಳಿದ ಜನರು ಯಾವ ರೀತಿ ಜೀವನ ಮಾಡಬೇಕೆಂಬ ಬಗ್ಗೆ ವಿವರಣೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—10 ಲಕ್ಷದ ವರೆಗೆ ವ್ಯವಸಾಯದ ಕೂಲಿಗಾರರಿದ್ದರೂ ಸಹ 3ರಿಂದ ಮೂರೂವರೆ ಲಕ್ಷ ಜನರಿಗೆ ಉದ್ಯೋಗ ಒದಗಿಸಬೇಕಾಗಿ ಬರಬಹುದೆಂದು ನಾವು ಇಷ್ಟು ವರ್ಷಗಳ ಒಂದು ಅನುಭವದಿಂದ ಒಂದು ಅಂದಾಜು ಮಾಡಿದ್ದೇವೆ. ಕೆಲವರಿಗೆ ಬೇರೆ ಕಡೆ ಉದ್ಯೋಗ ಮಾಡಲು ಅವಕಾಶವಿರುವ ಸಾಧ್ಯತೆಯೂ ಸಹ ಇರುತ್ತದೆ. ಮತ್ತೆ ಕೆಲವರಿಗೆ ವ್ಯವಸಾಯಗಾರರ ಹತ್ತಿರವೇ ಕೆಲಸ ಸಿಗುವ ಸಂದರ್ಭವಿರುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—10,20,25 ಲಕ್ಷದವರೆಗೂ ಸಹ ಜನರು ಕೆಲಸ ಒದಗಿಸಿ ಎಂದು ಮುಂದೆ ಬಂದರೆ ಅಷ್ಟು ಜನರಿಗೂ ಉದ್ಯೋಗ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಎಷ್ಟು ಲಕ್ಷ ಜನರಿಗೆ ಉದ್ಯೋಗ ಒದಗುವಂತಹ ಅವಶ್ಯಕತೆ ಕಂಡುಬಂದರೂ ಸಹ ಅವರಿಗೆಲ್ಲಾ ಒದಗಿಸಲು ನಾವು ಸಿದ್ಧತೆ ಮಾಡಿಕೊಂಡಿದ್ದೇವೆ. ಜೊತೆಗೆ ನಾವು ಕೇಂದ್ರದಿಂದ ಹೆಚ್ಚು ಹೆಚ್ಚು ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಮಗೆ ಕೇಂದ್ರದಿಂದ ಸಹಾಯ ಸಿಕ್ಕಲಿ, ಅಥವಾ ಸಿಕ್ಕದಿರಲಿ, ರಾಜ್ಯ ಸರ್ಕಾರ ಈ ಕೆಲಸ ಮಾಡುವುದಕ್ಕೆ ಸಿದ್ಧವಾಗಿದೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ವಿ. ಎಂ. ಘಾಡಿ.—ಕಾರವಾರದ ಹೆಸರು ಈ ಪಟ್ಟಿಯಲ್ಲಿ ಇಲ್ಲ. ಅಲ್ಲಿಯೂ ಮಳೆಯಾಗದೆ ನಾಲ್ಕೈದು ಭತ್ತದ ಬೆಳೆ ಹಾಳಾಗಿದೆ. ಹಳಿಯಾಳ, ಸೂಪ ಮುಂತಾದ 3-4 ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಬಾದಿದೆ. ಆದಕಾರಣ ಈ ಬಗ್ಗೆ ಆ ಜಿಲ್ಲೆಯಿಂದ ವರದಿ ಬಂದಿದೆಯೋ ಹೇಗೆ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಲ್ಲಿ ಒಂದು ವಿಷಯ ಅರಿಕೆ ಮಾಡಿಕೊಳ್ಳುತ್ತೇನೆ; ಏನೆಂದರೆ ಅವರವರ ತಾಲ್ಲೂಕುಗಳು ತೀರ ಕೆಟ್ಟು ಹೋಗಿವೆ ಎಂದು ಹೇಳುವುದು ಒಂದು ಅಭಿಪ್ರಾಯ. ಅವರ ತಾಲ್ಲೂಕು ಕೆಟ್ಟಿದ್ದರೂ ಸಹ, ಅವರ ಪಕ್ಕದ ತಾಲ್ಲೂಕಿಗೆ ಹೋಲಿಸಿನೋಡಿ ಯಾರ ತಾಲ್ಲೂಕು ಹೆಚ್ಚಿನ ತೊಂದರೆಗೆ ಈಡಾಗಿದೆ ಎಂದು ತಿಳಿದು ಹೇಳುವುದು ಇನ್ನೊಂದು ಅಭಿಪ್ರಾಯ. ಆದಕಾರಣ ಪಕ್ಕದ ತಾಲ್ಲೂಕಿನವರಿಗೆ ಹೆಚ್ಚಿನ ತೊಂದರೆಯಿದ್ದರೂ ಸಹ ತಮಗೇ ಹೆಚ್ಚಿನ ತೊಂದರೆಯಾಗಿದೆ ಎಂದು ಉತ್ಪ್ರೇಕ್ಷೆ ಮಾಡುವುದಕ್ಕೆ ಬದಲು ಇತರಕ್ಕಂಥ ನೈಜ ಪರಿಸ್ಥಿತಿಯನ್ನು ತಿಳಿಸಬೇಕು. ನಾವೂ ಸಹ ನಮ್ಮ ಅಧಿಕಾರಿಗಳ ಮೂಲಕ ನೈಜ ಪರಿಸ್ಥಿತಿಯನ್ನು ತಿಳಿದುಕೊಂಡಿದ್ದೇವೆ. ನಾನು ನಿಜವಾದಂಥ ಸ್ಥಿತಿಯನ್ನು ಒತ್ತಿ ಹೇಳುತ್ತಿದ್ದೇನೆ. ಏನೆಂದರೆ, ಯಾವ ತಾಲ್ಲೂಕುಗಳ ಜನರಿಗೆ ಕೂಡಲೇ ಉದ್ಯೋಗ ಒದಗಿಸುವಂತಹ ಪರಿಸ್ಥಿತಿ ಬಂದಿದೆಯೋ ಅಂತಹವರಿಗೆ ಮೊದಲು ದೊರಕಿಸಿ ಇನ್ನು ಕೆಲವರಿಗೆ ಒಂದೆರಡು ತಿಂಗಳಾದ ಮೇಲೆ ಉದ್ಯೋಗ ಒದಗಿಸಿದರೂ ಪರವಾಗಿಲ್ಲವೋ ಅಂತಹ ವಿಷಯವನ್ನು ಕಡೆಯಲ್ಲಿ ತೆಗೆದುಕೊಳ್ಳಬೇಕು ಎಂಬ ದೃಷ್ಟಿಯಿಂದ ಚರ್ಚೆ ಮಾಡಿದರೆ ಸರ್ಕಾರಕ್ಕೆ ಬಹಳ ಸಹಾಯವಾಗುತ್ತದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಯಾವ ರೂಪದಲ್ಲಿದೆ ಎಂಬುದನ್ನು ಸ್ವಲ್ಪ ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದಕ್ಕೆ ಕೇಂದ್ರ ಸರ್ಕಾರದ ಸಹಾಯ 1972-73 ಮತ್ತು 1973-74ರಲ್ಲಿ ಸಾಲದ ರೂಪದಲ್ಲಿ ದೊರೆಯುತ್ತಿತ್ತು. ಈ ವರ್ಷದ ಪರಿಸ್ಥಿತಿ ಹೇಗಿದೆಯೆಂದರೆ, ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖರ್ಚು ಮಾಡಬೇಕಾದಂಥ ಹಣವನ್ನು ನಮಗೆ ಮುಂಗಡವಾಗಿ ಕೊಟ್ಟು ಈ ಕೆಲಸಗಳನ್ನು ಮೊದಲೇ ಮಾಡಿ ಎಂದು ಹಣವನ್ನು ಆ ರೂಪದಲ್ಲಿ ಒದಗಿಸಿಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—6ನೇ ಫೈನಾನ್ಸ್ ಕಮಿಷನ್ ಅವರು 6ನೇ ಫ್ಯಾಮಿನ್ ಬಗ್ಗೆ ಹಣ ಕೊಡುವುದಿಲ್ಲ. ಆದಕ್ಕೇ ನೀವೇ ಫಂಡನ್ನು ಒದಗಿಸಿಕೊಳ್ಳಿ ಎಂದು ಹೇಳಿದ್ದಾರೆ. ಅದು ಹಳೆಯ ಕಥೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಕೇಳಿದ್ದಕ್ಕೆ ನಾನು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ತಮಗಲ್ಲ ಹೇಳಿದ್ದು, ಮಾನ್ಯ ಪುಟ್ಟಸ್ವಾಮಿ ಅವರಿಗೆ ಹೇಳಿದೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ ರಾಜ್ಯದಲ್ಲಿ ಉಂಟಾಗಿರತಕ್ಕಂಥ ಈ ಒಂದು ಭೀಕರ ಬರಗಾಲದ ಪರಿಸ್ಥಿತಿಯ ಬಗ್ಗೆ ಪೂರ್ಣವಾದ ಮಾಹಿತಿಯನ್ನು ಕೊಟ್ಟು ಚರ್ಚೆಮಾಡತಕ್ಕಂಥಾದ್ದಕ್ಕೆ ನನಗೆ ಅವಕಾಶವಿಲ್ಲ. ಏಕೆಂದರೆ, ರಾಜ್ಯದ ೧೨ ಅಥವಾ ೧೫ ಜಿಲ್ಲೆಗಳಲ್ಲಿ ಉಂಟಾಗಿರತಕ್ಕಂಥ ಈ ಒಂದು ಭೀಕರ ಬರಗಾಲದ ಪರಿಸ್ಥಿತಿಯ ಪೂರ್ಣ ಅರಿವು ಮಾಹಿತಿ ನನ್ನಲ್ಲಿ ಇಲ್ಲ. ಅದಕ್ಕೆ ಸರ್ಕಾರದವರೇ ಒದಗಿಸಿಕೊಟ್ಟಿರತಕ್ಕಂಥ ಅಂಕಿಅಂಶಗಳ ಮೇಲೆ ಆಧಾರವಾಗಬೇಕಾಗಿದೆ. ಆದುದರಿಂದ ನಾನಾದರೂ ನನ್ನ ಭಾಷಣದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದಾಗ ಅದು ಉತ್ಪ್ರೇಕ್ಷೆಯಿಂದ ಕೂಡಿದ್ದು ಎನ್ನತಕ್ಕಥಾದ್ದನ್ನು ಸರ್ಕಾರದವರು ಹೇಳುವುದಕ್ಕೆ ಅವಕಾಶ ಆಗಬಾರದು ಎನ್ನುವ ಮಾತನ್ನು ಪ್ರಥಮದಲ್ಲಿ ಹೇಳುತ್ತೇನೆ. ಅದಕ್ಕೆ ಕಾರಣ ತಮಗೆ ಗೊತ್ತಿದೆ. ಸರ್ಕಾರದವರು ಅದರಲ್ಲೂ ವಿರೋಧಪಕ್ಷದ ಮುಖಂಡರುಗಳಿಗೆ ಕೊಡಬೇಕಾದ ಸವಲತ್ತುಗಳನ್ನು ಅಂದರೆ ಕಾರು, ಬಂಗಲೆಯನ್ನು ಕೊಟ್ಟಿರುವುದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂದಿತ್ತು. ನಮ್ಮ ರಾಜ್ಯದ ರಾಜ್ಯಪಾಲರು ತರಾತುರಿಯಿಂದ ಹೊರಡಿಸಿದಂಥ ಆರ್ಡಿನೆನ್ಸ್‌ಗೆ ಪೂರ್ವದಲ್ಲಿ ಅಂದರೆ ೮ ತಿಂಗಳ ಮುಂಚೆ ಸರ್ಕಾರ ನನಗೆ ಎಲ್ಲಾ ಮಾನ್ಯತೆ ಗೌರವ ಕೊಟ್ಟು ರಾಜ್ಯದ ಬಂದೀಖಾನೆಗೆ ಕಳುಹಿಸಿರತಕ್ಕಂಥಾದ್ದು ತಮಗೆ ಗೊತ್ತಿರತಕ್ಕ ವಿಷಯ, ಅದರ ಬಗ್ಗೆ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುವುಕ್ಕೆ ಹೋಗುವುದಿಲ್ಲ. ಕಳೆದ ೧೦ ತಿಂಗಳಲ್ಲೇ ನಾನು ಬಂದೀಖಾನೆಯಲ್ಲಿದ್ದಾಗ ರಾಜ್ಯದ ನಾನಾ ಭಾಗಗಳಲ್ಲಿ ಉಂಟಾದಂಥ ಭೀಕರ ಬರಗಾಲದ ಪರಿಸ್ಥಿತಿಯ ಬಗ್ಗೆ ಪತ್ರಿಕೆಗಳ ಮೂಲಕ ಬರುತ್ತಾ ಇದ್ದಂಥ ಸಮಾಚಾರದ ಸುದ್ದಿಯ ಆಧಾರದ ಮೇಲೆ ಈ ರಾಜ್ಯದಲ್ಲಿ ೧೯೭೨-೭೩ರಲ್ಲಿ ಏನು ಪರಿಸ್ಥಿತಿ ಇತ್ತು ಅದಕ್ಕಿಂತ ಈಗ ಉಲ್ಬಣಾವಸ್ಥೆಯ ಪರಿಸ್ಥಿತಿ ಬಂದಿದೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಈ ಸಂಬಂಧದಲ್ಲಿ ನಾನು ಸರ್ಕಾರಕ್ಕೆ ಪತ್ರ ಕೂಡ ಬರೆದಿದ್ದೇನೆ. ದುರ್ದೈವದ ಸಂಗತಿ ಎಂದರೆ, ಚುನಾಯಿತ ಪ್ರತಿನಿಧಿಯಾಗಿರತಕ್ಕವನಿಗೆ ತನ್ನ ಕ್ಷೇತ್ರದಲ್ಲಿ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ಪತ್ರಿಕೆಗಳ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶವಿಲ್ಲ. ನಮ್ಮ ಪರಿಸ್ಥಿತಿ ಅಲ್ಲಿಗೆ ಬಂದಿದೆ. ನಾನು ತುರ್ತುಪರಿಸ್ಥಿತಿಯ ಬಗ್ಗೆ ಹೇಳತಕ್ಕಂಥಾದ್ದಲ್ಲ. ರಾಜ್ಯದಲ್ಲಿರತಕ್ಕ ಅಭಾವ ಪರಿಸ್ಥಿತಿಗೆ ಯಾರೂ ಹೊಣೆಗಾರರಲ್ಲ. ಅದಕ್ಕೆ ನೀವೂ ಹೊಣೆಗಾರರಲ್ಲ. ನಾವೂ ಹೊಣೆಗಾರರಲ್ಲ. ಪ್ರಕೃತಿ ವಿಕೋಪಕ್ಕೆ ತುತ್ತಾದಂಥ ಸನ್ನಿವೇಶವನ್ನು ಅಚ್ಚು ಹಾಕಲಿಕ್ಕೆ ಪತ್ರಿಕೆಗಳಿಗೆ ತಿಳಿಸಿದರೆ ಸರ್ಕಾರದವರು ಸೆನ್ಸಾರ್ ಆಫೀಸರಿಗೆ ಅದನ್ನು ಪ್ರಕಟಣೆ ಮಾಡಕೂಡದು ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ತಮ್ಮ ಟೀಕೆಯ ಭಾಷಣದಲ್ಲಿ ಹೇಳುತ್ತಿದ್ದರು. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನೀವು ಈ ಬರಗಾಲದ ಪರಿಸ್ಥಿತಿಯನ್ನು ಎದುರಿಸತಕ್ಕ ಬಗ್ಗೆ ಸಹಕಾರ ಹಸ್ತವನ್ನು ಕೊಡಬೇಕು ಎಂದು ಈಗತಾನೆ ಮನವಿ ಮಾಡಿದ್ದಾರೆ. ಬಹುಶಃ ಇದರಲ್ಲಿ ಸಹಕಾರವನ್ನು ಕೊಡತಕ್ಕಂಥಾದ್ದರಲ್ಲಿ ನಾವು ಹಿಂದೆ ಹೋಗತಕ್ಕವರಲ್ಲ. ಏಕೆಂದರೆ ಈ ಪರಿಸ್ಥಿತಿಯನ್ನು ಪಕ್ಷಾತೀತ ದೃಷ್ಟಿಯಿಂದ ನೋಡಬೇಕಾಗುತ್ತದೆ. ಈ ಬರಗಾಲ ಪರಿಸ್ಥಿತಿಯನ್ನು ಎದುರಿಸತಕ್ಕಂಥಾದ್ದರಲ್ಲಿ ಎಲ್ಲರೂ ಒಕ್ಕೂಟದಿಂದ ಕೆಲಸ ಮಾಡಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಆದರೆ ಆಡಳಿತ ಯಂತ್ರ ಚಾಲನೆಯಾಗುವಾಗ, ಆ ಯಂತ್ರದ ಚಾಲನೇ ಯಾವುದೇ ಒಂದು ಪಕ್ಷದ ಜಾಡಿನಲ್ಲಿ ಹೋಗತಕ್ಕಂಥಾದ್ದು ಸರಿಯಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸುವುಷಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೇ, ಕಳೆದ ಎರಡೂವರೆ ತಿಂಗಳಲ್ಲಿ ನಾನು ಸರಕಾರಕ್ಕೆ ಬರೆದ ಪತ್ರದಲ್ಲಿ ಒಂದು ಮಾತನ್ನು ತಿಳಿಸಿದ್ದೇನೆ. ಈ ತುರ್ತುಪರಿಸ್ಥಿತಿಯಲ್ಲಿ ಏನು ಅಧಿಕಾರವನ್ನು ಚಲಾಯಿಸುತ್ತಾ ಇದ್ದೀರಿ ಇದರ ಪರಿಣಾಮ ನನ್ನ ತಾಲ್ಲೂಕಿನ ಜನಗಳಿಗೆ ಶಾಪವಾಗಬಾರದು, ೧೯೭೨ರಲ್ಲಿ ಮತವನ್ನು ಕೊಟ್ಟಂಥ ಮತದಾರರು ಏನಿದ್ದಾರೆ ಅವರು ಮತವನ್ನು ಕೊಟ್ಟ ತಪ್ಪಿಗೆ ಆ ಕ್ಷೇತ್ರದ ಜನಗಳಿಗೆ ಶಾಪವಾದ ಪರಿಣಾಮ ಆಗಬಾರದು. ಸರ್ಕಾರವೇ ಇದರ ವಿಷಯವನ್ನೂ ತೆಗೆದುಕೊಂಡು ಕೆಲಸ ಮಾಡಿ ಎಂದು ಪತ್ರವನ್ನು ಬರೆದಿದ್ದೇನೆ. ಬಹುಶ ರಾಜ್ಯದ ಮುಖ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಹೋಗಿದ್ದರು ಎಂದು ಕೇಳಿದ್ದೇನೆ, ಕಳೆದ ಸೋಮವಾರ ಬೆಳಿಗ್ಗೆ ಭೇಟಿಯಾಗಿ ವಿವರ ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಅನಿರೀಕ್ಷಿತವಾಗಿ ಅಲ್ಲಿಗೆ ಭೇಟಿಕೊಟ್ಟು ವಿಷಯಗಳನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆಂದು ಕೇಳಿದ್ದೇನೆ. ಬಹುಶಃ ಈ ವಿಚಾರವನ್ನು ಅವರು ಉತ್ತರದಲ್ಲಿ ಹೇಳಬಹುದುಎಂದು ಕಾಣುತ್ತದೆ. ನಾನು ಎಲ್ಲಾ ಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ, ಮಾನ್ಯ ಮುಖ್ಯ ಮಂತ್ರಿಗಳಿಗೆ, ಕಂದಾಯ ಸಚಿವರಿಗೆ, ಹಣಕಾಸಿನ ಸಚಿವರಿಗೆ ಪತ್ರವನ್ನು ಬರೆದಿದ್ದೇನೆ. ಮಾನ್ಯ ಮಂತ್ರಿಗಳು ಧಾರವಾಡ

ಮುಂತಾದ ಕಡೆಗಳಿಂದ ಹಾಸನದ ಅಂಚಿನವರೆಗೂ ಹೋಗಿದ್ದರು ಎಂದು ಕೇಳಿಬಂತು. ತಾವು ಹಲವಾರು ಸಾರಿ ಅನೇಕ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೀರಿ. ಆದರೆ ನನ್ನ ತಾಲ್ಲೂಕಿನ ಪರಿಸ್ಥಿತಿಯನ್ನು ಅವಲೋಕನ ಮಾಡುವಾಗ ನಾನು ಬಂಧನದಲ್ಲಿದ್ದೆ, ನಾನು ಯಾವ ಸಹಕಾರಿ ಸಂಘದ ಹಣವನ್ನು ಲೂಟಿ ಹೊಡೆಯಲ್ಲಿಲ್ಲ ಬ್ಲಾಕ ಮಾರ್ಕೆಟ್ ಸಂಬಂಧ ಬೆಳೆಸಿಕೊಂಡಿರಲಿಲ್ಲ. ರಾಜ್ಯದ ಜನಗಳಿಗೆ ದ್ರೋಹವನ್ನು ಬಗೆದಿರಲಿಲ್ಲ. ನಾನು ಮಾಡಿದಂಥ ಒಂದೇ ಒಂದು ತಪ್ಪು ಏನೆಂದರೆ, ಈ ರಾಜ್ಯದಲ್ಲಿ ಸಾರ್ವಜನಿಕರು ಕೊಟ್ಟಂಥ ಹಣವನ್ನು ಸರಿಯಾಗಿ ವೆಚ್ಚಮಾಡಬೇಕು ಎಂದು ಮಾರ್ಗದರ್ಶನ ಮಾಡುವುದಕ್ಕೆ ಈ ಸದನದಿಂದ ನೇಮಕವಾದಂಥ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾಗಿ ಕೆಲಸಮಾಡತಕ್ಕಂಥ ಕಾಲದಲ್ಲಿ ಕೊಟ್ಟಂಥ ವರದಿಯ ಪರಿಣಾಮ, ನಾನು ಶಾಸನಸಭೆಯ ಕೆಲಸವನ್ನು ಮಾಡಿದ್ದಕ್ಕೆ ಯೋಗ್ಯವಾದಂಥ ಜಾಗದಲ್ಲಿ ಇಟ್ಟಿದ್ದರು ಎಂದು ಕಾಣುತ್ತದೆ ಇದರ ಬಗ್ಗೆ ಹೇಳುವುದಕ್ಕೆ ನಾನು ಈ ವೇದಿಕೆಯನ್ನು ಉಪಯೋಗ ಮಾಡುವುದಿಲ್ಲ, ಕಳೆದ ಎರಡೂವರೆ ತಿಂಗಳಿಂದ ಬರೆದಂಥ ಪತ್ರಗಳಿಗೆ ಸರ್ಕಾರದಿಂದ ಒಂದು ಕೂಡ ಉತ್ತರ ಬರಲಿಲ್ಲ. ನಾನು ಒಳಗಡೆ ಇದ್ದಾಗ ನನ್ನ ಕ್ಷೇತ್ರದ ಪ್ರತಿನಿಧಿಗಳಾಗಿ ಪ್ರತಿಯೊಬ್ಬರೂ ಕೆಲಸ ಮಾಡಬೇಕಾಗಿತ್ತು. ನಿಮಗೆ ಪ್ರಾಮಾಣಿಕವಾಗಿ ಜನಗಳ ಸೇವೆ ಮಾಡತಕ್ಕಂಥ ಹಂಬಲ ಇದ್ದರೆ ಮಂತ್ರಿಗಳಾದವರು ನಾನು ಬಂಧನಕ್ಕೆ ಒಳಗಾಗಿದ್ದಾಗ ನನ್ನ ಕ್ಷೇತ್ರದ ಪ್ರತಿನಿಧಿಗಳಾಗಿ ಕೆಲಸ ಮಾಡತಕ್ಕಂಥ ಹೊಣೆಗಾರಿಕೆ ನಿಮ್ಮದಾಗಿತ್ತು ಆ ಕೆಲಸವನ್ನು ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ಹೇಳುವುದಾದರೆ ಎರಡನೇ ಭಾರಿ ಕೇಂದ್ರಕ್ಕೆ ರಾಜ್ಯಸರ್ಕಾರದವರು ಕೊಟ್ಟಿರತಕ್ಕ ಮೆಮೋರ್ಯಾಂಡಮ್ ಏನಿದೆ ಅದರಲ್ಲಿ ತಾವು ಈ ರೀತಿ ಹೇಳಿದ್ದೀರಿ.

Taluks affected by scarcity conditions:

Alur and Belur are partially affected and other Taluks are fully affected.

ನನ್ನ ಒಂದು ಜಿಲ್ಲೆಯ ಬಗ್ಗೆ ಹೇಳುತ್ತೇನೆ. ಏಕೆಂದರೆ ರಾಜ್ಯದಲ್ಲಿ ಎಲ್ಲಾ ಕಡೆಗೂ ಪ್ರವಾಸ ಮಾಡುವುದಕ್ಕೆ ಆಗಿಲ್ಲ.

There are 2591 villages in the District. 1855 villages have been affected.

2-30 P. M.

ನಮ್ಮ ಜಿಲ್ಲೆಯ ಶಾಸಕರು ಇದ್ದಾರೆ, ೨೫೯೧ ಒಟ್ಟು ಗ್ರಾಮಗಳ ಪೈಕಿ ೧೮೫೫ ಗ್ರಾಮಗಳನ್ನು ಬಿಟ್ಟರೆ ಕೇವಲ ೭೩೬ ಗ್ರಾಮಗಳು ಸಂತೃಪ್ತಿಯಾಗಿವೆ ಅಂದಮೇಲೆ ಅಲ್ಲಿ ಯಾವ ರೀತಿಯ ಬರಗಾಲದ ಕಾವು ತಟ್ಟಿಲ್ಲವೆಂಬುದಾಗಿ ಅರ್ಥ ಬರುತ್ತದೆ. ತಮ್ಮ ಅಂಕಿಅಂಶಗಳ ಆಧಾರದಿಂದ ಬೇಲೂರು ಆಲೂರು ಎರಡು ತಾಲ್ಲೂಕುಗಳಲ್ಲಿ ಇರತಕ್ಕ ಹಳ್ಳಿಗಳೆಲ್ಲಾ ಸಂವೃದ್ಧಿಯಾಗಿವೆಯೆಂದರೂ ನೀವು ಹೇಳಿರುವ ೭೦೦ ಹಳ್ಳಿಗಳ ಪಟ್ಟಿಯಲ್ಲಿ ಬರುವುದಿಲ್ಲ. ಅಂದಮೇಲೆ ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಎಷ್ಟು ಸತ್ಯಕ್ಕೆ ದೂರವಾದುವು ಎಂಬುದು ಇದೊಂದರಿಂದಲೇ ಉಲ್ಲೇಖವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಎಷ್ಟು ಗ್ರಾಮಗಳು ತೊಂದರೆಗೆ ಈಡಾಗಿಲ್ಲವೆಂದು ಹೇಳಿಲ್ಲ, ತಮಗೆ ಗೊತ್ತಿರುವ ಹಾಗೆ ಸಕಲೇಶಪುರ ತಾಲ್ಲೂಕು ಬಿಟ್ಟುಬಿಟ್ಟಿದ್ದೀರಿ ಆ ತಾಲ್ಲೂಕು ನಿಮ್ಮ ಪಟ್ಟಿಯಲಿಲ್ಲ. ಅದರಲ್ಲಿ ಸೇರಿರತಕ್ಕ ಗ್ರಾಮಗಳು ಆಲೂರು ಮತ್ತು ಬೇಲೂರುಗಳಲ್ಲಿ ಪಾರ್ಷಿಯಲ್ಲಾಗಿ ಅಷ್ಟು ಗ್ರಾಮಗಳು ಸೇರಿವೆಯೆಂದು ಹೇಳಬಹುದು ಆಲೂರು ತಾಲ್ಲೂಕು ಸಕಲೇಶಪುರ ತಾಲ್ಲೂಕು ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಒಟ್ಟು ಗ್ರಾಮಗಳೆಷ್ಟು ಎಂಬುದಾಗಿ ಕೇಳಿದರೆ ಅದರ ಬಗ್ಗೆ ವಿವರಣೆಯನ್ನು ಕೊಟ್ಟಿಲ್ಲ ಈಗ ಸರ್ಕಾರದವರು ೪ ೬೪ ಕೋಟಿ ರೂಪಾಯಿಗಳನ್ನು ಮೈನರ್ ಇರ್ರಿಗೇಷನ್ನಿಗೆ ೪.೬೦ ಕೋಟಿ ರೂಪಾಯಿಗಳನ್ನು ರೂರಲ್ ಕಮ್ಯೂನಿಕೇಷನ್ನಿಗೆ ೧.೨ ಕೋಟಿ ರೂಪಾಯಿಗಳನ್ನು ಸಾಯಿಲ್ ಕನ್‌ಸರ್‌ವೇಷನ್ನಿಗೆ ೧.೪ ಕೋಟಿ ರೂಪಾಯಿಗಳನ್ನು ಅಫಾರಸ್ಟೇಷನ್ನಿಗೆ ಹಾಸನ ಜಿಲ್ಲೆಯಲ್ಲಿ ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಈಗ ನನ್ನಲ್ಲಿ ಇಡೀ ರಾಜ್ಯದ ಪೂರ್ಣ ವಿವರ ನನ್ನಲ್ಲಿಲ್ಲ. ಮೊನ್ನೆ ನಾನು ಹಾಸನ ಜಿಲ್ಲೆಗೆ ಹೋದಾಗ

ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಮಾಡಿ ವಿಷಯಗಳನ್ನು ಪರಿಶೀಲನೆ ಮಾಡಬೇಕೆಂದು ಪ್ರಯತ್ನ ಮಾಡಿದ್ದೇನೆ. ಇಡೀ ಹಾಸನ ಜಿಲ್ಲೆಗೆ ಸರ್ಕಾರದವರು ಒದಗಿಸಿರತಕ್ಕ ಹಣ ೧೭೩ ಲಕ್ಷ ರೂಪಾಯಿ ಗಳು. ೨೮ನೇ ಸೆಕ್ಷನ್ ಪ್ರಕಾರ ಹಣವನ್ನು ಒದಗಿಸಬೇಕೆಂದು ಒಂದು ಹೆಡ್ಡಿನಲ್ಲಿ ಆ ರೀತಿಯಾಗಿ ಕೊಟ್ಟಿದ್ದಾರೆ. ಬ್ರೇಕಪ್ ನೋಡಿದಾಗ ಹೊಳೇನರಸೀಪುರ ತಾಲ್ಲೂಕಿನಲ್ಲಿ ಇವರು ಒದಗಿಸಿರತಕ್ಕ ಹಣ ಒಂದು ಲಕ್ಷ ೩೦ ಸಾವಿರ ರೂಪಾಯಿಗಳು ಅದನ್ನು ಪಿ.ಡಬ್ಲ್ಯೂ.ಡಿಯವರಿಗೆ ಒದಗಿಸಿದ್ದಾರೆ. ಸಾಯಿಲ್ ಕನ್‌ಸರ್‌ವೇಷನ್ನಿಗೆ ೬೦ ಸಾವಿರ ರೂಪಾಯಿಗಳು. ಅಫಾರ್‌ಸ್ಟೇಷನ್ನಿಗೆ ೫೫ ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ.ಮೈನರ್ ಇರ್ರಿಗೇಷನ್ನಿಗೆ ೧೨ ಸಾವಿರ ರೂಪಾಯಿಗಳು. ಡೀಪನಿಂಗ್ ವೆಲ್ಸ್‌ಗೆ ೧೦ ಸಾವಿರ ರೂಪಾಯಿಗಳು ಡಿಗ್‌ವೇಲ್ಸ್‌ಗೆ ೬ಸಾವಿರ ರೂಪಾಯಿಗಳು, ಬೋರ್‌ವೇಲ್ಸ್ ರಿಪೇರಿಗೆ ೧೪ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಒಟ್ಟು ಕೋಟಾ ಒಂದು ವರ್ಷದಲ್ಲಿ ಮೇ ತಿಂಗಳಿಂದ ಹಿಡಿದು ಇಲ್ಲಿಯವರೆಗೆ ಮಳೆ ಹೋದ ಮೇಲೆ ೨ ಲಕ್ಷ ೬೦ಸಾವಿರ ರೂಪಾಯಿಗಳನ್ನು ಒದಗಿ ಸಿದ್ದಾರೆ. ಇದಲ್ಲದೆ ಪಿ.ಡಬ್ಲ್ಯೂ.ಡಿನಲ್ಲಿ ಬಡ್ಜೆಟ್ ಗ್ರಾಂಟ್‌ನಿಂದ ರೂರಲ್ ಕಮ್ಯೂನಿಕೇಶನ್ನಿಗೆ ಒಂದು ಲಕ್ಷ ರೂಪಾಯಿಗಳು, ಮೈನರ್ ಇರ್ರಿಗೇಷನ್ನಿಗೆ ೬೦ ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಇವೆಲ್ಲಕ್ಕೂ ಅಂದಾಜುಗಳು ಮಂಜೂರಾಗಿರಬೇಕು. ಇನ್ನು ಈಗಾಗಲೇ ಕೆಲಸಗಳನ್ನು ಸೇರಿಸುವುದೆಲ್ಲಾ ಮಂಜೂರು ಮಾಡಿರುವ ಎಸ್ಟಿಮೇಟ್ಸ್, ಕಳೆದ ಮೇ ತಿಂಗಳಲ್ಲಿ ನನ್ನ ತಾಲ್ಲೂಕಿನಲ್ಲಿ ೭ ಇಂಚು ಮಳೆಯಾಗಿದೆ. ಅದಾದಮೇಲೆ ಇದುವರೆಗೆ ಒಟ್ಟು ಆಗಿರತಕ್ಕ ಮಳೆ ೪ ಇಂಚು. ಸುಮಾರು ೩೮೫ ಸಣ್ಣ ನೀರಾವರಿ ಕೆರೆಗಳಲ್ಲಿ ಕೇವಲ ೫ ಕೆರೆಗಳಲ್ಲಿ ಮಾತ್ರ ನೀರು ಇದೆ. ಆದರೆ ನಿಮ್ಮ ಅಧಿಕಾರಿಗಳು ಕೊಟ್ಟಿರುವ ರಿಪೋರ್ಟ್ ಪ್ರಕಾರ ಡ್ರಿಂಕಿಂಗ್ ವಾಟರ್ ಫ್ಯಾಸಿಲಿಟೀಸ್ ಇಲ್ಲ ವೆಂಬುದಾಗಿ ವರದಿಯಲ್ಲಿದೆ. ೯೮ ಸಾವಿರ ಎಕರೆ ಸಾಗುವಳಿ ಜಮೀನು ಇದ್ದರೆ ಕೇವಲ ೪ ಸಾವಿರ ಎಕರೆಗಳಲ್ಲಿ ಸಾಕಷ್ಟು ಮಳೆಯಾಗಲಿಲ್ಲ. ಅದು ಚಾನಲ್ ಏರಿ ಯಾದ್ದಲ್ಲದೆ ಅಧಿಕಾರಿಗಳು ಕೊಟ್ಟಿ ರುವ ವರದಿ ಪ್ರಕಾರ ೨೧ ಸಾವಿರ ಎಕರೆಗಳಲ್ಲಿ ಬಿತ್ತನೆ ಮಾಡಿದರೆ ಬೆಳೆ ಎಲ್ಲಾ ಹೋಗಿದೆಯೆಂದು ಹೇಳುತ್ತಿದ್ದಾರೆ. ಅಂದಮೇಲೆ ಒಟ್ಟು ೭೪ ಸಾವಿರ ಎಕರೆಗಳಲ್ಲಿ ಈ ಸಾರಿ ಬಿತ್ತನೆ ಮಾಡಲಿಲ್ಲ. ಉಳುಮೆ ಮಾಡಲಿಲ್ಲವೆಂದು ನಿಮ್ಮ ಅಧಿಕಾರಿಗಳು ಹೇಳತಕ್ಕ ವರದಿ. ನನಗೆ ತಿಳಿದಮಟ್ಟಿಗೆ ೯೪ಸಾವಿರ ಎಕರೆಗಳಲ್ಲಿ ಬೆಳೆಯೇ ಆಗಿಲ್ಲ ಜರ್ಮಿನೇಷನ್ ಸಹ ಆಗಿಲ್ಲ ಇಂತಹ ಒಂದುಪರಿಸ್ಥಿತಿ ಇರುವಾಗ ಒದಗಿಸಿರತಕ್ಕ ಹಣ ೨ ಲಕ್ಷ ೫೫ ಸಾವಿರ ರೂಪಾಯಿಗಳು. ಇವತ್ತು ಮಂಜೂರು ಮಾಡಿರುವ ಹಣ ೮ ಕೆರೆಗಳಿಗೆ ಸಣ್ಣ ನೀರಾವರಿ ಯೋಜನೆಯಲ್ಲಿ ೬೦ ಸಾವಿರ ರೂಪಾಯಿಗಳೆಂದು ಅಂದಾಜು ಮಾಡಿದ್ದಾರೆ. ಹೇಮಾವತಿ ಚಾನಲ್ ವರ್ಕ್ ಇನ್ನೂ ಕೆಲವು ಭಾಗಗಳಲ್ಲಿ ನಡೆಯುತ್ತಿದೆ, ಒಟ್ಟು ಹಣ ಆ ಯೋಜನೆ ಮುಗಿ ಯುವುದಕ್ಕೆ ಎಷ್ಟು ಖರ್ಚು ಆಗುತ್ತದೆಂಬುದೇ ಗೊತ್ತಿಲ್ಲ. ಇದರ ಬಗ್ಗೆ ಒಟ್ಟು ಅಂಕಿಅಂಶಗಳ ಪೂರ್ತಿ ವಿವರಗಳನ್ನು ಕೊಡುವುದಕ್ಕೆ. ಬ್ರೇಕಪ್ ಕೊಡುವುದಕ್ಕೆ ಟೈಂ ಬೇಕೆಂದು ಹೇಳಿದರು. ತಾವು ಯಾರನ್ನಾದರೂ ಅಲ್ಲಿಗೆ ಕಳುಹಿಸಿ. ಮಾನ್ಯ ಮುಖ್ಯಮಂತ್ರಿಗಳು ಆ ಸ್ಥಳವನ್ನು ವಿಜಿಟ್ ಮಾಡಿರಬಹುದು. ಅಲ್ಲಿನ ಮೇನ್ ರೋಡ್ಸ್‌ಗೂ ಬಂದಿರಬಹುದು. ನಮ್ಮ ತಾಲ್ಲೂಕಿನ ಚಿತ್ರವನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ ಅಲ್ಲಿರತಕ್ಕ ನಾಲಾ ಭಾಗದಲ್ಲಿರತಕ್ಕ ಯಾವುದೇ ಗ್ರಾಮ ಗಳನ್ನು ತೆಗೆದುಕೊಂಡರೂ ಸುಮಾರು ೧೩-೧೪ ಹಳ್ಳಿಗಳು ಬಿಟ್ಟರೆ ಅರ್ಧಭಾಗದ ಜನರು ಅವರ ಮನೆಗಳಿಗೆ ಬೀಗ ಹಾಕಿ ಊರು ಬಿಟ್ಟು ಹೊರಗೆ ಹೋಗಿದ್ದಾರೆ,ಅರ್ಧಭಾಗದ ಜನರೇ ಇವತ್ತು ಅಲ್ಲಿ ಬೀಗ ಹಾಕಿದ್ದಾರೆ. ತಾತಮ್ಮ ದನಗಳನ್ನು ಮಾನ್ಯ ಮಂತ್ರಿಗಳ ಕ್ಷೇತ್ರದ ಕಡೆಗೆ ಅಟ್ಟಿದ್ದಾರೆ. ನಮ್ಮ ತಾಲ್ಲೂಕಿನ ಪರಿಸ್ಥಿತಿ ಈರೀತಿ ಇರುವಾಗ ಇನ್ನು ರಾಜ್ಯದ ೧೭೫ ತಾಲೂಕುಗಳ ಪರಿಸ್ಥಿತಿ ಹೇಗಿರಬೇಕೆಂದು ವಿಚಾರಮಾಡಬೇಕು. ಇಡೀ ರಾಜ್ಯದ ಚಿತ್ರ ನನ್ನಲ್ಲಿಲ್ಲ. ವಿರೋಧಪಕ್ಷದ ಮುಖಂಡನಾಗಿ ಕೆಲಸಮಾಡುವ ಕಾಲ ದಲ್ಲಿ ಇಡೀ ರಾಜ್ಯದ ೩ ಕೋಟಿ ಜನರ ಕಷ್ಟವನ್ನು ಪ್ರತಿಬಿಂಬಿಸುವ ಕೇವಲ ಒಂದು ತಾಲ್ಲೂ ಕಿನ ಬಗ್ಗೆ ನಾನು ಇವತ್ತು ಮಾಹಿತಿಯನ್ನು ಕೊಡುತ್ತಿದ್ದೇನೆ. ಅದರಿಂದಾಗಿ ನಾನು ಜನತೆಯ ಕ್ಷಮೆ ಕೇಳಬೇಕಾಗುತ್ತದೆ. ನನಗೆ ಆ ರೀತಿಯಾಗಿ ಅವಕಾಶ ಸಿಗಲಿಲ್ಲ ಸಹಕಾರ ಅಪೇಕ್ಷೆ ಮಾಡಿ ಎಂಬು ದಾಗಿ ಮಂತ್ರಿಗಳು ಹೇಳಿದರು. ಕಳೆದ ಭಾನುವಾರ ನಾನು ಊರಿಗೆ ಹೋಗುವಾಗ ಸುಮಾರು ೪ ಘಂಟೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಫೋನ್ ಮಾಡಿದೆ. ಇದು ನನ್ನ ಒಂದು ಸ್ವಂತ ವ್ಯವಹಾರವಲ್ಲ ದೇವೇಗೌಡರು ಊರಿಗೆ ಬರುತ್ತಿದ್ದಾರೆಂದು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಮೆಸೇಜ್ ಕೊಟ್ಟು ನಾನು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತೇನೆ, ಸಂಬಂಧಪಟ್ಟ ಡೆಪ್ಯುಟಿ ಕಮಿಷನರಿಗೆ ತಿಳಿಸಿ ಎಂಬುದಾಗಿ ಹೇಳಿದೆ. ಅಧಿಕಾರಿಗಳು ನನ್ನ ಜೊತೆಯಲ್ಲಿ ಬರಲು ಸಾಧ್ಯವಾಗಲಿಲ್ಲ, ನಮ್ಮ ಸಹಕಾರ ನಿಮಗೆ ಬೇಕು ಎಂಬುದಾ

ಹೇಳುತ್ತೀರಿ. ಸೋಮವಾರ ಒಂದನೇ ತಾರೀಖು ಕರ್ನಾಟಕ ರಾಜ್ಯೋತ್ಸವ ವಿಜೃಂಭಣೆಯಾಗಿ ಮಾಡುವುದರಿಂದ ಆ ತಾಲ್ಲೂಕಿನ ಬಿ.ಡಿ.ಒ. ಅಸಿಸ್ಟೆಂಟ್ ಇಂಜಿನಿಯರ್ ತಹಸೀಲ್ದಾರ್ ಎಲ್ಲರೂ ಬಂದು ಕೂತು ಚರ್ಚೆ ಯಾಗುತ್ತಿರುವಾಗ, ತಾಲ್ಲೂಕು ಆಫೀಸಿನಲ್ಲಿ ತಹಸೀಲ್ದಾರರ ಚೇಂಬರ್ಸ್‌ನಲ್ಲಿ ಹೋಗಬೇಕೆಂದಾಗ ಅದರಲ್ಲಿಯೂ ನಾನು ಯಾವ ಒಂದು ಪಕ್ಷದ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲವೆಂದು ಹೇಳಿದರೂ ಅಲ್ಲಿನ ಸ್ಥಳೀಯ ಕಾಂಗ್ರೆಸ್ ಮುಖಂಡರು ತಾಲ್ಲೂಕ್ ಆಫೀಸಿಗೆ ನುಗ್ಗಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ್ದಾರೆ

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಲ್ಲೆ ಎನ್ನಬೇಡಿ, ಕಸುಬು ಮಾಡುತ್ತಿದ್ದಾರೆಂದು ಹೇಳಿ.

ಶ್ರೀ ಎಚ್ ಡಿ. ದೇವೇಗೌಡ.—ಇಷ್ಟೆಲ್ಲ ಅವಶ್ಯಕತೆ ಇಲ್ಲ. ನಾವು ಜನತಾ ಪ್ರತಿನಿಧಿಗಳಾಗಿ ಕೆಲಸ ಮಾಡುವುದಕ್ಕೆ ಯೋಗ್ಯರಲ್ಲವೆಂಬ ದೃಷ್ಟಿ ನಿಮ್ಮಲ್ಲಿದೆಯೆಂದು ಕಾಣುತ್ತದೆ. ಅದಕ್ಕಾಗಿ ಬೇಕಾದರೆ ಒಂದು ನಿರ್ಣಯವನ್ನು ಮಾಡಿ. ವಿರೋಧಪಕ್ಷದಲ್ಲಿ ಕೂತು ಕೆಲಸ ಮಾಡುವ ಜನಗಳಿಗೆ ಅರ್ಹತೆ ಇಲ್ಲ. ಡಿಸ್ ಕ್ವಾಲಿಫಿಕೇಷನ್ ಮಾಡಿದ್ದೇವೆಂದು ಹೇಳಿಬಿಡಿ. ಇಷ್ಟೆಲ್ಲಾ ಏಕೆ ನಿಮಗೆ ಹಿಂಸೆ ?

ಇವರು ಈ ಸದನದಲ್ಲಿ ಕೂರತಕ್ಕಂಥ ಅರ್ಹತೆ ಇಲ್ಲ ಎಂದು ಒಂದು ಡಿಸ್‌ಕ್ವಾಲಿಫಿಕೇಷನ್ ಮಾಡಿ. ಈ ರಾಜಕೀಯವೇ ನಮ್ಮ ಜೀವನದ ಕಸಬು ಅಲ್ಲ. ನಮ್ಮ ಕಸಬು ಇದ್ದೇ ಇದೆ ವ್ಯವಸಾಯ ಮಾಡುವುದು. ಈ ರಾಜಕೀಯ ಕಸಬಿನಿಂದಲೇ ನಮ್ಮ ಉದರ ಪೋಷಣೆ ಮಾಡುವುದಕ್ಕೆ ಬಂದಿಲ್ಲ ತಾಲ್ಲೋಕಿನಲ್ಲಿ ಅಧಿಕಾರಿಗಳ ಜೊತೆಯಲ್ಲಿ ಕೂತು ತಾಲ್ಲೂಕಿನ ಕುಂದುಕೊರತೆಗಳನ್ನು ತಾಲ್ಲೂಕು ಆಫೀಸಿನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲದಂತೆ ಆದರೆ ನಾವು ಯಾವರೀತಿ ಶಾಸಕರು ಕೆಲಸಮಾಡುವುದು ? ನಾನು ಒಂದು ಮಾತನ್ನು ಡೆಪ್ಯುಟಿ ಕಮೀಷನರ್‌ಗೆ ಈ ರೀತಿ ನಮ್ಮ ಕಾರ್ಯಕ್ರಮಗಳನ್ನು ನಡೆಯುವುದಕ್ಕೆ ಅಡ್ಡಿ ತಂದರೆ ತಾಲ್ಲೂಕು ಕಚೇರಿಯ ಆವರಣದಲ್ಲಿಯೇ ರಕ್ತ ಹೊಳೆ ಹರಿಯಬೇಕಾಗುತ್ತದೆ ಎಂದು ಹೇಳಿದ್ದೇನೆ. ಇದು ಯಾರ ಅಪ್ಪನ ಮನೆ ಇದು ? ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೂ ಅಡ್ಡಿ ಮಾಡುವುದಾದರೆ ಹೇಗೆ ? ನಾವು ಅಧಿಕಾರಿಗಳನ್ನು ಯಾವುದೇ ಕೆಲಸಕಾರ್ಯಗಳಿಗೆ ಕರೆದರೆ, ಅವರು ಹೇಳುತ್ತಾರೆ ನಿಮ್ಮ ಜೊತೆ ಬರುವುದು ಬಹಳ ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ನಾನು ಒಬ್ಬ ಶಾಸಕನಾಗಿ ಕೆಲಸಮಾಡಬೇಕಾದರೆ ಅಧಿಕಾರಿಗಳು ಈ ರೀತಿ ಹೇಳುವುದಾದರೆ ನಾನು ಏನಾದರೂ ಅಸ್ಪೃಶ್ಯನೇ ? ಈ ರೀತಿ ಆದರೆ ಶಾಸಕನಾಗಿ ಯಾವರೀತಿ ಕೆಲಸಮಾಡುವುದು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದನ್ನೆಲ್ಲಾ ನೋಡಿದರೆ ಸಂಕಟವಾಗುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮಗೆ ಸಂಕಟವಾದರೆ ನಿಮ್ಮ ಮನೆಯಲ್ಲಿ ಮಾತನಾಡಿಕೊಳ್ಳಿ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಡೈರೆಕ್ಷನ್ ಕೊಟ್ಟರೂ ಕೂಡ ಅಧಿಕಾರಿಗಳು ನಮ್ಮ ಜೊತೆಯಲ್ಲಿ ಬರಲು ಬಹಳ ಒತ್ತಡವಿದೆ ಬರಲಿಕ್ಕೆ ಸಾಧ್ಯವಿಲ್ಲವೆನ್ನುವ ಮಟ್ಟಕ್ಕೆ ರಾಜಕೀಯ ಹೋದರೆ ನಾವು ಕೆಲಸಮಾಡಲು ಸಾಧ್ಯವಿಲ್ಲ. ನೀವು ಎಷ್ಟೇ ಪ್ರಾಮಾಣಿಕವಾಗಿ ನಿರ್ಣಯ ಮಾಡಿದರು ಕೆಲವುಕಡೆ ಕೆಲಸ ನಡಸಬೇಕಾದರೆ ನಿಮ್ಮ ಹೆಸರನ್ನು ದುರುಪಯೋಗ ಮಾಡುತ್ತಾರೆ. ಅವರು ಹೇಗೆ ವರ್ತನೆ ಮಾಡುತ್ತಾರೆ ನೋಡಬೇಕು. ಯಾವುದೇ ನಿರ್ಣಯವನ್ನು ಕಾರ್ಯರೂಪಕ್ಕೆ ತರತಕ್ಕಂಥ ಕಾಲದಲ್ಲಿ ನಿಮಗೆ ಅಪಕೀರ್ತಿ ತರುತ್ತಿದ್ದಾರೆ. ಜಿಲ್ಲೆಯಲ್ಲಿ ಯಾವರೀತಿ ನಡೆಯುತ್ತಿದೆ ಎಂದು ಸಮೀಕ್ಷೆ ಮಾಡಿಕೊಂಡು ಬಂದಾಗ ಗೊತ್ತಾಗುತ್ತದೆ. ಈಗ ಫ್ಯಾಮಿನ್ ಕಾರ್ಯವನ್ನು ತೆಗೆದುಕೊಳ್ಳಬೇಕಾದರೆ ನಾನು ಯಾವುದೇ ಕಂಟ್ರಾಕ್ಟರ್‌ಗೆ ಈ ಕೆಲಸವನ್ನು ಕೊಡಿ ಎಂದು ಹೇಳುವುದಿಲ್ಲ. ಸಕ್ಕರೆ ಮೂಟೆ ಕದ್ದು ವ್ಯವಹಾರವನ್ನು ಬಿಡಿರಿ ಎಂದು ಹೇಳುವುದಿಲ್ಲ. ರಾಗಿಯನ್ನು ಬ್ಲಾಕ್ ಮಾರ್ಕೆಟ್ ಮಾಡುವವನನ್ನು ಬಿಡಿ ಎಂದು ಹೇಳುವುದಿಲ್ಲ. ಹಾಗೇನಾದರೂ ನಿಮಗೆ ಬಂದು ಹೇಳಿದರೆ ಛೀಮಾರಿ ಮಾಡಿರಿ. ತಾಲ್ಲೂಕು ಕಚೇರಿಯಲ್ಲಿ ಕೂತು ಚರ್ಚೆ ಮಾಡುವುದು ಬೇಡ ಎಂದರೆ ಹೇಗೆ ? ತಾವು ಹೇಗೂ ಳಳನೇ ತಿದ್ದುಪಡಿಯನ್ನು ತರುವವರಿದ್ದೀರಿ ಅದರಲ್ಲಿ ವಿರೋಧಪಕ್ಷದಲ್ಲಿರತಕ್ಕಂಥ ಎಲ್ಲಾ ಸದಸ್ಯರ ಸ್ಥಾನವನ್ನು ಬಹಿಷ್ಕಾರ ಮಾಡಿದ್ದರೆ ಈ ಸದನದಲ್ಲಿ ಕೂಡಲಿಕ್ಕೆ ಅಧಿಕಾರವಿಲ್ಲವೆಂದು ಹೇಳಿ ನಾವು ಹೋಗುತ್ತೇವೆ. ಅದನ್ನು ಜನತೆಯ ತೀರ್ಮಾನಕ್ಕೆ ಬಿಡೋಣ. ಸಭಾಧ್ಯಕ್ಷಿಣಿಯವರೇ, ಇಡೀ ತಾಲ್ಲೂಕಿನಲ್ಲಿ, ಇಡೀ ಜಿಲ್ಲೆಯಲ್ಲಿ ಇರತಕ್ಕಂಥ ಚಿತ್ರವನ್ನು ಸರ್ಕಾರದ ಮುಖಂಡರ ಮುಂದೆ ಇಡುತ್ತಿದ್ದೇನೆ. ಇದರ ಇನ್ನು ಹೆಚ್ಚು ವಿಶ್ಲೇಷಣೆ ಮಾಡುವುದಿಲ್ಲ. ಇವತ್ತು ಒದಗಿರತಕ್ಕಂಥ ಪ್ರಾಮಾಣಿಕವಾದ ಕರ್ತವ್ಯವನ್ನು ನಾವು ನೀವು ಎಲ್ಲರೂ ಮಾಡಬೇಕಾಗುತ ದೆ ಎಂದು ಆಶಿಸುತ್ತೇನೆ. ಇನ್ನು ಈ ಕೆಲಸ ಮಾಡತಕ್ಕಂಥದ್ದರಲ್ಲಿ ಒಂದು ಸಮಸ್ಯೆ ಅದು ಏನೆಂದರೆ ಇದನ್ನು ಎನ್ ಆರ್ ನಲ್ಲಿ ಮಾಡಬೇಕೇ, ಪೀಸ್ ವರ್ಕ್‌ನಲ್ಲಿ ಮಾಡಬೇಕೇ

ಎನ್ನುವುದು ? ಎನ್ ಆರ್ ನಲ್ಲಿ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ ೧೯೭೨ರಿಂದ ಈ ಹೋರಾಟ ನಡೆದುಕೊಂಡು ಬಂದಿದೆ. ಬಿಜಾಪುರ ಮತ್ತು ಇನ್ನು ಕೆಲವು ಭಾಗದಲ್ಲಿ ಈ ಕೆಲಸ ನಡೆದಾಗ ಎಡಗೈ ಹೆಬ್ಬೆಟ್ಟನ್ನು ಒತ್ತಿಸಿಕೊಂಡು ಬೇಕಾದಷ್ಟು ಅನ್ಯಾಯಗಳು ನಡೆದವು. ಪೀಸ್ ವರ್ಕ್‌ನಲ್ಲಿ ಸಿನ್‌ಸಿಯರ್ ಆಗಿ ಮಾಡುತ್ತೇವೆನ್ನುವ ಫೀಲಿಂಗ್ ಇರಬಹುದು. ಅದರಲ್ಲಿ ದುರುಪಯೋಗವಾಗುವುದಿಲ್ಲವೆಂದು ಅದನ್ನು ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಆದರೆ ಆಯಾಯ ಗ್ರಾಮದ ಜನತೆಗೆ ಕೊಟ್ಟು ಕೆಲಸ ಮಾಡುವುದರ ಮುಖಾಂತರ ಸಿಬ್ಬಂಧಿ ಕೊರತೆಯನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಸಭಾಧ್ಯಕ್ಷಿಣಿಯವರೇ, ನನಗಿಂತ ನಮ್ಮ ಜಿಲ್ಲೆಯಲ್ಲಿನ ಬಗ್ಗೆ ಮಾನ್ಯ ಹನುಮೇಗೌಡರಿಗೆ ಅನುಭವ ಜಾಸ್ತಿ ಇದೆ. ನಮ್ಮಲ್ಲಿರುವ ಒಂದು ಬೋರ್‌ವೆಲ್ ಸಹ ಕೆಲಸ ಮಾಡುತ್ತಿಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ೫-೬ ಮೈಲಿ ಹೋಗಿ ನೀರನ್ನು ತರುತ್ತಿದ್ದಾರೆ. ರಾತ್ರೋರಾತ್ರಿ ಕ್ಯೂ ನಿಲ್ಲುತ್ತಾರೆ. ತೋಟದ ಭಾವಿಗಳಿಗೆ ಹೋಗುತ್ತಾರೆ ನಾನು ಜೈಲಿನಲ್ಲಿ ಇದ್ದಾಗ್ಯೂ ಈ ವಿಷಯವನ್ನು ಕೇಳಿದ್ದೇನೆ. ನಮ್ಮ ಅಧಿಕಾರಿಗಳು ಕೇಳಿದರೆ ನಾವು ಸರ್ಕಾರಕ್ಕೆ ರಿಪೋರ್ಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಮಾನ್ಯ ಪ್ರಭಾಕರ್ ರವರು ಇಲ್ಲಿ ಕುಳಿತಿದ್ದಾರೆ, ಅಭಿವೃದ್ಧಿ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ವಹಿಸಿಕೊಂಡಮೇಲೆ ಏನು ಮಾಡುತ್ತಿದ್ದಾರೆ ಎಂದು ಕೇಳುತ್ತೇನೆ ? ಗ್ರಾಮಾಂತರ ಅಭಿವೃದ್ಧಿ ಕೆಲಸ ತಮ್ಮ ಕೈಯಲ್ಲಿ ಇದೆ ಏನು ಮಾಡುತ್ತೀರಿ? ಇನ್ನು ಫಾಡರ್ ಬಗ್ಗೆ ಹೇಳಬೇಕೆಂದರೆ ನಮ್ಮ ತಾಲ್ಲೂಕಿನಲ್ಲಿ ದನಗಳನ್ನು ಹಗ್ಗ ಬಿಚ್ಚಿ ಮನೆಯಿಂದ ಓಡಿಸಿದ್ದಾರೆ. ಅವನ್ನು ಮಾರುತ್ತೇವೆಂದರೆ ತೆಗೆದುಕೊಳ್ಳುವವರೇ ಇಲ್ಲದೆ ಇರುವುದರಿಂದ ಅವನ್ನು ಮನೆಬಿಟ್ಟು ಓಡಿಸಿದ್ದಾರೆ. ನಮ್ಮ ಹೊಳೆನರಸಿಪುರ ಟೌನಿನಲ್ಲಿ ಒಂದು ಹೊರೆ ಹುಲ್ಲಿಗೆ ೨೦ ರೂಪಾಯಿ ಇದೆ ಯಾರು ಕೊಳ್ಳುತ್ತಾರೆ? ಯಾರಿಗೆ ಕೊಳ್ಳುವ ಯೋಗ್ಯತೆ ಇದೆ ? ನಮ್ಮಂತಹ ದಷ್ಟಪುಷ್ಟ ಜನರಿಗೆ ಸಾಧ್ಯವಿಲ್ಲ. ಇದರ ಬಗ್ಗೆ ಅಧಿಕಾರಿಗಳಿಗೆ ಕೇಳಿದರೆ ಸಕಲೇಶ್‌ಪುರದ ಒಂದು ಭಾಗವನ್ನು ಹೊಳೆನರಸಿಪುರ ತಾಲ್ಲೂಕಿಗೆ ಅಲಾಟ್ ಮಾಡಿದ್ದೇವೆ ಅಲ್ಲಿಗೆ ಹೋಗಿ ಹುಲ್ಲನ್ನು ಕೊಯ್ದುಕೊಂಡು ಬರಲಿ ಎಂದು ಹೇಳುತ್ತಾರೆ.

ಇವತ್ತು ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯ ಮುಖಾಂತರ ಹುಲ್ಲಿನ ಅಭಾವವಿರುವ ಪ್ರದೇಶಕ್ಕೆ ಹುಲ್ಲನ್ನು ಸಾಗಿಸಲು ಲಾರಿಗಳನ್ನು ಕೊಡಿ ಎಂದರೆ ಅಧಿಕಾರಿ ನಮಗೆ ಪರವಾನಿಗೆ ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಎಗ್ಸಿಕ್ಯುಟಿವ್ ಆಫೀಸರ್‌ರವರು ಒಂದೊಂದು ಸಾರಿ ಒಂದೊಂದು ಕಡೆಗೆ ಲಾರಿಗಳನ್ನು ಕೊಡುತ್ತೇವೆ, ಏತಕ್ಕೆಂದರೆ ಲಾರಿಗಳ ಸಪ್ಲೈ ಜಾಸ್ತಿಯಾಗಿಲ್ಲ ಎಂದು ಹೇಳುತ್ತಾರೆ. ಇಂಥ ಪರಿಸ್ಥಿತಿ ನಿಮ್ಮ ಇಲಾಖೆಯಲ್ಲಿದೆ.

ಇನ್ನು ಆಹಾರದ ವಿಷಯ ಹೇಳುವುದಾದರೆ ನಮ್ಮ ತಾಲ್ಲೂಕಿಗೆ ೨ ಕ್ವಿಂಟಾಲ್ ಕೊಟ್ಟಿದ್ದಾರೆ. ಹೋದ ತಿಂಗಳು ನಮ್ಮ ತಾಲ್ಲೂಕಿನಲ್ಲಿರುವ ೩೨ ಪಂಚಾಯಿತಿಗಳಿಗೆ ಒಂದೊಂದು ಚೀಲ ಕೊಟ್ಟಿದ್ದೀರಿ. ನಿಮ್ಮಲ್ಲಿ ಸಾಕಾದಷ್ಟು ಧಾನ್ಯವಿದೆಂದು ಮುಖ್ಯಮಂತ್ರಿಗಳವರೂ ಹೇಳುತ್ತಿದ್ದಾರೆ ನೀವು ಹೇಳುತ್ತಿದ್ದೀರಿ, ಇರಬಹುದು. ಒಟ್ಟಿನಲ್ಲಿ ಅದು ಎಲ್ಲಿಯೋ ಇದೆ. ಒಂದೊಂದು ಪಂಚಾಯಿತಿಗೆ ೧೩-೧೪ ಹಳ್ಳಿಗಳಿರುತ್ತವೆ, ಆ ಊರುಗಳಿಗೆ ಅರ್ಧ ಅರ್ಧ ಚೀಲ ಬರುತ್ತದೆ. ಮಾನ್ಯ ರಂಗನಾಥ್‌ರವರು ಮಾತನಾಡುತ್ತಾ ಕೈ ಚೀಲ ಸೊಸೈಟಿಗಳಲ್ಲಿ ಹೇಗೆ ನಡೆಯುತ್ತದೆಂದು ಹೇಳಿದರು. ಆದರ ಮಾರಾಟ ವ್ಯವಸ್ಥೆಯ ಬೇರೆ, ಪರಿಸ್ಥಿತಿ ಇಷ್ಟೊಂದು ಭೀಕರವಾಗಿರತಕ್ಕಂಥ ಕಾಲದಲ್ಲಿ ನಾನು ಕೆಲವು ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮೊನ್ನೆ ದಿವಸ ರಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿಯವರ ಹತ್ತಿರ ಮಾತನಾಡುತ್ತಾ ಕೇಳಿದಾಗ ಅವರು ಈ ವರ್ಷ ಕೊಟ್ಟಂಥ ಸಾಲವನ್ನು ಮುಂದಿನ ವರ್ಷ ತಡೆಹಿಡಿಯುತ್ತೇವೆ. ಆದರೆ ಹೋದ ವರ್ಷ ಬೆಳೆ ಚೆನ್ನಾಗಿ ಬಂದಿತ್ತು ಆದುದರಿಂದ ಈ ವರ್ಷ ಸಾಲವನ್ನು ವಸೂಲು ಮಾಡುತ್ತೇವೆಂದು ಹೇಳಿದರು. ಈ ರೀತಿ ಮಾಡುವುದರಿಂದ ಬಹಳ ತೊಂದರೆಯಾಗುತ್ತದೆ ತಾವು ಇದರ ಬಗ್ಗೆ ತಮ್ಮ ಅಧಿಕಾರಿಗಳಿಗೆ ತಿಳಿಸಬೇಕು. ದಯಮಾಡಿ ಯಾವ ವರ್ಷದೇ ಬಾಕಿ ಇರಲಿ ಈ ಒಂದು ಪರಿಸ್ಥಿತಿ ಸುಧಾರಣೆಯಾಗುವವರೆಗೆ ಸಾಲವನ್ನು ವಸೂಲು ಮಾಡತಕ್ಕಂಥದ್ದನ್ನು ತಡೆಹಿಡಿಯಬೇಕು, ಇದರ ಬಗೆ ತಾವು ಸರಿಯಾದ ನಿದರ್ಶನವನ್ನು ಕೊಡಬೇಕೆಂದು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಖಾಸಗಿ ಸಾಲ ಕೂಡ ದೊರೆಯದ ರೀತಿಯಲ್ಲಿ ಮಾಡಿದ್ದೀರಿ. ಅದರ ಒಳಿತು ಕೆಟ್ಟದರ ಬಗ್ಗೆ ಮಾತನಾಡುವುದಿಲ್ಲ. ಇವತ್ತು ನಾನು ಫ್ಯಾಮಿನ್ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಒಬ್ಬ ಬಡ ರೈತ ಹುಲ್ಲನ್ನು ತೆಗೆದುಕೊಳ್ಳಬೇಕಾದರೆ ೫ ರೂಪಾಯಿಗಳು ಕೊಟ್ಟರೂ ಹುಲ್ಲು ಸಿಗುತ್ತಿಲ್ಲ. ಕೂಲಿ ನೋಡಿದರೆ ಅವರಿಗೆ ೩-೪ ರೂಪಾಯಿಗಳು ಕೂಡ ಸಿಗದೇ ಇರುವುದರಿಂದ ಅವರು ದನಗಳನ್ನು

ಸಾಕುವುದಕ್ಕೆ ಆಗುತ್ತಿಲ್ಲ. ಅವನ ಪರಿಸ್ಥಿತಿ ಹೀಗಿರುವಾಗ ತಾವು ಅವನಿಗೆ ಫಾಡರ್ ಲೋನ್ ಕೊಡದೇ ಹೋದರೆ ಅವನು ಹೇಗೆ ಮಾಡಬೇಕು? ಅವನ ಪರಿಸ್ಥಿತಿ ಏನು ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸರ್ಕಾರದ ಅಧಿಕಾರಿಗಳಿಗೆ ತಾವು ಒಂದು ಸರ್ಕ್ಯುಲರ್ ಹೊರಡಿಸಿ ೨-೨ ಕ್ವಿಂಟಾಲ್ ಅಕ್ಕಿಯನ್ನು ಎಲ್ಲರಿಗೂ ಕೊಟ್ಟಿರಿ. ಬಟ್ಟೆಯನ್ನು ಕೊಟ್ಟಿರಿ ಒಪ್ಪಿಕೊಳ್ಳೋಣ ನಿಜ. ಆದರೆ ಇವನು ಏನು ಅಂಥ ಪಾಪ ಮಾಡಿದ್ದ? ಅವನು ನತದೃಷ್ಟ ನಾರಾಯಣ ಅನ್ನುವ ಪದ ಉಪಯೋಗಿಸಿದರೆ ಅದು ಅನ್ ಪಾರ್ಲಿಮೆಂಟರಿ ಪದವಾಗುತ್ತದೆಯೋ ಏನೋ, ಮತ್ತೆ ಏನು ಪದ ಉಪಯೋಗಿಸಬೇಕೋ? ತಾವೇನೋ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ ಅದರಲ್ಲಿ ನಾನು ಉಪಯೋಗಿಸಿದ ಪದ ಬಂದರೆ ಆಮೇಲೆ ತಮ್ಮಿಂದ ಛೀಮಾರಿ ಮಾಡಿಸಿಕೊಳ್ಳಬೇಕಾಗಿ ಬರಬಹುದು. ಆದುದರಿಂದ ನಾನು ಇನ್ನು ಅದನ್ನು ಸರಿಯಾಗಿ ನೋಡಿಲ್ಲ ತಾವು ಇವತ್ತಿನ ದಿವಸ ಅವನ ಕುಟುಂಬಕ್ಕೂ ಸ್ವಲ್ಪ ಸಹಾಯ ಮಾಡಿ ಅವನು ಏನು ಓಡಿ ಹೋಗುವುದಿಲ್ಲ. ಅವನಿಗೂ ಎರಡೆರಡು ಕ್ವಿಂಟಾಲ್ ರಾಗಿಯನ್ನು ಪುಕಸಟ್ಟೆಯಾಗಿಲ್ಲದಿದ್ದರೂ ಸಾಲವಾಗಿ ಕೊಡಿ, ಆಮೇಲೆ ಲ್ಯಾಂಡ್ ರೆವಿನ್ಯೂ ವಸೂಲು ಮಾಡಿದ ಹಾಗೆ ವಸೂಲು ಮಾಡಿ. ಅವನಿಗೆ ಇವತ್ತು ಬೇರೆ ಕಡೆಗೆ ಎಲ್ಲೂ ಸಾಲ ಹುಟ್ಟುತ್ತಿಲ್ಲ. ನಮ್ಮ ರಾಜ್ಯದಲ್ಲಿ ಸಾಕಾದಷ್ಟು ಆಹಾರವಿದೆಯೆಂದು ಹೇಳುತ್ತೀರಿ. ಆದರೆ ರೈತನಿಗೆ, ದುರ್ಬಲ ವರ್ಗದವರಿಗೆ ಸಮಾಜದಲ್ಲಿರತಕ್ಕಂಥ ನಿಮ್ನ ವರ್ಗದವರಿಗೆ, ಅದರಲ್ಲೂ ಹರಿಜನ-ಗಿರಿಜನರಿಗೆ, ಹಿಂದುಳಿದವರಿಗೆ ೨-೨ ಕ್ವಿಂಟಾಲ್ ಪುಕ್ಸಟೆ ಸಾಧ್ಯವಿಲ್ಲದಿದ್ದರೆ ಸಾಲವಾಗಿ ಕೊಟ್ಟು, ಕಂತುಗಳಲ್ಲಿ ವಸೂಲು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಏತಕ್ಕೆಂದರೆ ಇವತ್ತು ಅವರ ಹತ್ತಿರ ಹಣವಿಲ್ಲ. ಇವತ್ತು ಸಹಕಾರ ಸಂಘಗಳ ಮೂಲಕ ಹಣವನ್ನು ತಾವು ಒದಗಿಸತಕ್ಕಂಥ ಸ್ಥಿತಿಯಲ್ಲಿಲ್ಲ. ದಯಮಾಡಿ ತಾವು ಈ ಕೆಲಸವನ್ನು ಮಾನವೀಯತೆಯ ದೃಷ್ಟಿಯಿಂದ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಈ ಫಾಡರ್ ಲೋನನ್ನು ತಾವು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಪುನಃ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಹಾರದ ವಿತರಣೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರೊಂದಿಗೆ ಸಮಾಲೋಚನೆ ಮಾಡುವಾಗ ಕೂಡ ಹೇಳಿದ್ದೇನೆ. ಬ್ಲಾಕ್ ಲೆವೆಲ್‌ನಲ್ಲಿ, ಪಂಚಾಯಿತಿ ಸೆಕ್ರೆಟರಿಗಳು, ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಏನಿದ್ದಾರೆ ಅವರುಗಳಿಗೆ ಕೆಲಸವಿಲ್ಲ, ಮಳೆ ಬೆಳೆ ಹೋಗಿರುವುದರಿಂದ ಇವತ್ತು ಅವರಿಗೆ ಏನೂ ಕೆಲಸವಿಲ್ಲ. ಅವರುಗಳನ್ನು ಪ್ರತಿಯೊಂದು ಪಂಚಾಯಿತಿಗಳಿಗೂ ಕಳುಹಿಸಿ ಫುಡ್ ಡಿಪೋಗಳನ್ನು ಕೋ-ಆಪರೇಟಿವ್ ಸೊಸೈಟಿ ಮುಖಾಂತರವಾಗಲೀ ಇಲ್ಲವೇ ಪಂಚಾಯಿತಿಗಳ ಮುಖಾಂತರವಾಗಲೀ, ಇಲ್ಲವೇ ನಿಮ್ಮ ಯೂತ್ ಕ್ಲಬ್‌ಗಳೇನಿವೆ, ಅವುಗಳ ಮುಖಾಂತರವಾಗಲೀ ಇಲ್ಲವೇ ಯಾವುದೋ ಒಂದು ಸಂಸ್ಥೆಯ ಮುಖೇನ ಅವರುಗಳ ಸಮ್ಮುಖದಲ್ಲಿ ಆಹಾರವನ್ನು ವಿತರಣೆ ಮಾಡಬೇಕು. ಏಕೆಂದರೆ ಮಾರಾಟ ಮಾಡುವಾಗ ಯಾವನೇ ಇರಲಿ, ಯಾವ ಪಕ್ಷದವರೇ ಇರಲಿ ಕೈಚಳಕ ಮಾಡತಕ್ಕಂಥದ್ದು ಸ್ವಾಭಾವಿಕ. ಆ ವ್ಯವಹಾರವನ್ನು ಮಾಡತಕ್ಕಂಥವರು ಸಾಮಾನ್ಯವಾಗಿ ಇಂಥ ದುರ್ವ್ಯವಹಾರಗಳಿಗೆ ಈಡಾಗುತ್ತಾರೆ. ಆದುದರಿಂದ ಪಂಚಾಯಿತಿ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳನ್ನೋ ಇಲ್ಲವೇ ಎಕ್ಸ್‌ಟೆನ್‌ಷನ್ ಆಫೀಸರ್‌ಗಳನ್ನೋ ಒಂದೊಂದು ಡಿಪೋಗಳಿಗೆ ಕಳುಹಿಸಿ ಅವರು ತನ್ನ ಮೇಲ್ವಿಚಾರಣೆಯಲ್ಲಿ ಆಹಾರದ ವಿತರಣೆಯನ್ನು ಮಾಡಲು ವ್ಯವಸ್ಥೆ ಮಾಡಬೇಕು.

ಇನ್ನು ನಮ್ಮ ತಾಲ್ಲೂಕಿನಲ್ಲಿ ಆಹಾರ ಪದಾರ್ಥ ದಾಸ್ತಾನು ಸಮೇತ, ಸಕ್ಕರೆ ಮೂಟೆ, ಎತ್ತು ಬಂಡಿಗಳ ಸಮೇತ ಪೊಲೀಸಿನವರು ಅವನನ್ನು ಹಿಡಿದು ಬಂಧನ ಮಾಡಿದರು. ಆಮೇಲೆ ಸಾಕಾದಷ್ಟು ಒತ್ತಡ ಬೀರಿ ಬಿಡಿಸಬೇಕಾಯಿತು. ಅಂಥ ಪ್ರಭಾವಿ ವ್ಯಕ್ತಿಗಳು ಯಾರು, ಅವರ ಹೆಸರೇನೆಂದು ಹೇಳುವುದಕ್ಕೆ ಹೋಗುವುದಿಲ್ಲ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳವರಿಗೆ ತಿಳಿಸಿದ್ದೇನೆ. ಆದುದರಿಂದ ನಾನು ಮೇಲೆ ತಿಳಿಸಿದ ವ್ಯವಸ್ಥೆಯನ್ನು ಮಾಡುವುದರ ಮುಖೇನ ಇಂಥ ಅವ್ಯವಹಾರವನ್ನು, ಅನೀತಿಯನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಬೇಕಾದರೆ ನೀವು ಗ್ರಾಮಾಂತರ ಪ್ರದೇಶಗಳಿಗೆ ಸಕ್ಕರೆ ಕೊಡತಕ್ಕಂಥದ್ದನ್ನು ಕಡಿಮೆ ಮಾಡಿ ೧೦ ಮೂಟೆಗೆ ಬದಲು ೨ ಮೂಟೆ ಕೊಡಿ ಸಾಕಾಗುತ್ತದೆ. ಇವತ್ತು ಅವನಿಗೆ ತಿನ್ನುವುದಕ್ಕೆ ಮುಂಚೆ ಅನ್ನವಿಲ್ಲ ಇನ್ನು ಅವನು ಸಕ್ಕರೆ ಎಲ್ಲಿಂದ ತೆಗೆದುಕೊಳ್ಳಬೇಕು. ಆದುದರಿಂದ ತಾವು ಮೊದಲು ಅಲ್ಲಿಗೆ ಜೋಳ, ಅಕ್ಕಿ, ರಾಗಿಯನ್ನು ಕೊಡಲಿಕ್ಕೆ ೨-೪ ಪಟ್ಟಾದರೂ ಈಗಿರುವ ಪ್ರಮಾಣವನ್ನು ಹೆಚ್ಚು ಮಾಡಬೇಕು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನು ಯಾರು ಅಂಗವಿಕಲರು, ದುರ್ಬಲರಾಗಿರತಕ್ಕಂಥವರು ಇದ್ದಾರೆ ಅವರಿಗೆ ಫ್ರೀಯಾಗಿ ಹಂಚ ತಕ್ಕ ವ್ಯವಸ್ಥೆ ಮಾಡಬೇಕು. ಫಾಡರ್‌ನ್ನು ಹಂಚಲು ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಹೋಬಳಿಯಲ್ಲಿಯೂ ೨-೩ ಫಾಡರ್ ಡಿಪೋಗಳನ್ನು ಮಾಡಿ ಯಾವ ಜಿಲ್ಲೆಯಲ್ಲಿ ಹುಲ್ಲು ಜಾಸ್ತಿ ಇದೆಯೋ ಅಲ್ಲಿಂದ ತರಿಸಿ ಅಲ್ಲಿಗೆ ಸಪ್ಲೈ ಮಾಡಿ. ಉದಾಹರಣೆಗೆ ನಾರ್ತ್ ಕೆನರಾ, ಶಿವಮೊಗ್ಗ, ಮಂಡ್ಯ ಮುಂತಾದ ಕೆಲವು ಕಡೆ ಮಾತ್ರ ಹುಲ್ಲು ಸಿಗುತ್ತಿದೆ ಅದನ್ನು ತರಿಸಿ ಹಂಚಿ ನಾವು ಕೆ.ಆರ್. ನಗರದಿಂದ ಸುಮಾರು ೪೦ ಲಾರಿ ಕೊಂಡಿದ್ದೇವೆ ಎಷ್ಟು ಸಿಗುತ್ತದೆಯೋ ಅಷ್ಟು ಹಂಚಿ ಇವತ್ತು ಎಲ್ಲರೂ ಕೊಂಡುಕೊಳ್ಳುವುದಕ್ಕೆ ಶಕ್ಯವಿಲ್ಲ. ಆದುದರಿಂದ ಇವತ್ತು ನೀವು ಫಾಡರ್‌ನ್ನು ಡಿಪೋಗಳ ಮುಖಾಂತರ ಒದಗಿಸುವುದಕ್ಕೆ ವ್ಯವಸ್ಥೆಗೊಳಿಸಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇವತ್ತು ಕೆಲವು ಕಡೆ ಮಳೆ ಹದವಾಗಿ ಆಗಿದೆ ಆದರೆ ಕೆರೆಗಳಲ್ಲಿ ನೀರು ನಿಲ್ಲುವಷ್ಟು ಆಗಿಲ್ಲ. ಬಹುಶಃ ಕೆಲವು ಕೆರೆಗಳಿಗೆ ಮಾತ್ರ ನೀರು ಬಂದಿರಬಹುದು, ಆದರೆ ನಾವು ಇಂಥ ಭೀಕರ ಸಮರದ ಹೋರಾಟದಲ್ಲಿರುವಾಗ ಇನ್ನು ಮುಂದಿನ ೯ ತಿಂಗಳ ಹೋರಾಟವನ್ನು ಎದುರಿಸಬೇಕಾಗಿ ಬಂದಿದೆ. ೧೯೭೨ರಲ್ಲಿ ಸುಮಾರು ೨೦ ಕೋಟಿ ರೂಪಾಯಿಗಳ ಮೆಷಿನರಿಯನ್ನು ಕೊಂಡಿದ್ದೇವೆ, ಅವುಗಳಲ್ಲಿ ಮುಂತಾದ ಮಿಷಿನರಿಗಳು ಎಲ್ಲಿಗೆ ಹೋದವು, ವಾಟರ್ ಟ್ಯಾಂಕ್‌ಗಳು ಏನಾದವು ಎನ್ನುವ ಬಗ್ಗೆ ಆಮೇಲೆ ಯೋಚನೆ ಮಾಡೋಣ. ಈ ಒಂದು ಸಮರದಲ್ಲಿ ಯಶಸ್ವಿಯಾಗುವುದು ಬಹಳ ಕಷ್ಟತರವಾದ ಕೆಲಸ. ಅನೇಕರಲ್ಲಿ ನಿಷ್ಠುರ ಕಟ್ಟಿಕೊಂಡು ಕೆಲಸ ಮಾಡಬೇಕಾದ ವಿಚಾರವಿದು. ಮಾನ್ಯ ಕಂದಾಯ ಸಚಿವರ ಆರೋಗ್ಯ ಸರಿಯಾಗಿಲ್ಲ ಎಂದು ನನ್ನ ಊರಿನಲ್ಲಿದ್ದಾಗ ನನಗೆ ತಿಳಿದು ಬಂತು. ಇಂಥಾ ಸನ್ನಿವೇಶದಲ್ಲಿ ಕಂದಾಯ ಇಲಾಖೆಯ ಆಡಳಿತವನ್ನು ನಿರ್ವಹಣೆ ಮಾಡಲು ತಮಗೆ ಸ್ವಲ್ಪ ತೊಂದರೆಯಾದರೂ, ಖುದ್ದು ತಾವೇ ಮೇಲ್ವಿಚಾರಣೆ ತೆಗೆದುಕೊಂಡು ಕೆಲಸ ಮಾಡಬೇಕೆಂದು ನನ್ನ ಪ್ರಾರ್ಥನೆ. ಇದು ಅಧಿಕಾರಿಗಳ ಮೇಲೆ ಬಿಡುವ ಪ್ರಶ್ನೆಯಲ್ಲ. ಅಲ್ಲದೆ, ಒಳ್ಳೆಯ ಕೆಲಸ ಮಾಡುತ್ತಾರೆ ಎಂದು ಕೆಲವು ದುಷ್ಟ ಶಕ್ತಿಗಳಿಗೂ ಅಧಿಕಾರ ಕೊಡಬೇಡಿ ; ಹಾಗೇನಾದರೂ ಕೊಟ್ಟರೆ, ಅದರಿಂದ ಮುಂದಕ್ಕೆ ತಮಗೇ ಅಪಾಯವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಡುತ್ತೇನೆ. ಇಪ್ಪತ್ತೊಂದೂವರೆ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ ಎನ್ನುವ ಒಂದು ಭಾವನೆಯಿಂದಲೇ ನಾವು ಸಂತೃಪ್ತರಾಗಬೇಕಾಗಿಲ್ಲ ; ಸಂತೃಪ್ತರಾಗಕೂಡದು. ಹಿಂದೆ ಬರಗಾಲ ಬಂದಾಗ, ಐದು ಜಿಲ್ಲೆಗಳಿಗೆ ಮಾತ್ರ ಸುಮಾರು ಅರವತ್ತು ಮೂರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆದುದರಿಂದ, ಇವತ್ತು ಕನಿಷ್ಠ ಎಂದರೆ, ನೂರು ಕೋಟಿ ರೂಪಾಯಿಗಳಷ್ಟನ್ನಾದರೂ ಖರ್ಚು ಮಾಡತಕ್ಕ ಸಿದ್ಧತೆಯನ್ನು ಮಾಡಿಕೊಳ್ಳದೇ ಹೋದರೆ, ಮುಂದೆ ಬಹಳ ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು, ಹುಬ್ಬಳಿಯಲ್ಲಿ ಮಾತನಾಡುತ್ತಾ, ಇದಕ್ಕಾಗಿ ನಾವು ಹದಿನಾಲ್ಕು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ನಮ್ಮ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಮಾರ್ಕೆಟಿಂಗ್ ಸೊಸೈಟಿಗಳಿಗೆ ಹುಲ್ಲನ್ನು ಕೊಳ್ಳಲಿಕ್ಕೆ ಒಂದು ಲಕ್ಷ ರೂಪಾಯಿ ಕ್ಯಾಷ್ ಕ್ರೆಡಿಟ್ ಸಾಲ ಕೊಡಿ ಎಂದರೆ, ನಮ್ಮಲ್ಲಿ ಹಣವಿಲ್ಲ ಎಂದು ಹೇಳುತ್ತಿದ್ದಾರೆ.

3-00 P. M.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ಹೇಳಿದ್ದು ಹದಿನಾಲ್ಕು ಕೋಟನ್ನು ಕೊಡುತ್ತೇವೆ ಎಂದು, ಹದಿನಾಲ್ಕು ಕೋಟಿ ರೂಪಾಯಿಗಳನ್ನಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —ಆದುದರಿಂದ, ನಾವು ಹೀಗೆ ಹೇಳಿಕೊಂಡೇ ಸಂತೃಪ್ತರಾಗುವುದು ಬೇಡ. ಮಾನ್ಯ ಹಣಕಾಸಿನ ಸಚಿವರು, ನಾನು ಯಾವುದೇ ರೂಪದಲ್ಲಿ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಬಹಳ ಕಳಕಳಿಯಿಂದ ಹೇಳಿದ್ದಾರೆ. ಈ ಸಮಸ್ಯೆ ಬಹಳ ತೀವ್ರವಾಗಿರುವುದರಿಂದ, ಮುಂಚಿತವಾಗಿಯೇ, ಕನಿಷ್ಠ ನೂರು ಕೋಟಿ ರೂಪಾಯಿಗಳ ವೆಚ್ಚಕ್ಕೆ ಸರ್ಕಾರದವರು ಸಿದ್ಧತೆಯನ್ನು ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಹಾರ ಪದಾರ್ಥಗಳ ದಾಸ್ತಾನು ನಮ್ಮಲ್ಲಿ ಸಾಕಷ್ಟು ಇದೆ. ಅದರಿಂದ ಪರಿಸ್ಥಿತಿಯನ್ನು ಸುಧಾರಿಸಬಹುದೆನ್ನುವ ಭಾವನೆಯನ್ನು ಕೈಬಿಟ್ಟು, ರಾಜ್ಯಕ್ಕೆ ಮುಂದಿನ ಒಂಬತ್ತು ತಿಂಗಳುಗಳಿಗೆ ಬೇಕಾಗುವ ಜೋಳ, ರಾಗಿ ಮುಂತಾದ ಆಹಾರ ಪದಾರ್ಥಗಳನ್ನು ಕೇಂದ್ರದಿಂದ ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ಮತ್ತೊಂದು ವಿಚಾರವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಭೂ ಅಭಿವೃದ್ಧಿ ಬ್ಯಾಂಕಿನವರು, ಸಣ್ಣ ಸಣ್ಣ ಹಿಡುವಳಿದಾರರಿಗೆ,

ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜನ್ಸಿ ಮುಖಾಂತರ ಹಣ ಸಹಾಯ ಮಾಡುತ್ತಿದರು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಒಂದು ಹೋಬಳಿ. ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಗೆ ಸಂಬಂಧಪಟ್ಟ ಸುಮಾರು ಒಂದು ಲಕ್ಷದ ಎಂಬತ್ತು ಸಾವಿರ ರೂಪಾಯಿಗಳ ಸಾಲದ ರೆಕಾರ್ಡುಗಳನ್ನು ಕಟ್ಟಿ ಇಟ್ಟು ಬಿಟ್ಟಿದ್ದಾರೆ. ಉಳಿದ ಐದು ತಾಲ್ಲೂಕುಗಳಿಗೆ, ಹಣದ ವಿತರಣೆಯನ್ನು ಚೆಕ್ ಮುಖಾಂತರ ಮಾನ್ಯ ಮಂತ್ರಿಗಳೊಬ್ಬರು ಮಾಡಿದ್ದಾರೆ. ದೇವೇಗೌಡರಿಗೆ ಬಿಟ್ಟು ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿನ ಜನರನ್ನು ಶಿಕ್ಷೆಗೆ ಗುರಿ ಮಾಡಬೇಕೆಂಬ ಒಂದು ಆಸೆ ಇದ್ದರೆ, ಅವರನೆಲ್ಲಾ ಗಡಿಪಾರು ಮಾಡಿಬಿಡಿ ಎಂದು ಸಲಹೆ ಮಾಡಬಯಸುತ್ತೇನೆ. ಆ ಹೋಬಳಿಯನ್ನು ಬೇರೊಂದು ರಾಷ್ಟ್ರಕ್ಕೆ ರವಾನೆ ಮಾಡುವ ಮುಖಾಂತರ ತಾವೆಲ್ಲಾ ಪುಣ್ಯ ಕಟ್ಟಿಕೊಳ್ಳಿ. ಇಲ್ಲಿರುವ ನ್ಯಾಯದ ತಕ್ಕಡಿಯನ್ನು ಕಿತ್ತು, ಹೊರಗಡೆ ತೆಗೆದುಕೊಂಡು ಹೋಗಿ ಬಿಸಾಕಿ ಎಂದು ಹೇಳುತ್ತೇನೆ. ಈ ರೀತಿ ಮಾಡಿದರೆ, ನೀವು ನಮ್ಮ ವಿಶ್ವಾಸವನ್ನು ಗೆಲ್ಲುವುದಕ್ಕಾಗುವುದಿಲ್ಲ, ನಮ್ಮ ನಾಲಿಗೆಯ ಹಿಡಿತವನ್ನು ಹಿಡಿಯುವುದಕ್ಕಾಗುವುದಿಲ್ಲ, ನಿಮಗದು ಸಾಧ್ಯವೂ ಅಲ್ಲ ಇದೊಂದು ಕ್ಷುಲ್ಲಕ ರಾಜಕಾರಣ, ಅದೂ ಮಂತ್ರಿಗಳೊಬ್ಬರು ಮಾಡಿರುವುದು. ಇದು ಆಡಳಿತ ಪಕ್ಷಕ್ಕಾಗಲೀ ಅಥವಾ ಸರ್ಕಾರಕ್ಕಾಗಲೀ ಗೌರವ ತರತಕ್ಕದ್ದಲ್ಲ.

ರಾಜ್ಯಕ್ಕೆ ಬಂದಿರುವ ಭೀಕರ ಬರಗಾಲದ ವಿರುದ್ಧ ಮಾಡಲಿರುವ ಸಮರದಲ್ಲಿ ನಾವು ನಮ್ಮ ಕೈಲಾದಷ್ಟು ಎಲ್ಲ ಸಹಕಾರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ ಎಂದು ಈ ಭಾಗದಿಂದ ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು, ಈ ದಿವಸ ರಾಜ್ಯದಲ್ಲಿ ತಲೆದೋರಿರುವ ಕ್ಷಾಮದ ಕುರಿತು........

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಯಾವ ಕಡೆಯಿಂದ ಮಾತನಾಡುತ್ತಿದ್ದಾರೆ ಎನ್ನುವುದು ನಮಗರ್ಥವಾಗಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ಇದನ್ನು ಸ್ವಾಗತ ಮಾಡುತ್ತಿದ್ದಾರೆಯೇ ಅಥವಾ ವಿರೋಧ ಮಾಡುತ್ತಿದ್ದಾರೆಯೇ ನಮಗೆ ಗೊತ್ತಾಗುತ್ತಾ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಾನು ಮೊದಲು ಯಾವ ಧಾಟಿಯಲ್ಲಿ, ಯಾವ ಶೈಲಿಯಲ್ಲಿ ಮಾತನಾಡುತ್ತಿದ್ದೆನೋ, ಅದೇ ಧಾಟಿಯಲ್ಲಿ, ಅದೇ ಶೈಲಿಯಲ್ಲಿ, ಈಗಲೂ ನನ್ನ ಮಾತುಗಳನ್ನು ಉಚ್ಚರಿಸುತ್ತೇನೆ. ನಾನು ಯಾರ ಪರವಾಗಿಯೂ ಮಾತನಾಡುವವನಲ್ಲ. ನಾನು ಹಿಂದೆ ಕಾಂಗ್ರೆಸಿಗನಾಗಿದ್ದೆ ಈಗಲೂ ಕಾಂಗ್ರೆಸ್ಸಿನವನೇ. ಆದರೆ, ನನ್ನ ಸ್ನೇಹಿತ ಮಾನ್ಯ ಸದಸ್ಯರನೇಕರು ಆಗಾಗ್ಗೆ ನನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮಗೆ, ನೀವು ಮಾಡಿರುವ ನೋವನ್ನು ಹೇಗೆ ತೀರಿಸಬೇಕು ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಗಾಜಿನ ಮನೆಯಲ್ಲಿರುವವರು, ಬೇರೊಬ್ಬರ ಮನೆಯ ಮೇಲೆ ಕಲ್ಲನ್ನು ಹಾಕುವ ಪ್ರಯತ್ನ ಮಾಡಬಾರದು, ಸಹನಶೀಲತೆಯಿಂದ ನಡೆದುಕೊಳ್ಳಬೇಕು. ವಾದ ವಿವಾದ ಮಾಡಬೇಕೆಂದಿದ್ದರೆ, ಇಲ್ಲಿ ಮಾಡಲೂ ಸಿದ್ಧ, ಹೊರಗಡೆ ಮಾಡಲೂ ಸಿದ್ಧ.

ಅಧ್ಯಕ್ಷರು.—ಅದನ್ನು ಹೊರಗಡೆ ಮಾಡಬಹುದು, ಇಲ್ಲಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಟಿ ಕೃಷ್ಣಪ್ಪ.—ಶ್ರೀಮಾನ್ ದೇವೇಗೌಡರವರು, ತಮ್ಮ ಜಿಲ್ಲೆಯ, ಪ್ರಾಮುಖ್ಯವಾಗಿ, ತಮ್ಮ ತಾಲ್ಲೂಕುಗಳಲ್ಲಿರುವ ಬರಗಾಲದ ಗಂಭೀರ ಪರಿಸ್ಥಿತಿ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ, ಅದರ ವ್ಯಾಪ್ತಿ ಮತ್ತು ಅದರ ತೀವ್ರತೆ ಯಾವ ವಿಧವಾದ ಹೋಲಿಕೆಗಳಿಗೂ ಸಹ ನಿಲುಕುವುದಿಲ್ಲ ಎನ್ನುವ ಮಾತನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಅದಕ್ಕನುಗುಣವಾಗಿ ಶ್ರಮ ಮತ್ತು ಪ್ರಯತ್ನ ಸರ್ಕಾರದಿಂದ ಮತ್ತು ಜನತೆಯಿಂದ ಆಗಬೇಕಾಗಿದೆ. ಆದುದರಿಂದ, ಈ ದಿಸೆಯಲ್ಲಿ ನಮ್ಮ ಸಾಧನೆ ಅಥವಾ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ.

ಅಧ್ಯಕ್ಷರು.—ನನಗೆ ಬಂದಿರುವ ಪಟ್ಟಿ ಪ್ರಕಾರ ಇನ್ನೂ ೧೫ ಜನ ಚರ್ಚೆಯಲ್ಲಿ ಭಾಗವಹಿಸುವವರಿದ್ದಾರೆ ಇನ್ನೂ ವಿರೋಧ ಪಕ್ಷದವರಿಂದ ಹೆಸರುಗಳು ಬಂದಿಲ್ಲ. ಆದುದರಿಂದ, ತಮ್ಮ ಭಾಷಣವನ್ನು ಐದು ನಿಮಿಷಗಳಲ್ಲೇ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಂಡ್ಯ ಜಿಲ್ಲೆಯಲ್ಲಿರುವ ಅಭಾವದ ಬಗ್ಗೆ ನಾನು ಹೇಳಬೇಕಾಗಿದೆ. ಬರಗಾಲ ಸಂಬಂಧವಾಗಿ ಹಳೆ ಮೈಸೂರಿನ ಭಾಗದಲ್ಲಿ ಮಾತನಾಡಲು ಅಧಿಕಾರ ಹೊಂದಿರತಕ್ಕವರಲ್ಲಿ, ನಾನೇ ಪ್ರಥಮ ಸ್ಥಾನ ಹೊಂದಿರತಕ್ಕವನು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನಿದ್ದೇನೆ. ಹಳೆ ಮೈಸೂರಿನ ಭಾಗದಲ್ಲಿರುವ ಅಭಾವದ ಕುರಿತು ಏನಾದರೂ ಮಾತನಾಡಬೇಕಾಗಿದ್ದರೆ, ಅದು ನನ್ನ ಹೊರತು, ಬೇರೆ ಯಾರಿಗೂ ಸಾಧ್ಯ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬರಗಾಲದ ತೀವ್ರತೆ ಬಹುಶಃ ನಾಗಮಂಗಲ ತಾಲ್ಲೂಕಿಗೆ ತಟ್ಟಿರುವಷ್ಟು ಜಿಲ್ಲೆಯ ಯಾವ ಭಾಗಕ್ಕೂ ತಟ್ಟಿರಲಾರದು. ಆದರೆ ಈಗ ಏನಾಗಿದೆ ಎಂದರೆ, ಮಂಡ್ಯ ಜಿಲ್ಲೆಯ ಬಗ್ಗೆ ಒಂದು ತಪ್ಪು ಕಲ್ಪನೆ ಸಾಮಾನ್ಯವಾಗಿ ಸರ್ಕಾರಕ್ಕೂ ಮತ್ತು ನಮ್ಮ ಜನತೆಗೂ ಇದೆ. ಮಂಡ್ಯ ಜಿಲ್ಲೆಯಲ್ಲಿ ಯಾವಾಗಲೂ ಹಸಿರು ಪೈರುಗಳು ಸಮೃದ್ಧವಾಗಿ ಸದಾ ಕಾಲದಲ್ಲಿ ನಿಲ್ಲತಕ್ಕದ್ದು ಎಂದರೂ ಕನ್ನಂಬಾಡಿ ಪ್ರದೇಶದಲ್ಲಿ ಯಾವಾಗಲೂ ನೀರು ಇರುತ್ತದೆ ಎನ್ನುವ ತಪ್ಪು ಕಲ್ಪನೆ ಇದೆ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಮಂಡ್ಯ ಜಿಲ್ಲೆಯಲ್ಲಿ ಇಂದೂ ಕೂಡ ಮೂರನೆಯ ಒಂದು ಭಾಗ ಮಾತ್ರ ನೀರಾವರಿಯಾಗಿದೆ. ಇನ್ನುಳಿದ ಮೂರನೆಯ ಎರಡು ಭಾಗ ಈಗಲೂ ಕೂಡ ಮಳೆಯ ಆಶ್ರಯದಿಂದ ಬೆಳೆಯನ್ನು ತೆಗೆಯತಕ್ಕ ಪ್ರದೇಶವಾಗಿದೆ. ಅದರಲ್ಲಿ ಕೃಷ್ಣರಾಜಪೇಟೆ, ನಾಗಮಂಗಲ, ಪಾಂಡವಪುರ ಈ ಭಾಗಗಳು ಇಂದೂ ಅಭಾವ ಪರಿಸ್ಥಿತಿಯಲ್ಲಿರುವಂಥ ಪ್ರದೇಶಗಳು. ಈ ಒಂದು ಹಿನ್ನಲೆಯಲ್ಲಿ ನಾವು ಈ ಒಂದು ವಿಚಾರವನ್ನು ಪ್ರಸ್ತಾಪಮಾಡಬೇಕಾಗಿದೆ. ಈಗ ಮಂಡ್ಯ ಜಿಲ್ಲೆಯಲ್ಲಿಯೂ ಕೂಡ ೭ ತಾಲ್ಲೂಕುಗಳಲ್ಲಿ ಬರಗಾಲ ಸಂಭವಿಸಿದೆ. ಶೇಕಡ ೭೬ರಷ್ಟು ಜನ ಬರಗಾಲದ ಬವಣೆಗೆ ಒಳಗಾಗಿದ್ದಾರೆ. ಅಂದರೆ ಒಟ್ಟು ಪ್ರಜಾಸಂಖ್ಯೆ ೧೧.೧೧,೩೫೫ ಇದ್ದರೆ, ಇದರಲ್ಲಿ ೮ ಲಕ್ಷ ಜನ ಬರಗಾಲ ಪರಿಸ್ಥಿತಿಯ ದವಡೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಇಲ್ಲಿ ಸಾಕಾದಷ್ಟು ಮಟ್ಟಿಗೆ ಪರಿಹಾರ ಕಾರ್ಯಗಳು ನಡೆದಿಲ್ಲ, ಎಂದು ನನ್ನ ಕಳಕಳಿಯ ಮನವಿ. ಇದಕ್ಕೆ ನನ್ನ ನಾಗಮಂಗಲ ತಾಲ್ಲೂಕಿನ ಉದಾಹರಣೆಯಾಗಿ ಹೇಳುವುದಾದರೆ, ಇಲ್ಲಿ ೬ ಸಹಸ್ರ ಜನ ಕೂಲಿಯ ಕೆಲಸದಲ್ಲಿ ನಿರತರಾಗಿದ್ದಾರೆ. ನಾನು ಮೊನ್ನೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಇವರ ಬಗ್ಗೆ ಕೇಳಿದಾಗ ಸುಮಾರು ಆರೂವರೆ ಸಹಸ್ರ ಜನ ಕೂಲಿಯ ಕೆಲಸದಲ್ಲಿ ಪ್ರತಿನಿತ್ಯ ತೊಡಗಿದ್ದಾರೆಂದು ಹೇಳಿದರು. ಇನ್ನೂ ಆರು ಸಾವಿರ ಜನ ಪ್ರತಿನಿತ್ಯ ಕೆಲಸವನ್ನು ಬೇಡಿ ಬರುತ್ತಿದ್ದಾರೆಂದೂ ಅವರಿಗೆ ಅಧಿಕಾರಿಗಳು ಕೆಲಸವನ್ನು ಒದಗಿಸುವುದಕ್ಕೆ ಸಾಧ್ಯಸಾಗಿಲ್ಲವೆಂದು ಹೇಳಿದರು. ಇಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ ಸರ್ಕಾರದವರು ಇದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಬರತಕ್ಕ ಭೀಕರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಮಾಡಿಕೊಂಡಿರತಕ್ಕ ಸಿದ್ಧತೆ ಅಷ್ಟು ಸಮರ್ಪಕವಾಗಿ, ಮತ್ತು ಸಮಗ್ರವಾದ ಸಿದ್ಧತೆಯಾಗುವುದಿಲ್ಲ. ಇದಕ್ಕಿಂತಲೂ ಹೆಚ್ಚಿನ ಸಿದ್ಧತೆ ಆವಶ್ಯಕವಾಗಿ ಬೇಕಾಗುತ್ತದೆ ಎನ್ನತಕ್ಕ ಎಚ್ಚರಿಕೆಯ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಮ್ಮ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರು ದೊರೆಯುತ್ತಿಲ್ಲ. ಮಾನ್ಯ ಕಂದಾಯ ಮಂತ್ರಿಗಳು, ನಮ್ಮ ಭಾಗದಲ್ಲಿ ಪ್ರವಾಸ ಮಾಡಿದಂಥ ಕಾಲದಲ್ಲಿ ರಿಗ್ ಯಂತ್ರಗಳ ಮೂಲಕ ಬಾವಿಗಳನ್ನು ಹೆಚ್ಚು ಹೆಚ್ಚಾಗಿ ತೋಡಿಸುವುದಕ್ಕೆ ಹುಕುಂ ಕೊಟ್ಟರು ಆ ಪ್ರಕಾರ ಬಾವಿಗಳು ಆಗಿವೆ. ಇನ್ನು ರಿಗ್ ಯಂತ್ರಗಳ ವಿಚಾರವನ್ನು ಹೇಳುವುದಾದರೆ, ಇವು ಅನೇಕ ಕಡೆಗಳಲ್ಲಿ ಅರ್ಧಂಬರ್ಧ ಕೆಲಸ ಮಾಡುತ್ತಿವೆ. ಪ್ರಾರಂಭವಾದ ಕೇವಲ ಮೂರು ನಾಲ್ಕು ದಿವಸದಲ್ಲಿ ಅನೇಕ ಕಡೆಗಳಲ್ಲಿ ಇವು ನಿಂತುಹೋಗಿವೆ. ಎಲ್ಲಾ ಕಡೆಯಲ್ಲಿಯೂ ಈ ರಿಗ್ ಯಂತ್ರಗಳ ಬಗ್ಗೆ ಇಂಥ ಪರಿಸ್ಥಿತಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ ರಿಗ್ ಯಂತ್ರಗಳಿಂದ ತೋಡಿದಂಥ ಬಾವಿಗಳ ಜೊತೆಗೆ, ಈ ಸೇದುವ ಬಾವಿಗಳೆ ನಮ್ಮ ಜನಗಳಿಗೆ ಚೆನ್ನಾಗಿರುತ್ತದೆ ಎನ್ನುವ ಅಭಿಪ್ರಾಯವೂ ಇದೆ. ಅವರ ಈ ಒಂದು ಅಭಿಪ್ರಾಯ ಸರಿಯಾದದು ಎಂದು ನಮಗೂ ಅನ್ನಿಸುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ತಮಗೆ ನೀರನ್ನು ಕಳುಹಿಸಿದ್ದೇನೆ, ಕುಡಿಯಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಆದ್ದರಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ನಮಗೆ ಸ್ವಾತಂತ್ರ್ಯ ಬಂದ ಇಷ್ಟು ದಿವಸಗಳಮೇಲೂ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಬಗೆಹರಿಸಿಲ್ಲ ಎಂದರೆ, ಮತ್ತು ಈ ಸಮಸ್ಯೆಯನ್ನು ನಾವು ತೀವ್ರವಾದಂಥ ರೀತಿಯಲ್ಲಿ ಎದರಿಸುತ್ತಿದ್ದೇವೆಂದು ಹೇಳಿದರೆ, ನಮಗೆ

ಗೌರವ ತರತಕ್ಕ ವಿಚಾರವಲ್ಲ. ಆದ್ದರಿಂದ ನಮ್ಮ ಹಳ್ಳಿಗಳಲ್ಲಿ ನಾವು ಏನನ್ನು ಒದಗಿಸುವುದಕ್ಕೆ ಆಗದಿದ್ದರೂ ಹೆಚ್ಚು ಪ್ರಮಾಣದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಮಾಡಿ ಅವರಿಗೆ ನೀರನ್ನು ಒದಗಿಸದೇ ಇದ್ದರೆ ನಾವು ಅವರ ಶಾಪಕ್ಕೆ ಗುರಿಯಾಗುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಇರತಕ್ಕ ನೀರಿನ ಅಭಾವವನ್ನು ಸರ್ಕಾರ ತನಗೆ ಸವಾಲು ಎಂದು ಭಾವಿಸಿ ಎದುರಿಸಬೇಕಾದಂಥ ಪರಿಸ್ಥಿತಿ ಇದೆ.

ಎರಡನೆಯದಾಗಿ, ಹುಲ್ಲಿನ ವಿಚಾರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಇದರ ಬಗ್ಗೆ ನಾವು ಇಲ್ಲಿ ಎಷ್ಟು ಹೇಳಿದರೂ ಸಹ ಸಂಪೂರ್ಣವಾದಂಥ ವರದಿಯನ್ನು ಇದರ ಬಗ್ಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ನಮ್ಮ ಕಡೆ ದನಗಳಿಗೆ ಮೂಗುದಾರ ಬಿಚ್ಚಿ ಓಡಿಸುತ್ತಿದ್ದಾರೆ. ಸಂತೆಗಳಲ್ಲಿ ದೊಡ್ಡ ದೊಡ್ಡ ಎತ್ತುಗಳನ್ನು ಕೇವಲ ಹತ್ತು ರೂಪಾಯಿಗಳಿಗೆ ಮಾರತಕ್ಕ ಪರಿಸ್ಥಿತಿ ಬಂದಿದೆ ಎಂದರೆ, ಇದನ್ನು ತಾವೇ ಯೋಚನೆ ಮಾಡಬೇಕು. ಈಗಿನ ಹುಲ್ಲಿನ ದರದಲ್ಲಿ, ಹುಲ್ಲನ್ನು ಕೊಂಡು ಕೊಂಡು ಎತ್ತುಗಳನ್ನು ಸಾಕಬೇಕಾದರೆ ಒಂದು ತಿಂಗಳಿಗೆ ಸುಮಾರು ೫೦೦–೬೦೦ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಕಡೆ ಒಂದು ಲಾರಿ ಹುಲ್ಲಿನ ಲೋಡನ್ನು ತರಬೇಕಾದರೆ, ಒಂದು ಸಹಸ್ರ ರೂಪಾಯಿ ಖರ್ಚಾಗುತ್ತದೆ. ಇಷ್ಟು ಹುಲ್ಲನ್ನು ದನಗಳು ಒಂದೆರಡು ತಿಂಗಳಲ್ಲಿ ಮೇದು ಬಿಡುತ್ತವೆ. ಇಂಥ ಪರಿಸ್ಥಿತಿಯಲ್ಲಿ ರೈತ ಜಾನುವಾರುಗಳನ್ನು ಕಾಪಾಡಿಕೊಂಡು ಬರತಕ್ಕದ್ದು ಬಹಳ ಕಷ್ಟವಾಗಿದೆ. ಮುಂದಿನ ದಿನಗಳಲ್ಲಿ ವ್ಯವಸಾಯಕ್ಕೆ ದನಗಳು ಮತ್ತು ಜಾನುವಾರುಗಳು ಸರಿಯಾಗಿ ಸಿಕ್ಕಲಾರದಂಥ ಪರಿಸ್ಥಿತಿ ಬರಬಹುದು. ಆದ್ದರಿಂದ ತಾವು ಈಗಲೇ ರೈತನಿಗೆ ಬೇಕಾದ ಜಾನುವಾರುಗಳನ್ನು ಕೊಂಡು ಕೊಳ್ಳುವುದಕ್ಕೆ ಬ್ಯಾಂಕಿನ ನೆರವನ್ನು ಕೊಡಬೇಕಾದಂಥ ಒಂದು ಯೋಜನೆಯನ್ನು ತಾವು ಹಾಕಿಕೊಳ್ಳಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಾನು ತೀರ ಬರಗಾಲ ಪ್ರದೇಶದಿಂದ ಬಂದಿರತಕ್ಕವನು. ಅಲ್ಲಿ ಆಹಾರ ಹಂಚಿಕೆಯ ಬಗ್ಗೆ ಇರತಕ್ಕ ನ್ಯೂನತೆಗಳನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಈ ಒಂದು ವಿಚಾರವನ್ನು ನಾವು ಪ್ರಧಾನವಾಗಿ ಇಟ್ಟುಕೊಳ್ಳಬೇಕು. ಆಹಾರವನ್ನು ಕೊಂಡು ಕೊಳ್ಳುವುದಕ್ಕೆ ನಮ್ಮ ಸಹಕಾರ ಸಂಘಗಳಲ್ಲಿ ಈಗ ಬಂಡವಾಳದ ಕೊರತೆ ಇದೆ. ಸಹಕಾರ ಸಂಘಗಳು ಸರ್ಕಾರದಿಂದ ಬರತಕ್ಕ ಆಹಾರ ಧಾನ್ಯವನ್ನು ಹಂಚತಕ್ಕ ಹೊಣೆಗಾರಿಕೆಯನ್ನು ಹೊತ್ತಿವೆ. ಆದರೆ ಈ ಹೊಣೆಗಾರಿಕೆಯನ್ನು ಸಮರ್ಪಕವಾದಂಥ ರೀತಿಯಲ್ಲಿ ಅವರು ನಿರ್ವಹಣೆ ಮಾಡಬೇಕಾದರೆ ಸಾಕಾದಷ್ಟು ಬಂಡವಾಳ ಇಲ್ಲ. ಅವರಲ್ಲಿ ಹಣ ಇಲ್ಲ. ಇವರಿಗೆ ಹಣವನ್ನು ಒಂದು ವೇಳೆ ಒದಗಿಸಿದಾಗ್ಯೂ ಕೂಡ ಸರ್ಕಾರದವರು ಇವರಿಗೆ ೧೬ ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದಾರೆಂದು ಒಂದು ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ.

೧೬ ಪರ್ಸೆಂಟ್ ಬಡ್ಡಿಯನ್ನು ಈ ಆಹಾರ ಧಾನ್ಯದ ಮೇಲೆ ಹಾಕುವುದರಿಂದ ನಿಜವಾಗಿಯೂ ಸಹ ಅವರು ಕೊಂಡುಕೊಳ್ಳುವ ಶಕ್ತಿ ಸಂಪೂರ್ಣವಾಗಿ ಕುಸಿದು ಹೋಗಿದೆ. ಆದುದರಿಂದ ನಷ್ಟವಾಗಿರತಕ್ಕಂಥ ರೈತನಿಗೆ ಈ ಹೊರೆ ಹೇರುವುದು ಸರಿಯಾದುದಲ್ಲ ಎಂದು ನನ್ನ ಅಭಿಪ್ರಾಯ, ಆದುದರಿಂದ ಸರ್ಕಾರದವರು ಬಡ್ಡಿರಹಿತ ಸಾಲಗಳನ್ನು ಆಹಾರ ಸಂಘಗಳಿಗೆ ಕೊಟ್ಟು ಆಹಾರ ಪದಾರ್ಥಗಳನ್ನು ಸಮರ್ಪಕವಾದ ರೀತಿಯಲ್ಲಿ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತುಮಕೂರು ಜಿಲ್ಲೆ ಮತ್ತು ಮಂಡ್ಯದಲ್ಲಿ ಕೆಲವು ಭಾಗಗಳಲ್ಲಿ ಕ್ಷಾಮದ ಒಂದು ಪರಿಸ್ಥಿತಿ ಬರುವುದು ಹೊಸದೇನೂ ಅಲ್ಲ. ಒಂದು ವರ್ಷ ಭೀಕರವಾಗಿ ಬರಬಹುದು, ಮುಂದಿನ ವರ್ಷ ಸ್ವಲ್ಪ ಕಡಿಮೆ ಬರಬಹುದು ಇದು ಪರಂಪರಾನುಗತವಾಗಿ ಬಂದಿರುವ ವಿಚಾರ. ಅದನ್ನು ತಪ್ಪಿಸುವುದಕ್ಕೆ ಒಂದು ಮಾರ್ಗ ಇದೆ. ಇದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆಯುವುದಕ್ಕೆ ಒಂದು ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಈ ಬಗ್ಗೆ ಒಂದು ಸಲಹೆ ಮಾಡುವುದು ಏನೆಂದರೆ ಈ ಹೇಮಾವತಿ ಯೋಜನೆಯಿಂದ ನಾಗಮಂಗಲ ಮತ್ತು ತುಮಕೂರು ಜಿಲ್ಲೆಗೆ ನೀರು ಕೊಡಲು ಸಾಧ್ಯ ಇದೆ. ಅವರಿಗೂ ಈ ನೀರು ಕೊಡಲು ತೀರ್ಮಾನವನ್ನು ಮಾಡಿದ್ದೇವೆ ಎಂದು ಸರ್ಕಾರದವರು ಪದೇ ಪದೇ ಹೇಳುತ್ತಿದ್ದಾರೆ. ಅದಕ್ಕೆ ಬೇಕಾದ ಹಣವನ್ನು ಒದಗಿಸಿ ನಾಲೆಯನ್ನು ತೋಡಿಸಿ ಅದರ ಅನುಕೂಲವನ್ನು ಉಪಯೋಗಿಸಿದ್ದೇ ಆದರೆ, ಈ ಒಂದು ಶಾಶ್ವತವಾದ ಪರಿಹಾರ ಕಾಮಗಾರಿಯನ್ನು ಮಾಡಿಸಿದ್ದೇ ಆದರೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ. ಅದು ಬಿಟ್ಟು ಪರಿಹಾರ ಕಾಮಗಾರಿ ಮಾಡಿಸುತ್ತೇವೆಂತ ಹೇಳಿ ಈ ಮಣ್ಣನ್ನು ಆ ಕಡೆ ಎತ್ತಿ ಹಾಕುವುದು, ಆ ಮಣ್ಣನ್ನು ಈ ಕಡೆ ಎತ್ತಿ ಹಾಕುವುದು ಮಾಡಿದರೆ

ಜನರಿಗೆ ಉದ್ಯೋಗ ಒದಗಿಸಿಕೊಡಬೇಕು ಅನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಸರ್ಕಾರದವರು ಅರಿತುಕೊಳ್ಳಬೇಕು. ಕ್ಷಾಮ ಪರಿಹಾರ ಕಾಮಗಾರಿಗಳು ಎಲ್ಲಾ ಕಡೆಯೂ ನಡೆದಿದೆ, ಆದರೆ ಕ್ಷಾಮ ತೊಲಗಲಿಲ್ಲ. ಕ್ಷಾಮ ತೊಲಗಬೇಕಾದರೆ ಈ ಒಂದು ಹಿಡುಗಿದೆ ಒಂದು ಸಿದ್ಧಾಂತದ ಇದೆ. ಅದೇನು ಏನೆಂದರೆ ಹೇಮಾವತಿ ಯೋಜನೆಯಿಂದ ನೀರು ಒದಗಿಸಿಕೊಡತಕ್ಕಂಥಾದ್ದನ್ನು ಸರ್ಕಾರದವರು ಅರ್ಥ ಮಾಡಿಕೊಂಡಿದ್ದಾರೆ, ಇದರಲ್ಲಿ ಭಿನ್ನಾಭಿಪ್ರಾಯ ಏನೂ ಇಲ್ಲ. ಆದರೆ ಇದುವರೆಗೂ ಸಹ ಸರ್ಕಾರದವರು ಮತ್ತು ನಮ್ಮ ಸ್ನೇಹಿತರು ನಮ್ಮ ಕಡೆ ಅಂದರೆ ನೀರಾವರಿ ಪಡೆಯದೇ ಇರತಕ್ಕಂಥಾವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದರೇ ವಿನಾ ಸಹಾಯ ನೀಡಲಿಲ್ಲ. ಆದಂದರಿಂದ ಈಗಲಾದರೂ ಕೂಡ ಈ ಹೇಮಾವತಿ ಯೋಜನೆಯಲ್ಲಿ ಈ ನಾಲೆಯ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ಈ ಭಾಗದ ಜನಗಳಿಗೆ ಆಗಾಗ್ಗೆ ಬರತಕ್ಕಂಥಾ ಕ್ಷಾಮವನ್ನು ತಡೆಗಟ್ಟಬೇಕು ಎಂದು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.— ಬೆಂಗಳೂರಿನಲ್ಲಿ ಬರಗಾಲ ಇಲ್ಲ ಶ್ರೀಮಾನ್ ಶಾಮಣ್ಣನವರು ತಮ್ಮ ಚರ್ಚೆಯನ್ನು ಬೇಗನೆ ಮುಗಿಸಬೇಕು.

† ಶ್ರೀ ಟಿ. ಆರ್. ಶಾಮಣ್ಣ (ಫೋರ್ಟ್).— ಮಾನ್ಯ ಸಭಾಧ್ಯಕ್ಷಣಿಯವರೇ, ತಾವು ಬೆಂಗಳೂರಿನಲ್ಲಿ ಬರಗಾಲ ಇಲ್ಲ ಎಂದು ಹೇಳಿದಿರಿ. ಆದರೆ ಬರಗಾಲದಲ್ಲಿ ಇರುವವರ ಬಗ್ಗೆ ಹೆಚ್ಚಿನ ಸಹಾನುಭೂತಿ ಇದೆ ಅಂತ ನಾನು ಹೇಳುತ್ತೇನೆ. ಈಗ ಈ ಬೆಳೆಯನ್ನು ಬೆಳೆಯತಕ್ಕಂಥಾ ಜನ ಕ್ಷಾಮ ಪೀಡಿತ ಪ್ರದೇಶದ ಜನರಾದರು, ಅದರಿಂದ ಪಟ್ಟಣದ ಜನರೂ ಕೂಡ ಈವೊತ್ತಲ್ಲ ನಾಳೆ ತೊಂದರೆಗೆ ಈಡಾಗತಕ್ಕಂಥಾ ಪರಿಸ್ಥಿತಿ ಬರುತ್ತದೆ ಅನ್ನುವ ಶಂಕೆ ನನಗೆ ಇದೆ. ಆದುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಮಾನ್ಯ ಅಧ್ಯಕ್ಷರಿಗೆ ಬರೆದೆ. ನಾನು ಕಳೆದ ೬ ತಿಂಗಳುಗಳಿಂದ ಕರ್ನಾಟಕದ ನಾನಾ ಭಾಗಗಳಲ್ಲಿ ಸುತ್ತಾಡತಕ್ಕಂಥಾ ಅವಕಾಶ ಒದಗಿತ್ತು. ಆ ಕಡೆ ಚಿತ್ರದುರ್ಗದಿಂದ ಹಿಡಿದು ಶಿವಮೊಗ್ಗದವರೆಗೂ, ಮತ್ತು ಈ ಕಡೆ ಶೃಂಗೇರಿಯಿಂದ ಹಿಡಿದು ಕುಣಿಗಲ್ ಅದರ ಮುಂದಿನವರೆಗೂ ಹಾಗೂ ಕೋಲಾರ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಮತ್ತು ಬಳ್ಳಾರಿಯಲ್ಲಿ ಪ್ರವಾಸ ಮಾಡಿದಾಗ ಅಲ್ಲಿ ಮಳೆ ಇಲ್ಲದೆ ಜನ ಆಗಲೇ ಬರಗಾಲ ಪರಿಸ್ಥಿತಿಯಲ್ಲಿ ಇದ್ದರು. ಈ ಬರ ಬರುವುದಕ್ಕೆ ಮುಂಚೆ ಅಲ್ಲಿ ಮೊದಲೇ ಬರ ಇತ್ತು. ಅದನ್ನು ನಾನು ಕಣ್ಣಾರೆ ನೋಡಿ ಇದರ ಬಗ್ಗೆ ಚರ್ಚೆ ಆಗುತ್ತದೆ ಎಂದು ತಿಳಿದು ಈ ಚರ್ಚೆಗೆ ನನಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿದ್ದಕ್ಕೆ ಆ ಬಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ.

ಈಗ ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆ ಪ್ರಕಾರ ಸುಮಾರು ೧೩ ಜಿಲ್ಲೆಗಳಲ್ಲಿ ೧೦೮ ತಾಲ್ಲೂಕುಗಳಲ್ಲಿ ಈ ಕ್ಷಾಮ ಪರಿಸ್ಥಿತಿ ಇತಕ್ಕಂಥಾದ್ದು ಬಹಳ ಕಠಿಣವಾದಂಥಾ ಪರಿಸ್ಥಿತಿಯಾಗಿದೆ. ಅವರ ಹೇಳಿಕೆ ಪ್ರಕಾರ ಹೋದ ಬರಗಾಲದಲ್ಲಿ ಸುಮಾರು ೮೨ ಲಕ್ಷ ಜನರಿಗೆ ತೊಂದರೆ ಆದರೆ ಈ ಬರಗಾಲದಲ್ಲಿ ಸುಮಾರು ೧ ಕೋಟಿ ೮೯ ಲಕ್ಷ ಜನರಿಗೆ ತೊಂದರೆಯಾಗುತ ದೆ ಅನ್ನುವ ಅಂಕಿಅಂಶಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಶೇಕಡಾ ೫೦ ಭಾಗಕ್ಕಿಂತ ಹೆಚು ಜನ ತೊಂದರೆಗೆ ಸಿಕ್ಕಿಹಾಕಿಕೊಳ್ಳುವಂಥಾ ವಿಚಾರ ಶೋಚನೀಯವಾದ ವಿಚಾರ. ಆದರೆ ಹೋದ ಸಲ ೧೯೬೫-೬೬ ರಲ್ಲಿ ಕ್ಷಾಮ ಬಂದಾಗ ಕೆಲವು ಅನುಭವಗಳು ಆಗಿದ್ದರೂ ಕೂಡ ಅದರಲ್ಲಿ ಇನ್ನೂ ಎದುರಿಸಬೇಕಾದಂಥಾ ತೊಡಕುಗಳು ಮತ್ತು ತೊಂದರೆಗಳನ್ನು ಸರ್ಕಾರ ತಿಳಿದುಕೊಂಡಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದನ್ನು ಯಾವರೀತಿಯಿಂದ ಎದುರಿಸಬೇಕು ಅನ್ನುವ ಬಗ್ಗೆ ಯೋಚನೆ ಮಾಡಬೇಕು ಅಂತ ಹೇಳುವುದನ್ನು ನಾನೇನೂ ಹೇಳಬೇಕಾದ್ದಿಲ್ಲ. ನಾನಾದರೂ ಕೂಡ ಹೇಳಬೇಕಾದುದು ಇಷ್ಟೆ. ತಮಿಳುನಾಡಿನಲ್ಲಿ ಬರಗಾಲ ಬಂದಂಥಾ ಸಂದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳನ್ನು ತಮಿಳುನಾಡಿಗೆ ಕರೆಸಿಕೊಂಡು ಅಲ್ಲಿ ಎಲ್ಲಾ ಕಡೆಯೂ ತೋರಿಸಿ ಹೆಚ್ಚಿನ ಸಹಾಯವನ್ನು ಕೇಂದ್ರ ಸರ್ಕಾರದಿಂದ ಆ ರಾಜ್ಯ ಸರ್ಕಾರದವರು ಪಡೆದರು. ಅದೇ ರೀತಿಯಾಗಿ ಈ ಮಂತ್ರಿಗಳು ಬರುವುದಕ್ಕೆ ಬದಲು ಪ್ರಧಾನ ಮಂತ್ರಿಗಳು ಬಂದರೆ ಹೆಚ್ಚಿನ ಅನುಕೂಲ ಆಗಬಹುದು ಎಂದು ಹೇಳುತ್ತೇನೆ. ಅವರು ತಮಿಳುನಾಡಿಗೆ ಯಾವ ಕಾರಣಕ್ಕಾಗಿ ಬಂದಿದ್ದರೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಪರಿಸ್ಥಿತಿ ನಮ್ಮ ಕಷ್ಟ ಪರಿಹಾರ ಮಾಡಿಕೊಳ್ಳಬೇಕಾದರೆ ಇಲ್ಲಿಗೆ ಪ್ರಧಾನ ಮಂತ್ರಿಗಳನ್ನು ಕರೆಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಪಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಆಹಾರಧಾನ್ಯ ಜಾಸ್ತಿ ಇದೆ ಎಂದು ಸ್ವಲ್ಪ ಬಿಗಿ ಇಲ್ಲದೆ ಖರ್ಚು ಮಾಡುತ್ತಿದ್ದಾರೆ. ಹೀಗಾದರೆ ಮುಂದೆ ಬರತಕ್ಕಂಥಾ ತೊಂದರೆ ಕಷ್ಟವಾಗುತ್ತವೆ ಆದುದರಿಂದ ಇದನ್ನು ಸ್ವಲ್ಪ ಬಿಗಿ ಮಾಡಿ ಮುಂದೆ ಬರತಕ್ಕಂಥಾ ತೊಂದರೆ ಸ್ವಲ್ಪ ಮೀಸಲಾಗಿಟ್ಟುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ. ಕೆಲವು ಸಂದರ್ಭದಲ್ಲಿ ಈ ಆಹಾರಧಾನ್ಯವನ್ನು ಹೆಚ್ಚು ಹೆಚ್ಚಾಗಿ ಕೊಡುತ್ತಿದ್ದಾರೆ. ಪಟ್ಟಣಗಳಲ್ಲಿ ಜಾಗ ಇಲ್ಲ ಅಂತ ಹೇಳಿ, ಮತ್ತು ಕೆಲವು ಕಡೆಗಳಲ್ಲಿ ಆಹಾರಧಾನ್ಯ ಹುಳಿತು ಕೊಳೆತುಹೋಗುತ್ತದೆ ಅಂತ ಹೇಳಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಕೊಡುತ್ತಿದ್ದಾರೆ. ಈ ಬಗ್ಗೆ ನಾನು ಹೇಳುವುದು ಇಷ್ಟೆ ಇದರ ಬಗ್ಗೆ ಸ್ವಲ್ಪ ನಿಯಂತ್ರಣ ಇಟ್ಟುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಒಂದು ಪ್ರಾಮುಖ್ಯವಾದ ವಿಚಾರ ಮುಂದೆ ಬರತಕ್ಕಂಥಾ ಕಷ್ಟದ ದಿನಗಳಿಗೆ ದನಗಳಿಗೆ ಬೇಕಾಗಿರತಕ್ಕಂಥಾ ಹುಲ್ಲು ಮತ್ತು ಇತರ ಮೇವುಗಳನ್ನೂ ಕೂಡ ಸಂಗ್ರಹಣ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಬೇಕು. ಈಗಾಗಲೇ ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಸಾಲ ವಸೂಲ್ಮಾಡುವುದರ ಬಗ್ಗೆ ಸ್ವಲ್ಪ ಕನಿಕರ ಇರಲಿ ಎಂದು ಹೇಳಿದ್ದಾರೆ. ತೊಂದರೆಗೆ ಈಡಾಗಿರತಕ್ಕಂಥಾ ಜನರಿಗೆ ಅವರು ಕೊಡಬೇಕಾದಂಥಾ ಸಾಲವನ್ನು ವಸೂಲ್ಮಾಡುವುದಕ್ಕೆ ಹೆಚ್ಚಿನ ತೊಂದರೆಯನ್ನು ಕೊಡಬೇಡಿ ಎಂದು ಅವರು ಪ್ರಸ್ತಾಪ ಮಾಡಿದರು. ಇನ್ನು ಲೆವಿ ವಸೂಲ್ಮಾಡುವ ಬಗ್ಗೆ ಮತ್ತು ರೆಮಿಷನ್ ಬಗ್ಗೆ ಜನಗಳಿಗೆ ಸಾಕಷ್ಟು ಅನುಕೂಲವಾಗುವ ಹಾಗೆ ಮಾಡಿಕೊಡಬೇಕು ಮತ್ತು ಈಗ ಒದಗಿಸಿರತಕ್ಕಂಥಾ ಸರಿಯಾದ ರೀತಿಯಲ್ಲಿ ಸದ್ವಿನಿಯೋಗವಾಗುವ ಹಾಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತೇನೆ. ಜನಗಳು ತಮ್ಮ ಕಾಲಮೇಲೆ ನಿಂತುಕೊಳ್ಳುವುದಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ದಾನದ ರೂಪದಲ್ಲಿ ಕೊಡದೇ ತಮ್ಮ ಕಾಲ ಮೇಲೆ ಸ್ವಶಕ್ತಿಯಿಂದ ನಿಂತುಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಜನಗಳಿಗೆ ಮುಖ್ಯವಾಗಿ ಬೇಕಾಗಿತಕ್ಕಂಥಾದ್ದು ನೀರು ಮತ್ತು ಹಣ. ಇವು ಸರಿಯಾದ ರೀತಿಯಲ್ಲಿ ಉಪಯೋಗಬೇಕು, ತೊಂದರೆಗೊಳಪಟ್ಟ ಜನರಿಗೆ ಇದು ಸರಿಯಾದ ರೀತಿಯಲ್ಲಿ ತಲಪುವುದಕ್ಕೆ ಏರ್ಪಾಡು ಮಾಡಬೇಕು. ಇದಕ್ಕೆ ಒಂದು ಸರಿಯಾದ ವ್ಯವಸ್ಥೆ ಆಗದೇ ಹೋದರೆ ಮತ್ತೆ ಬಹಳ ಕಷ್ಟವಾಗುತ್ತದೆ ಅಲ್ಲದೆ ಇದರಲ್ಲಿ ಮಧ್ಯವರ್ತಿ ದಳ್ಳಾಳಿಗಳು ಮತ್ತು ಲಪಟಾಯಿಸುವ ಜನಗಳು ಇದ್ದರೆ ಇದು ಲಪಟಾಯಿಸದೇ ಇದ್ದ ಹಾಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತು ಈ ಕ್ಷಾಮಂದ ಹಾವಳಿ ನಮ್ಮ ರಾಜ್ಯದಲ್ಲಿ ಜನರಿಗೆ ಒಂದು ಹೆಚ್ಚಿನ ತೊಡಕು ಮತ್ತು ತೊಂದರೆಗಳು ಆಗದೇ ಇದ್ದ ಹಾಗೆ ಎದುರಿಸಬೇಕು ಎಂದು ಹೇಳುತ್ತೇನೆ ಈ ಕ್ಷಾಮ ಪೀಡಿತ ಪ್ರದೇಶದ ಜನರಿಗೆ ಒಂದು ಹೆಚ್ಚಿನ ಅನುಕೂಲ ಕಲ್ಪಿಸಿ ಇದು ಮುಂದೆ ಬರದೇ ಇದ್ದ ಹಾಗೆ ಅದನ್ನು ತಡೆಗಟ್ಟುವ ಒಂದು ಕಾರ್ಯಕ್ರಮ ಕೈಗೊಳ್ಳುವುದು ಆವಶ್ಯಕ ಎಂದು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷಣೆಯವರಿಗೆ ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ. ಪಿ. ಜೋಗಣ್ಣನವರ್ (ನರಗುಂದ).— ಸನ್ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಕಂದಾಯ ಸಚಿವರು ಕ್ಷಾಮ ಪರಿಸ್ಥಿತಿಯ ಬಗ್ಗೆ ಮಂಡಿಸಿದಂತಹ ವರದಿಯನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ನಮ್ಮ ಜಿಲ್ಲೆಯ ಪರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಒಟ್ಟು ೧೭ ತಾಲ್ಲೂಕುಗಳಿವೆ. ಈಗಾಗಲೇ ೧೩ ತಾಲ್ಲೂಕುಗಳನ್ನು ಬರಗಾಲ ಪರಿಸ್ಥಿತಿಗೆ ಒಳಪಡಿಸಿದ್ದಾರೆ. ನರಗುಂದ್, ಹಾನಗಲ್, ಧಾರವಾಡ, ಶಿಗ್ಗಾವ್ ಈ ನಾಲ್ಕು ತಾಲ್ಲೂಕುಗಳನ್ನು ಅದರಲ್ಲಿ ಸೇರಿಸಿಲ್ಲ. ಕಳೆದ ತಿಂಗಳು ೧೭ನೇ ತಾರೀಖು ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ೨-೩ ದಿವಸಗಳ ಕಾಲ ಪ್ರವಾಸ ಮಾಡಿದಾಗ ನಾನೂ ಸಹ ಅವರ ಜೊತೆಯಲ್ಲಿದ್ದೆ. ಡಿ. ಸಿ. ಅವರು ಕಳುಹಿಸಿದ ವರದಿಯ ಆಧಾರದ ಮೇಲೆ ಕೆಲವು ತಾಲ್ಲೂಕ್‌ಗಳು ಪೂರ್ತಾ ಬರಗಾಲಕ್ಕೆ ಒಳಗಾಗಿವೆ, ಮತ್ತೆ ಕೆಲವು ತಾಲ್ಲೂಕ್‌ಗಳು ಅರ್ಧ ಬರಗಾಲಕ್ಕೆ ಒಳಗಾಗಿವೆ ಎಂದು ಎರಡು ವಿಭಾಗ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಅಲ್ಲಿ ಪ್ರವಾಸ ಮಾಡಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿದ ಮೇಲೆ ಉಳಿದ ತಾಲ್ಲೂಕ್‌ಗಳನ್ನು ಸಹ ಬರಗಾಲ ಪರಿಸ್ಥಿತಿಯಲ್ಲಿ ಕೂಡಿಸುತ್ತೇನೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಆ ಕೆಲಸವನ್ನು ಮಾಡಿಲ್ಲ. ಮಾನ್ಯ ಮಂತ್ರಿಗಳು ಅಲ್ಲಿ ಪ್ರವಾಸ ಮಾಡಿದ ಸಮಯದಲ್ಲಿ ನೋಡಿದ ಅನುಭವದ ಮೇಲೆ, ಜನರ ಹೇಳಿಕೆಯ ಮೇರೆಗೆ ಮತ್ತು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಉಳಿದ ನಾಲ್ಕು ತಾಲ್ಲೂಕ್‌ಗಳನ್ನು ಬರಗಾಲ ಪ್ರದೇಶವೆಂದು ಪರಿಗಣಿಸಬೇಕೆಂದು ವಿನಂತಿ ಮಾಡಿಕೊಂಡು, ಅಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಕೆಲಸ ಒದಗಿಸುವ ವಿಚಾರವನ್ನು ಪೇಜ್ ೭ರಲ್ಲಿ ಹೇಳಿದ್ದೀರಿ. ಅದರಂತೆ

೧೩ ತಾಲ್ಲೂಕ್‌ಗಳಲ್ಲಿ ಕೆಲವು ಕೆಲಸಗಳನ್ನು ಪ್ರಾರಂಭ ಮಾಡಿದ್ದೀರಿ. ಸಾಯಿಲ್ ಕನ್ಸರ್‌ವೇಷನ್ ಕೆಲಸವನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ನಾವು ಡಿ. ಸಿ. ಅವರ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೇವೆ. ಅದರಂತೆ ಒಂದೆರಡು ಸೆಂಟರ್‌ಗಳನ್ನು ತೆಗೆದು ಕೆಲವು ತಾಲ್ಲೂಕ್‌ಗಳಲ್ಲಿ ಕೆಲಸ ಪ್ರಾರಂಭ ಮಾಡಿದರು. ಆದರೆ ಸಾಕಷ್ಟು ಸಿಬ್ಬಂದಿ ಇಲ್ಲದೆ ಕೆಲಸವೆಲ್ಲಾ ಅಪೂರ್ಣವಾಗಿದೆ. ಸಿಬ್ಬಂದಿ ಇಲ್ಲ ಎಂಬ ನೆಪದಲ್ಲಿ ಕೆಲಸ ಅಪೂರ್ಣವಾಗಬಾರದು. ಈ ೧೩ ತಾಲ್ಲೂಕ್‌ಗಳಲ್ಲಿಯೂ ಸಾಯಿಲ್ ಕನ್ಸರ್‌ವೇಷನ್ ಕೆಲಸವನ್ನು ತೀವ್ರಗತಿಯಿಂದ ಕೈಕೊಂಡು ಮುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಬಂದ ವರದಿಯ ಪ್ರಕಾರ ಅಲ್ಲಿ ಕೆಲಸ ಕೈಕೊಳ್ಳಲು ಸಾಕಷ್ಟು ದುಡ್ಡನ್ನು ಸರ್ಕಾರದವರು ಕೊಟ್ಟಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ಆದಕಾರಣ ಸಾಕಷ್ಟು ದುಡ್ಡನ್ನು ಒದಗಿಸಿ ಎಲ್ಲ ಜನರಿಗೂ ಉದ್ಯೋಗ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಮಲೆನಾಡು ತಾಲ್ಲೂಕ್‌ಗಳಲ್ಲಿ ಭತ್ತವನ್ನು ಬೆಳೆಯುತಕ್ಕಂಥ ಕೆಲವು ಕ್ಷೇತ್ರಗಳಿವೆ. ಆದರೆ ಶಿಗ್ಗಾವ್, ಹಾನಗಲ್, ಕಲಘಟಗಿ, ಹಿರೇಕೆರೂರು ಮತ್ತು ಧಾರವಾಡದ ಪಶ್ಚಿಮ ಭಾಗಗಳಲ್ಲಿ ಸಕಾಲಕ್ಕೆ ಮಳೆಯಾಗದೆ ಭತ್ತದ ಬೆಳೆಯೆಲ್ಲಾ ಹಾಳಾಗಿದೆ. ಸರಿಯಾಗಿ ಪೀಕು ಬರದೆ ಭತ್ತವೆಲ್ಲಾ ಜೊಳ್ಳಾಗಿದೆ. ಒಳ್ಳೆಯ ಬೆಳೆ ಬರುವ ಸ್ಥಿತಿ ಇಲ್ಲ. ಆದರೂ ಕೂಡ ಆ ಭಾಗಗಳನ್ನು ಬರಗಾಲ ಪ್ರದೇಶಗಳೆಂದು ಪರಿಗಣನೆ ಮಾಡಿಲ್ಲ. ಮತ್ತು ಆ ಭಾಗದ ಜನರಿಗೆ ಯಾವುದೇ ಕೆಲಸವನ್ನು ಒದಗಿಸಿಕೊಟ್ಟಿಲ್ಲ. ಈ ಬಗ್ಗೆ ಸರ್ಕಾರದವರು ಪುನರ್‌ಪರಿಶೀಲಿಸಿ ಈ ತಾಲ್ಲೂಕುಗಳನ್ನು ಬರಗಾಲ ಪ್ರದೇಶಗಳೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಹಾನಗಲ್ ತಾಲ್ಲೂಕ್‌ನಲ್ಲಿ ಧರ್ಮಾ ಕೆನಾಲ್ ಏರಿಯಾ ಬಿಟ್ಟರೆ ಉಳಿದ ೭೦ ಸಾವಿರ ಎಕರೆಯಷ್ಟು ಭತ್ತದ ಕ್ಷೇತ್ರವೆಲ್ಲಾ ಒಣಗಿ ಹೋಗಿದೆ. ಆದಕಾರಣ ಈ ಭಾಗವನ್ನೆಲ್ಲಾ ಬರಗಾಲ ಪೀಡಿತ ಪ್ರದೇಶವೆಂದು ಪರಿಗಣಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬರಗಾಲ ಪೀಡಿತ ಪ್ರದೇಶಗಳಲ್ಲಿ ಕಾಮಗಾರಿ ಕೆಲಸಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ. ರೋಡ್ ವರ್ಕ್ಸ್. ಸಾಯಿಲ್ ಕನ್ಸರ್‌ವೇಷನ್ ವರ್ಕ್ಸ್, ಕುಡಿಯುವ ನೀರಿನ ಬಾವಿಗಳನ್ನು ಆಳಪಡಿಸುವ ಕೆಲಸಗಳನ್ನು ಹೆಚ್ಚು ಹೆಚ್ಚು ತೆಗೆದುಕೊಳ್ಳಬೇಕು. ಈಗ ರೂರಲ್ ಕಮ್ಯುನಿಕೇಷನ್ ವರ್ಕ್ಸನ್ನು ಕೈಕೊಂಡಿದ್ದಾರೆ. ಅದೂ ಕೂಡ ಪೂರ್ತಿಯಾಗಿಲ್ಲ. ಈ ಕೆಲಸಕ್ಕೆ ಹೆಚ್ಚು ಹಣ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ನಮ್ಮ ಜಿಲ್ಲೆಯ ೧೩ ತಾಲ್ಲೂಕ್‌ಗಳಿಗೆ ಕೊಡುತ್ತಿರುವ ಹಣ ಸಾಲದು. ಕೊಟ್ಟ ಹಣ ಒಂದೆರಡು ದಿವಸಗಳಲ್ಲಿಯೇ ಮುಗಿದು ಹೋಗುತ್ತದೆ. ಇದರಿಂದ ವಾರದಲ್ಲಿ ೪ ದಿವಸಗಳ ಕಾಲ ಜನರು ಕೆಲಸವಿಲ್ಲದೆ ಇರಬೇಕಾಗುತ್ತದೆ. ಡಿ. ಸಿ. ಅವರನ್ನು ಕೇಳಿದರೆ, ಸರ್ಕಾರದಿಂದ ಹಣ ಬರದೇ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದಕಾರಣ ಸಾಕಷ್ಟು ಹಣ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಒಂದು ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಹುಬ್ಬಳ್ಳಿ ತಾಲ್ಲೂಕ್‌ಗೆ ಸೇರಿದಂತೆ ಒಂದು ಹಳ್ಳಿಯನ್ನು ಮಾತ್ರ ಸೇರಿಸಿದ್ದಾರೆ. ಆದರೆ ಹುಬ್ಬಳ್ಳಿಯ ಅಕ್ಕಪಕ್ಕದಲ್ಲಿ ರತಕ್ಕಂಥ ೧೧ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವವಿದೆ. ಆದಕಾರಣ ಇಲ್ಲಿ ಹೇಳಿರುವ ವಿಚಾರ ಸತ್ಯಕ್ಕೆ ದೂರವಾಗಿದೆ ಎಂದು ಹೇಳಬಹುದು. ಜೊತೆಗೆ ನೀರಿನ ತೊಂದರೆಯಿರುವ ಕಡೆಗಳಿಗೆ ಬೇರೆ ಕಡೆಗಳಿಂದ ನೀರನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. ಒಂದು ಕೊಡ ನೀರಿಗೆ ಒಂದು ರೂ. ನಂತೆ ವ್ಯಾಪಾರ ನಡೆಯುತ್ತಿದೆ, ಇದನ್ನು ತಪ್ಪಿಸಬೇಕಲ್ಲದೆ, ಎಲ್ಲ ಕಡೆಯೂ ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಊರಿನಲ್ಲಿ ನೀರಿನ ಮಾರಾಟ ನಡೆಯುತ್ತಿದೆ ಎಂಬುದನ್ನು ತಿಳಿಸಿದರೆ, ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಅವಕಾಶವಾಗುತ್ತದೆ.

ಶ್ರೀ ವೈ. ವಿ. ಜೋಗಣ್ಣನವರ್.— ಹುಬ್ಬಳ್ಳಿಯ ಅಕ್ಕಪಕ್ಕದಲ್ಲಿರುವ ೧೧ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆಯಿರುವುದರಿಂದ ಕೆಲವರು ೬–೭ ಮೈಲಿಗಳ ದೂರದಿಂದ ನೀರನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. ಅದರ ವಿವರಗಳನ್ನು ನಾನು ತಮಗೆ ಬರೆದು ತಿಳಿಸುತ್ತೇನೆ. ಕಾಕೋಳ್ ಗ್ರಾಮದಲ್ಲಿ ಮತ್ತು ಅದರ ಪಕ್ಕದಲ್ಲಿರುವ ಲಮಾಣಿ ತಾಂಡವಿರುವ ಕಡೆಯಲ್ಲಿ ಕುಡಿಯುವ ನೀರಿನ ಅಭಾವವಿದೆ. ಈ ಪ್ರದೇಶಗಳ ಹೆಸರುಗಳನ್ನೆಲ್ಲಾ ತಾವು ಕೊಟ್ಟಿರುವ ಪಟ್ಟಿಯಲ್ಲಿ ಸೇರಿಸಿಲ್ಲ. ಮುಖ್ಯವಾಗಿ ನೀರಿನ ತೊಂದರೆಯಿರುವ ಪ್ರತಿ ತಾಲ್ಲೂಕ್‌ನಲ್ಲಿಯೂ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲಕ್ಕೆ ಒಳಗಾಗಿರುವ ೧೩ ತಾಲ್ಲೂಕ್‌ಗಳಲ್ಲಿರುವ ದನಕರುಗಳಿಗೆ ಮೇವನ್ನು ಫಾರೆಸ್ಟ್ ಏರಿಯಾದಿಂದ ತರಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಆದರೆ ಅಲ್ಲಿಂದ ತರುವುದಕ್ಕೆ ಟ್ರಕ್‌ಗಳ ವ್ಯವಸ್ಥೆ ಇಲ್ಲವಾಗಿದೆ. ಜನರೇ ಹೋಗಿ ತರುವುದಕ್ಕೆ ತಯಾರಾಗಿದ್ದಾರೆ. ಆದಕಾರಣ ಅವರಿಗೆ ಸೂಕ್ತ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನರಗುಂದ ಏರಿಯಾ ಮಲಪ್ರಭಾ ಏರಿಯಾಕ್ಕೆ ಸೇರಿದೆ. ಆದರೂ ಸಹ ಎಷ್ಟೋ ಗ್ರಾಮಗಳಿಗೆ ಇರಿಗೇಷನ್ ಫೆಸಿಲಿಟೀಸ್ ಸಿಕ್ಕಿಲ್ಲ. ಜೊತೆಗೆ ಈ ಸಲ ಮಳೆಯೂ ಸಹ ಆಗದೆ ರೈತರು ಬೀಜವನ್ನೇ ಬಿತ್ತಿಲ್ಲ ಈಗ ಹಳೆಯ ಮೈಸೂರು ಭಾಗದಲ್ಲಿ ನೀರಾವರಿಗೆ ಒಳಪಟ್ಟಂತಹ ಕೆಲವು ಭಾಗಗಳನ್ನು ಬರಗಾಲ ಪ್ರದೇಶಗಳೆಂದು ಸಾರಿರುವಂತೆ ಈ ಭಾಗವನ್ನು ಸಹ ಬರಗಾಲ ಪ್ರದೇಶವೆಂದು ಸಾರಿ. ಆ ಭಾಗದಲ್ಲಿ ಸಾಯಿಲ್ ಕನ್ಸರ್‌ವೇಷನ್ ಕೆಲಸ, ರೋಡ್ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಎಂ. ಬೆಳ್ಳಿಯಪ್ಪ (ಮಡಿಕೇರಿ) —ಮಾನ್ಯ ಅಧ್ಯಕ್ಷರೇ, ನಮ್ಮ ಕೊಡಗು ಜಿಲ್ಲೆ ಯಾವಾಗಲೂ ಹೆಚ್ಚಿನ ಮಳೆ ಬೀಳುವ ಜಿಲ್ಲೆಯಾಗಿತ್ತು, ಹೆಚ್ಚಿನ ಬೆಳೆ ಆಗುವ ಜಿಲ್ಲೆಯಾಗಿತ್ತು ಇಲ್ಲಿ ಬೆಳೆಯುವ ಕಾಫಿ ಕಿತ್ತಳೆ ಮತ್ತು ಇತರೆ ಬೆಳೆಯನ್ನು ಹೊರಗಿನ ಜಿಲ್ಲೆಗಳಿಗೆ ಹಾಗೂ ಹೊರಗಿನ ದೇಶಗಳಿಗೂ ಕಳುಹಿಸುತ್ತಾ ಇದ್ದೆವು. ನಮ್ಮ ಜಿಲ್ಲೆಗೆ ಕ್ಷಾಮ ಎನ್ನುವುದು ಇಷ್ಟರವರೆಗೆ ಬಂದಿದ್ದಿಲ್ಲ. ಆದರೆ ಈ ವರ್ಷ ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ನಮ್ಮ ಕೊಡಗು ಜಿಲ್ಲೆಯಲ್ಲಿ ಯಾವಾಗಲೂ ಬೀಳುವುದಕ್ಕಿಂತ ಬಹುಶ: ೬೦ ಪರ್ಸೆಂಟ್ ಮಳೆ ಕಡಿಮೆಯಾಗಿ ಕೊಡಗಿನ ಸುಮಾರು ೩೦೪ ಹಳ್ಳಿಗಳ ಪೈಕಿ ಕೊನೇಪಕ್ಷ ೨೫೦ ಹಳ್ಳಿಗಳು ಕ್ಷಾಮಕ್ಕೆ ಒಳಗಾಗಿವೆ ನಾನು ಮಡಿಕೇರಿಯ ಶಾಸಕನಾಗಿ ಹಾಗೂ ರಾಜಕೀಯ ಪಕ್ಷದ ಜಿಲ್ಲಾ ಸಮಿತಿಯ ಅಧ್ಯಕ್ಷನಾಗಿ ಕೊಡಗಿನ ಅಭಾವ ಪೀಡಿತ ಸ್ಥಳಗಳನ್ನು ಹೋಗಿ ನೋಡಿದ್ದೇನೆ. ಸೋಮವಾರಪೇಟೆ ತಾಲ್ಲೂಕು ಮಾನ್ಯ ಗುಂಡೂರಾಯರ ಕ್ಷೇತ್ರ ಇದೆ. ಅದರಲ್ಲಿರುವ ಕೆಲವು ಹಳ್ಳಿಗಳಲ್ಲಿ ಕೇವಲ ೮-೯ ಇಂಚು ಮಳೆಯಾಗಿ ಯಾವ ಒಂದು ಬೆಳೆಯೂ ಇಲ್ಲದೆ ಜನಗಳು ಕಷ್ಟಕ್ಕೆ ಸಿಕ್ಕಿಬಿದ್ದಿದ್ದಾರೆ. ವಿರಾಜಪೇಟೆಯಲ್ಲಿ ನಾನು ಮೊನ್ನೆ ೩-೪ನೇ ತಾರೀಖು ಹೋಗಿದ್ದಾಗ, ಮೈಸೂರು ಜಿಲ್ಲೆಯ ಬಾರ್ಡರ್ ಏರಿಯಾ ಏನು ಇದೆ ಆ ಎಲ್ಲ ಪ್ರದೇಶದಲ್ಲೂ ಏನೂ ಬೆಳೆ ಇಲ್ಲದೆ ಇವತ್ತು ಜನಗಳು ಕಷ್ಟಕ್ಕೆ ಒಳಗಾಗಿದ್ದಾರೆ. ಜೂನ್ ತಿಂಗಳಲ್ಲಿ ಮಳೆ ಬಂದು ನಮ್ಮ ಕೊಡಗಿನಲ್ಲಿ, ಮಲೆನಾಡಿನಲ್ಲಿ ಯಾವ ರೀತಿ ಬೀಜ ಹಾಕುತ್ತಿದ್ದರೋ ಆ ರೀತಿ ಬೀಜವನ್ನು ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ನಾಟಿ ಕೆಲಸವನ್ನು ಮಾಡುತ್ತಾ ಇದ್ದರು. ಆದೇ ಈ ವರ್ಷ ಜೂನ್, ಜುಲೈ ತಿಂಗಳಲ್ಲಿ ಮಳೆ ಹೊಯ್ಯದೇ ಇದದ್ದರಿಂದ ಬಹಳ ಪ್ರದೇಶಗಳಲ್ಲಿ, ಬಹಳ ಭೂಮಿಗಳಲ್ಲಿ ಬಿತ್ತನೆ ನಾಟಿ ಮಾಡದೇ ಹಾಗೆಯೇ ಬಿಟ್ಟಿದ್ದಾರೆ. ಅಕ್ಟೋಬರ್ ತಿಂಗಳವರೆಗೆ ನಮ್ಮಲ್ಲಿ ಮಳೆಯೇ ಇದ್ದಿಲ್ಲ. ಯಾವ ಪ್ರದೇಶಗಳಲ್ಲಿ, ಯಾವ ಭೂಮಿಗಳಲ್ಲಿ ನಾಟಿ ಮಾಡಿದ್ದರೋ, ನಾಟಿ ಮಾಡಿದ ಸ್ಥಳಗಳಲ್ಲಿ ಕೂಡ ಸಮಯಕ್ಕೆ ಸರಿಯಾಗಿ ಮಳೆ ಇಲ್ಲದೆ, ತೆನೆ ಬಿಡದೆ ೧೦೦ಕ್ಕೆ ೫೦-೬೦ ಪರ್ಸೆಂಟ್ ಬೆಳೆ ಹಾಳಾಗಿ ಹೋಗಿದೆ, ಈ ೨ ತಾಲ್ಲೂಕುಗಳಲ್ಲಿ. ಮಡಿಕೇರಿ ತಾಲ್ಲೂಕನ್ನು ತೆಗೆದುಕೊಂಡರೆ ನಾನು ಉತ್ಪ್ರೇಕ್ಷೆ ಮಾಡಿ ಮಳೆ ಆಗಿಲ್ಲ ಎಂದು ಹೇಳುವುದಿಲ್ಲ, ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆ ಇಲ್ಲದ ಕಾರಣ ಸಮಯಕ್ಕೆ ಸರಿಯಾಗಿ ನಾಟಿ ಮಾಡದೇ ಇರುವಂಥ ಬೆಳೆ ಬಹಳಮಟ್ಟಿಗೆ ಸಿಕ್ಕುತ್ತದೋ ಇಲ್ಲವೋ, ಸಿಕ್ಕುವುದಕ್ಕೆ ಸಾಧ್ಯವಿಲ್ಲ ಎನ್ನುವಾಗ, ಬಹುಶ: ಜನಗಳ ಅದೃಷ್ಟ ಎಂದು ಕಾಣುತ್ತದೆ ೪-೫ ದಿನ ಮಳೆ ಬಿದ್ದುದರಿಂದ ಸ್ವಲ್ಪ ಬೆಳೆ ಬರುತ್ತದೆ ಎಂದು ಕಾಣುತ್ತದೆ. ಇದರಿಂದ ನನಗಂತೂ ಸಂತೋಷವಾಗುತ್ತದೆ. ಸರ್ಕಾರದವರು ಅಧಿಕಾರಿಗಳ ಈ ಒಂದು ರಿಪೋರ್ಟ್ ಪ್ರಕಾರವಾಗಿ ಸೋಮವಾರಪೇಟೆ ಮತ್ತು ವೀರಾಜಪೇಟೆ ತಾಲ್ಲೂಕುಗಳನ್ನು ಪೂರ್ತಿಯಾಗಿ ತೊಂದರೆಯಾದಂಥ ತಾಲ್ಲೂಕುಗಳು ಎಂದು ಡಿಕ್ಲೇರ್ ಮಾಡಿದ್ದಾರೆ. ಮಾನ್ಯ ಕಂದಾಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ಸೋಮವಾರಪೇಟೆ ಕೆಲವು ಸ್ಥಳಗಳನ್ನು ಹಾಗೂ ವೀರಾಜಪೇಟೆಯ ಕೆಲವು ಸ್ಥಳಗಳಲ್ಲಿ, ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲದೆ ಜನರು ಬಹಳ ಕಷ್ಟದಲ್ಲಿದ್ದಾರೆ. ಬಹುಶಃ ಮುಂದಿನ ಜನವರಿ ಅಥವಾ ಫೆಬ್ರವರಿ ತಿಂಗಳುಗಳ ಸಮಯದಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾದಂಥ ಸಂದರ್ಭ ಬರಬಹುದು. ಈ ಎರಡು ತಾಲ್ಲೂಕುಗಳಲ್ಲಿ, ಮಡಿಕೇರಿಯ ಕೆಲವು ಪ್ರದೇಶಗಳಲ್ಲಿ, ಪ್ರತಿಯೊಂದು ಗ್ರಾಮದಲ್ಲೂ ಕೂಡ ೩-೪ ಭಾವಿಗಳನ್ನು ಮಾಡುವಾಗ ಒಂದು ಶಾಶ್ವತವಾದ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ದೇವೇಗೌಡರು ಹೇಳಿದಹಾಗೆ ಈ ವರ್ಷ ಕ್ಷಾಮ, ಬರಗಾಲ ಬಂತು ಎಂದು ಈ ವರ್ಷದಮಟ್ಟಿಗೆ ನಾವು

ಯೋಚನೆ ಮಾಡುವುದಿಲ್ಲ. ಏಕೆಂದರೆ, ನಾನು ಮೊದಲೇ ಹೇಳಿದ ಹಾಗೆ ಕೊಡಗು ಜಿಲ್ಲೆ ಯಾವಾಗಲೂ ಕ್ಷಾಮವನ್ನು ಕಂಡಿದ್ದಿಲ್ಲ ಮಲೆನಾಡು, ಚಿಕ್ಕಮಂಗಳೂರು, ಶಿವಮೊಗ್ಗ ಏರಿಯಾಗಳು ಯಾವ ಕ್ಷಾಮವನೂ ಕಂಡಿದ್ದಿಲ್ಲ. ೧೯೭೨ನೇ ಇಸವಿಯಲ್ಲಿ ಉತ್ತರ ಕರ್ನಾಟಕದ ೫ ಜಿಲ್ಲೆಗಳಲ್ಲಿ ಬರಗಾಲ ಬಂತು. ಆಗ ನಾವು ಇಲ್ಲಿ ಕುಳಿತುಕೊಂಡು ಲೆಕ್ಕ ಹಾಕಿದೆವು. ಆದುದರಿಂದ ಇವತ್ತು ಮಲೆನಾಡು ಜಿಲ್ಲೆಗಳಲ್ಲದ ಚಿಕ್ಕಮಗ ಳೂರು, ಶಿವಮೊಗ್ಗ, ಹಾಗೂ ಕೊಡಗು ಜಿಲ್ಲೆಗಳು ಪ್ರಕೃತಿಯ ವಿಕೋಪಕ್ಕೆ ಸಿಕ್ಕಿರುವಾಗ ಮಾನ್ಯ ಕಂದಾಯ ಸಚಿವರು. ಯಾವಾಗಲೂ ಮುಂದೆಯೂ ಪ್ರಯೋಜನವಾಗುವಂಥ ಕೆಲಸಗಳನ್ನು ಮಾಡಿದರೆ ಈ ಒಂದು ಪ್ರಕೃತಿಯ ವಿಕೋಪಕ್ಕೆ ಒಳಗಾಗುವುದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ಆಲೋಚನೆಮಾಡಬೇಕು. ಸೋಮವಾರಪೇಟೆಯಲ್ಲಿ ಕೆರೆಗಳನ್ನು ರಿಪೇರಿ ಮಾಡಿದ್ದಾರೆ. ನಾನು ಅಲ್ಲಿಗೆ ಹೋಗಿದ್ದಾಗ ನೋಡಿದೆ. ಕೆರೆಗಳನ್ನು ಯಾವರೀತಿಯಲ್ಲಿ ರಿಪೇರಿ ಮಾಡಿದ್ದಾರೆ ಎಂದರೆ, ಕೆಲವು ದಿನಗಳ ಮಟ್ಟಿಗೆ ಮಾತ್ರ ನೀರು ಕಟ್ಟಿ, ಈ ವರ್ಷಕ್ಕೆ ಮಾತ್ರ ಉಪಯೋಗವಾಗುವಂತೆ, ಮುಂದೆ ಇದರ ಪ್ರಯೋಜನವನ್ನು ಪಡೆಯುವ ಹಾಗೆ ಕೆಲಸವನ್ನು ಮಾಡುತ್ತಿದ್ದರು. ಮಲೆನಾಡಿನಲ್ಲಿ ೧೦-೧೫-೨೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬಂಡುಗಳನ್ನು ಮಾತ್ರ ಹಾಕಿ ಬಯಲು ಪ್ರದೇಶದಲ್ಲಿ ಯಾವ ರೀತಿ ನೀರನ್ನು ತೆಗೆಯುತ್ತಾರೋ ಆರೀತಿ ನೀರನ್ನು ತೆಗೆಯುವುದಕ್ಕೆ ಹೋಗುತ್ತಿದ್ದಾರೆ. ಕೆರೆಗಳನ್ನು ೮ ಅಡಿ ಆಳ ಮಾಡಿ ಶಾಶ್ವತವಾಗಿ ನೀರು ನಿಲ್ಲಿಸುವಂಥ ಕೆಲಸವನ್ನು ಮಾಡಬೇಕು. ಬಂಡು ಹಾಕಿ ನೀರನ್ನು ನಿಲ್ಲಿಸುವಂಥ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಚೆನ್ನಾಗಿ ಆಳಮಾಡಿ ಕೆರೆಗಳಗೆ ನೀರು ನಿಲ್ಲಿಸುವಂತ ಮಾಡಿದರೆ ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ಕೊಡಗು ಯಾವಾಗಲೂ ಹೆಚ್ಚು ಮಳೆ ಬೀಳತಕ್ಕ ಸ್ಥಳವಾಗಿದೆ, ಅಲ್ಲಿ ಕಾವೇರಿ ಹೊಳೆ ಇದೆ. ಬೇಕಾದಷ್ಟು ಸಣ್ಣ ಹೊಳೆಗಳೂ ಇವೆ ನದಿಗಳಿವೆ ಬೇಕಾದಷ್ಟು ಲಿಫ್ಟ್ ಇರಿಗೇಷನ್ ಸ್ಕೀಂಗಳನ್ನು ಮಾಡಬಹುದು, ಕಾವೇರಿ ಹೊಳೆ ಪಕ್ಕದಲ್ಲಿ ಮಾಡಬಹುದು. ನಾನು ನನ್ನ ಸ್ನೇಹಿತರು ಇದರ ಬಗ್ಗೆ ಎಷ್ಟೋ ಅರ್ಜಿಗಳನ್ನು ಕೊಟ್ಟೆವು. ಇದುವರೆಗೆ ಯಾವುದೂ ಆಗಿಲ್ಲ, ಕಾವೇರಿ ಹೊಳೆಯ ಭಾಗದಲ್ಲಿ ಲಿಫ್ಟ್ ಇರಿಗೇಷನ್ ಮಾಡಿದ್ದರೆ ಒಳ್ಳೆಯ ಫಲವತ್ತಾದ ನೀರು ಸಿಕ್ಕುತ್ತಿತ್ತು ಈ ಒಂದು ಪ್ರಕೃತಿ ವಿಕೋಪಕ್ಕೆ ಒಳಗಾಗಿ ಅವಸ್ಥೆ ಪಡಬೇಕಾದ ಅವಶ್ಯಕತೆ ಇರುತ್ತಿರಲಿಲ್ಲ. ಮಾನ್ಯ ಕಂದಾಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ಈ ಒಂದು ದಿಶೆಯಲ್ಲಿ ನಿಮ್ಮ ಮನಸ್ಸನ್ನು ಹರಿಸಿ, ನಮ್ಮ ಕಡೆ ಬೇಕಾದಷ್ಟು ನೀರು ಇದೆ, ಅದರ ಉಪಯೋಗವನ್ನು ಸಂಪೂರ್ಣವಾಗಿ ತೆಗೆದುಕೊಂಡು ರೈತರ ಕಷ್ಟವನ್ನು ಇನ್ನುಮುಂದಕ್ಕೂ ಇಲ್ಲದ ಹಾಗೆ ಮಾಡಿ, ಎಂದು ನಾನು ಕೇಳಿಕೊಳ್ಳುತ್ತೇನೆ. ನನಗಂತೂ ಸಂತೋಷವಾಗುತ್ತದೆ, ಮಾನ್ಯ ಮುಖ್ಯ ಮಂತ್ರಿಗಳು ಕೆಲವು ದಿನಗಳ ಹಿಂದೆ ನಮ್ಮ ಕ್ಷೇತ್ರಕ್ಕೆ ಬಂದು ಅಲ್ಲಿನ ಜನರ ಕಷ್ಟವನ್ನು ಕಂಡು ೬ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದರು. ಆದರ ನಾನು ಕೇಳುತ್ತಾ ಇದ್ದೇನೆ, ಏನೆಂದರೆ, ಈ ಎರಡು, ಎರಡೂವರೆ ತಾಲ್ಲೂಕಿನ ಜನರು ಕಷ್ಟದಲ್ಲಿರುವಂಥ ಸಮಯದಲ್ಲಿ ೬ ಲಕ್ಷ ರೂಪಾಯಿಗಳನ್ನು ಕೊಟ್ಟರಿ, ಅದರ ಪ್ರಯೋಜನ ಜನಗಳಿಗೆ ಸಿಕ್ಕಿತು. ಅದಷ್ಟು ಮಟ್ಟಿಗೆ ಇನ್ನೂ ಹೆಚ್ಚಿನ ಹಣವನ್ನು ನಮ್ಮ ಜಿಲ್ಲೆಗೆ ಕೊಡಬೇಕು. ಈ ರೀತಿ ಹೆಚ್ಚು ಹಣವನ್ನು ಕೊಡಬೇಕು ಎಂದು ಹೇಳುವಾಗ, ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದೀರೋ ಅದೇರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ತಮ್ಮ ಗಮನವನ್ನು ಹರಿಸಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಾ ಇದ್ದೇನೆ. ನನಗೆ ಸಂತೋಷವಾಗುತ್ತದೆ. ಈಗ ಕೆಲವು ಕೆಲಸಗಳನ್ನು ಶುರು ಮಾಡಿದ್ದರೂ ಕೂಡ ಜಿಲ್ಲಾಧಿಕಾರಿಗಳ ಅಥವಾ ಅಸಿಸ್ಟೆಂಟ್ ಕಮಿಷನರ್ ನೇತೃತ್ವದಲ್ಲಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಈ ಒಂದು ದಿಸೆಯಲ್ಲಿ ಅಧಿಕಾರಿಗಳೂ ಕೂಡ ಜನಗಳಿಗೆ ಕೆಲವು ಕಡೆಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡಿರುವುದಿಲ್ಲ.

ಇನ್ನು ಕಾಮಗಾರಿಗಳ ವಿಷಯದಲ್ಲಿ ಇವತ್ತಿನವರೆಗೂ ಹಣ ರಿಲೀಜ್ ಆಗಿಲ್ಲ. ಪಿ.ಡಬ್ಲ್ಯುಡಿ ಇಲಾಖೆಗೆ ಹಣವನ್ನು ಕೊಟ್ಟಿಲ್ಲ. ಅದರ ಕೆಲಸಗಳು ಇನ್ನೂ ಶುರುವಾಗಿಲ್ಲ. ಆದ್ದರಿಂದ ಆ ಇಲಾಖೆಗೆ ಎಷ್ಟು ಹಣವನ್ನು ಕೊಡಬೇಕೋ ಅದನ್ನು ಕೂಡಲೇ ಕೊಡಬೇಕು. ಲೋಕಲ್ ಡೆವಲಪ್‌ಮೆಂಟ್ ಬೋರ್ಡ್, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರಿಗೂ ಅದರ ಬಗ್ಗೆ ಕೆಲಸಗಳನ್ನು ತೆಗೆದು ಕೊಳ್ಳುವುದಕ್ಕೆ ಜವಾಬ್ದಾರಿ ವಹಿಸಬೇಕು. ನನಗೆ ತಿಳಿದಮಟ್ಟಿಗೆ ಮಡಿಕೇರಿ ತಾಲ್ಲೂಕು ಈಗ ಬಹು ಕಷ್ಟ ಪರಿಸ್ಥಿತಿಯಲ್ಲಿದೆ. ಸೋಮವಾರ ಪೇಟೆ ತಾಲ್ಲೂಕೂ ಸಹ ತುಂಬಾ ಕಷ್ಟ ಸ್ಥಿತಿಯಲ್ಲಿದೆ. ಸಾಕಷ್ಟು ದುಡ್ಡು ಆ ತಾಲ್ಲೂಕುಗಳಿಗೆ ಕೊಟ್ಟಿಲ್ಲ. ಅವು ಬಹಳ ಕಷ್ಟದಲ್ಲಿರತಕ್ಕ ತಾಲ್ಲೂಕುಗಳು. ತಾಲ್ಲೂಕು

ಡೆವಲಪ್‌ಮೆಂಟ್ ಬೋರ್ಡ್‌ನಿಂದ ಉತ್ಪತ್ತಿಯಾಗುವುದು ಒಂದು ಲಕ್ಷ ಅಥವಾ ಒಂದೂಕಾಲು ಲಕ್ಷ. ಆ ಒಂದು ಉತ್ಪತ್ತಿಯಲ್ಲಿ ಬೇಕಾದಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದಕ್ಕಾಗುವುದಿಲ್ಲ. ನಿಮ್ಮ ವರದಿಯಲ್ಲಿ ಮೂಡಿಗೆರೆ ತಾಲ್ಲೂಕು ಸೇರದೇ ಇದ್ದರೂ ಅಲ್ಲಿ ಬೆಳೆ ಬೇಕಾದಷ್ಟು ಜಾಸ್ತಿಯಾಗಿದೆ ಆದ್ದರಿಂದ ಸಣ್ಣಸಣ್ಣ ನೀರಾವರಿ ಕೆಲಸಗಳು ಆಗಬೇಕಾದರೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಮಾತ್ರ ಸಾಧ್ಯ. ಆದ್ದರಿಂದ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಡಬೇಕು. ಮಡಕೇರಿ ತಾಲ್ಲೂಕ್‌ಬೋರ್ಡ್‌ನವರಿಗೆ ಹೆಚ್ಚಿಗೆ ಹಣ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇಷ್ಟು ವಿಷಯಗಳನ್ನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಉಂಟಾಗಿರತಕ್ಕ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆಮಾಡುವ ಒಂದು ಅವಕಾಶವನ್ನು ಇಲ್ಲಿ ಒದಗಿಸಿಕೊಟ್ಟಿದ್ದಾರೆ. ಇದು ಕರ್ನಾಟಕ ರಾಜ್ಯಕ್ಕೆ ಸೇರಿ ಬಾದಂಥ ಒಂದು ದೊಡ್ಡ ಅಘಾತ. ಕಳೆದಸಾರಿ ಉತ್ತರ ಕರ್ನಾಟಕ ಭಾಗದಲ್ಲಿ ನಾವು ತೀವ್ರವಾದ ಅಭಾವವನ್ನು ಕಂಡು ಬಳಲಿದ್ದರೆ ಇವತ್ತು ಹಳೆಯ ಮೈಸೂರು ಭಾಗದಲ್ಲಿ ಅದಕ್ಕಿಂತಲೂ ಹೆಚ್ಚಿನ ಬರಗಾಲ ಪರಿಸ್ಥಿತಿ ತಲೆದೋರಿದೆ ಇವತ್ತು ಅದನ್ನು ನಮ್ಮ ಅನುಭವದಲ್ಲಿ ಇಟ್ಟುಕೊಂಡು ಅನೇಕ ಕೆಲಸಕಾರ್ಯಗಳನ್ನು ಬಹು ಮುಖ್ಯವಾಗಿ ಕೈಗೊಳ್ಳಬೇಕಾಗಿದೆ. ಆದರೆ ಅಭಾವ ಪರಿಸ್ಥಿತಿ ತಲೆದೋರಿದಾಗ ಮಾತ್ರ ಆ ಸಂದರ್ಭದಲ್ಲಿ ಕೆಲವಾರು ಕೆಲಸಕಾರ್ಯಗಳನ್ನು ಪರಿಹಾರಕ್ಕಾಗಿ ತೆಗೆದುಕೊಳ್ಳುವುದು, ಆ ಕಾಲದಲ್ಲಿ ಕುಂಟ್ರಾಕ್ಟ್‌ನಲ್ಲಿ ರೋಲ್‌ಕಾಲ್‌ನಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು ಅಷ್ಟು ಸೂಕ್ತವಾದುದಲ್ಲ. ಅಂತಹ ಕಾಮಗಾರಿಗಳನ್ನು ಶಾಶ್ವತವಾಗಿ ಮಾಡುವ ಪ್ರಯತ್ನಮಾಡಬೇಕು. ಯಾವುದೋ ಕೆಲವು ಭಾಗಗಳಲ್ಲಿ ಅಂದರೆ ನೆಲಮಂಗಲ, ತುಮಕೂರು, ಶಿವಮೊಗ್ಗ ಅಥವಾ ಇನ್ನು ಯಾವುದಾದರೂ ಕೆಲವಾರು ಪ್ರದೇಶಗಳಲ್ಲಿ ಮತ್ತು ಬಹಳ ಕಾಲದಿಂದ ಆಗಿಂದಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳನ್ನು ಆಯ್ಕೆಮಾಡಿಕೊಂಡು ನಾವು ಶಾಶ್ವತ ಪರಿಹಾರ ಕಾಮಗಾರಿಗಳನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದರೂ ಇವತ್ತು ಆ ಕಾರ್ಯಕ್ರಮಗಳನ್ನು ರೂಢಿಸಬೇಕಾದ ಸಂದರ್ಭ ಬಂದಿದೆ ಕಳೆದಸಾರಿ ೭೨–೭೩, ೭೩–೭೪ ಮತ್ತು ೭೪–೭ ನೇ ಸಾಲು ಗಳಲ್ಲಿ ಬರಗಾಲ ಬಂದಾಗ ನಾವು ಅನೇಕ ರೀತಿಯಲ್ಲಿ ಚರ್ಚೆಮಾಡಿದ್ದೇವೆ. ಬರಗಾಲ ತುತ್ತಾದನಂತರವೇ ಒಳ್ಳೆಯ ಮಳೆ ಬಂತು. ಲೆವಿ ಬಹಳ ಚೆನ್ನಾಗಿ ವಸೂಲಾಯಿತು. ಅನಂತರ ಪುನಃ ಬರಗಾಲದ ಬಗ್ಗೆ ನಾವು ಸರಿಯಾಗಿ ವಿಚಾರಮಾಡಲಿಲ್ಲ. ಒಂದು ಪೇ–ಕಮಿಷನ್ ಮಾಡುತ್ತೀರಿ. ಅದಕ್ಕೆ ಎಷ್ಟೋ ಹಣವನ್ನು ಖರ್ಚುಮಾಡುತ್ತಿದ್ದೀರಿ. ಈ ರೀತಿಯಲ್ಲಿ ಕಸರತ್ ಮಾಡುತ್ತಿದ್ದೀರಿ. ಹೀಗೆ ಹಣಕಾಸು ಹೆಚ್ಚಿಗೆ ಸಿಕ್ಕಿದಾಗ ಮಳೆ ಸಮೃದ್ಧಿಯಾಗಿ ಬಂದಾಗ ನಾವು ಹೆಚ್ಚಿನ ಹಣವನ್ನು ಈ ಬಾಬಿಗೆ ಅದರಲ್ಲಿಯೂ ಬರಗಾಲ ಪ್ರದೇಶಗಳೆಂದು ಪರಿಗಣಿಸಿರುವ ಸ್ಥಳಗಳಲ್ಲಿ ವಿನಿಯೋಗಿಸಿ ಅಂತಹ ಪ್ರದೇಶಗಳಲ್ಲಿ ಹಣವನ್ನು ತೊಡಗಿಸಿದರೆ ದೇಶದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಯಾವುದಾದರೂ ಕಾರ್ಯಕ್ರಮಗಳನ್ನು ಮಾಡಬೇಕೆಂಬ ಬಗ್ಗೆ, ನಿರಂತರವಾಗಿ ವಿಚಾರಮಾಡುವ ಹಾಗೂ ನಿರಂತರವಾಗಿ ಕಾರ್ಯಕ್ರಮಗಳನ್ನು ರೂಢಿಸುವ ಪ್ರಯತ್ನಗಳನ್ನು ಅಭಾವ ಪ್ರದೇಶಗಳಲ್ಲಿ ಮಾಡದೇ ಇರುವುದು ಇವತ್ತು ಬರಗಾಲ ಅಂತಹ ಪ್ರದೇಶಗಳಲ್ಲಿ ಬರುವ ಕಾಲದಲ್ಲಿ ಕೈಬಾಯಿ ಬಿಟ್ಟುಕೊಂಡು ಆಕಾಶ ನೋಡುವ ಒಂದು ಸನ್ನಿವೇಶಕ್ಕೆ ನಾವು ಮುಟ್ಟಿದ್ದೇವೆ, ಕಾರಣ ಏನೆಂದರೆ, ನಮಗೆ ಅಧಿಕಾರ ಸಿಕ್ಕಿದಾಗ ಯಾವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಬರಗಾಲ ಪ್ರದೇಶಗಳಲ್ಲಿ ತೆಗೆದುಕೊಳ್ಳಬೇಕೋ ಆ ರೀತಿಯಲ್ಲಿ ತೆಗೆದುಕೊಳ್ಳದೆ ಶಾಶ್ವತವಾಗಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಲು ಪ್ರಯತ್ನಮಾಡಬೇಕು. ಇದಕ್ಕಾಗಿ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ನಾನು ಹೇಳುತ್ತೇನೆ. ವಿರೋಧ ಪಕ್ಷದವರೇ ಅಂತಹ ಕಾರ್ಯಕ್ರಮಗಳನ್ನು ಸರ್ಕಾರ ತಗೆದುಕೊಳ್ಳುವಾಗ ಸಾಕಷ್ಟು ವಿರೋಧಮಾಡುವುದೇ ಇಲ್ಲ. ಅವರ ಕಾರ್ಯಕ್ರಮ ಹೆಚ್ಚುಕಡಿಮೆ ಸುಮಾರು ಒಂದು ವರ್ಷದಿಂದಲೂ ಸ್ತಬ್ಧವಾಗಿದೆಯೆಂದು ಹೇಳಬಹುದು. ಈ ದೇಶದ ಆಡಳಿತವನ್ನು ಸರ್ಕಾರದವರು ಚೆನ್ನಾಗಿ ನಡೆಸಿ ಈ ರಾಜ್ಯದ ಸುಭಿಕ್ಷದ ಕಡೆಗೆ ಮತ್ತು ಸಮೃದ್ಧಿಯ ಕಡೆಗೆ ತೆಗೆದುಕೊಂಡು ಹೋಗುತ್ತಾರೆಂದು ನಾನು ನಂಬಿದ್ದೇನೆ. ಆದರೆ ವಿರೋಧಪಕ್ಷದವರ ಕಾರ್ಯಕ್ರಮದಂತೆ ಅನೇಕ ಕೆಲಸ ಕಾರ್ಯಗಳು ಎಲ್ಲೆಲ್ಲಿ ಯಾವ ರೀತಿಯಲ್ಲಿ ನಡೆಯ ಬೇಕೋ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಸಾಕಷ್ಟು ಸಿಗದೇ ಇರುವುದು ವಿಷಾದನೀಯವಾಗಿದೆ. ಇದರಿಂದ

ಒಂದು ಗಾಡಿಯು ಎರಡು ಚಕ್ರಗಳಲ್ಲಿ ಒಂದು ಚಕ್ರ ಆ ಕಡೆ ಹೋಗುತ್ತದೆ, ಇನ್ನೊಂದು ಚಕ್ರ ಈ ಕಡೆ ಹೋಗುತ್ತಿದೆಯೆಂಬ ಹಾಗೆ ಬರಗಾಲದ ಕಾಮಗಾರಿಗಳು ಈಗ ಅಲ್ಲಲ್ಲಿ ನಡೆಯುತ್ತಿವೆ. ಇದರಿಂದ ಇವರಿಬ್ಬರ ಜಗಳದಿಂದ ಈ ರಾಜ್ಯದ ಅಭಿವೃದ್ಧಿಯ ಕಡೆಗೆ ಚಿಂತನೆ ಮಾಡುವ ಕೆಲಸವೇ ಪೂರ್ತಿಯಾಗಿ ನಿಂತುಹೋಗಿದೆ. ಇವತ್ತು ದಯವಿಟ್ಟು ಆ ಬಗ್ಗೆ ಸರ್ಕಾರ ಲಕ್ಷ್ಯಕೊಡಬೇಕು. ಹಿಂದೆ ಉತ್ತರ ಕರ್ನಾಟಕದಲ್ಲಿ ಒಂದಂಥ ಕ್ಷಾಮ ಪರಿಸ್ಥಿತಿ ಕಾಲದಲ್ಲಿ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದುದನ್ನು ಈಗ ನಿಲ್ಲಿಸಿದ್ದಾರೆ. ಅದು ಯಾವುದೇ ಯೋಜನೆಯ ಕೆಲಸವಾಗಿರಬಹುದು. ಅದು ಕೃಷ್ಣಾ ಮೇಲ್ದಂಡೆ ಯೋಜನೆ ಆಗಲೀ ಹೇಮಾವತಿ ಯೋಜನೆಯಾಗಲೀ, ಘಟಪ್ರಭಾ ಯೋಜನೆಯೇ ಆಗಲೀ ಅಥವಾ ಮಲಪ್ರಭ ಯೋಜನೆಯಾಗಲೀ ಅವುಗಳನ್ನು ಕೈಗೊಳ್ಳುವಾಗ ನಮ್ಮಲ್ಲಿರತಕ್ಕ ಸರ್ವಶಕ್ತಿಯನ್ನು ಮತ್ತು ಸಂಪತ್ತನ್ನು ಉಪಯೋಗಿಸಿ ಪೂರ್ತಿಯಾಗಿ ಆ ಯೋಜನೆಯನ್ನು ಪೂರ್ಣಮಾಡುವ ಒಂದು ತೀರ್ಮಾನಕ್ಕೆ ಬರಬೇಕು. ಆದರೆ ಆ ರೀತಿ ಇನ್ನೂ ತೀರ್ಮಾನಕ್ಕೆ ಇವತ್ತಿನವರೆಗೂ ಸರ್ಕಾರ ಬಂದಿಲ್ಲ. ಇವತ್ತು ಉದಾಹರಣೆಗೆ ಗದಗ್–ಬೆಟಗೇರಿಯಲ್ಲಿ ಒಂದು ಕುಡಿಯುವ ನೀರಿನ ಯೋಜನೆಗಾಗಿ ೬೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಅದನ್ನು ಈಗಾಗಲೇ ಕೈಬಿಟ್ಟಿದ್ದಾರೆ. ಅಲ್ಲಿ ೧೫ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಅಂಡರ್‌ಗ್ರೌಂಡ್ ರಿಜರ್‌ವಾಯರ್ ಮಾಡಿದ್ದನ್ನು ಅಲ್ಲಿಯ ಒಂದು ಸೀಡ್ ಪ್ರೊಸೆಸಿಂಗ್ ಕೊ ಆಪರೇಟಿವ್ ಸೊಸೈಟಿಗೆ ೫ಸಾವಿರ ರೂಪಾಯಿಗಳಿಗೆ ಹರಾಜು ಮಾಡಿದ್ದಾರೆ. ಮೂರು ಕೋಟಿ ರೂಪಾಯಿಗಳಲ್ಲಿ ಅಥವಾ ಆರು ಕೋಟಿ ರೂಪಾಯಿಗಳಲ್ಲಿ ನೀರು ತರುತ್ತಿದ್ದಾರೆಂದು ಹೇಳಿದರು, ಅದನ್ನು ಮಾಡಲಿಲ್ಲ. ಮಲಪ್ರಭಾ ಯೋಜನೆಯಿಂದ ೫ನೇ ಮೈಲಿಯವರೆಗೆ ಒಂದು ಕೋಟಿ ಚಿಲ್ಲರೆ ಹಣ ಖರ್ಚು ಆಗುವಂತಹ ಯೋಜನೆಯನ್ನು ಹಾಕಿಕೊಂಡರೆ, ಅದರಲ್ಲಿ ೬೧ ಲಕ್ಷ ರೂಪಾಯಿಗಳನ್ನು ಕೈಬಿಟ್ಟು ಇವತ್ತು ತುಂಗಭದ್ರ ಯೋಜನೆಗೆ ೬ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ೫೦೦೧ ರೂಪಾಯಿ ನಿಮ್ಮ ಪಕ್ಷದ ಅಧ್ಯಕ್ಷರ ಕಂಟ್ರೋಲ್‌ನಲ್ಲಿರತಕ್ಕ ಸಹಕಾರ ಸಂಘಕ್ಕೆ ಕೊಟ್ಟಿದ್ದೀರಿ. ಆದರೆ ಆ ಒಂದು ಬಾಬಿನಲ್ಲಿ ಎಷ್ಟು ವ್ಯಯ ಮಾಡಿದ್ದೀರಿ ಯೆಂಬುದನ್ನು ತಿಳಿಸಬೇಕು. ಇವತ್ತು ಮಾನ್ಯ ಶ್ರೀ ಕೃಷ್ಣಪ್ಪನವರ ಕ್ಷೇತ್ರವಾದ ನಾಗಮಂಗಲ ತಾಲ್ಲೂಕಿಗೆ ಹಾರಂಗಿ ಪ್ರಾಜೆಕ್ಟ್‌ನಿಂದ ಎಷ್ಟು ಅನುಕೂಲ ಮಾಡಿಕೊಟ್ಟಿದ್ದೀರಿ, ನೆಲಮಂಗಲ ತುಮಕೂರು ಭಾಗಗಳಲ್ಲಿ ಯಾವ್ಯಾವ ಬಾಬಿನಲ್ಲಿ ಹಣ ಎಷ್ಟೆಷ್ಟು ಸಂಗ್ರಹಣೆ ಮಾಡಿ ಅಲ್ಲಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಇನ್ನೊಂದು ಮಾತು. ನಮ್ಮ ಎಲ್ಲಾ ಸಂಪನ್ಮೂಲಗಳಿಂದ ನಮ್ಮಲ್ಲಿರತಕ್ಕ ಸಣ್ಣ ಹಾಗೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಾಗಿ ನಮ್ಮಲ್ಲಿರತಕ್ಕ ಸಣ್ಣ ಹಾಗೂ ದೊಡ್ಡ ಅಂಡರ್‌ಗ್ರೌಂಡ್ ವಾಟರನ್ನು ಎಕ್ಸ್‌ಪ್ಲೋಯ್ಟ್ ಮಾಡುವುದಕ್ಕೆ ಏನು ಆಲೋಚನೆ ಮಾಡಿದ್ದೀರಿ? ಮಂತ್ರಿ ಮಂಡಲವಾಗಲೀ, ಆಡಳಿತ ಪಕ್ಷದವರೇ ಆಗಲೀ ಅಥವಾ ಸಂಬಂಧಪಟ್ಟ ಮಂತ್ರಿಯಾಗಲೀ ವಿರೋಧ ಪಕ್ಷದವರೊಡನೆ ಕೂತು ಇದರ ಬಗ್ಗೆ ಏನೇನು ಪರಿಹಾರ ಕಾರ್ಯಗಳನ್ನು ಮಾಡಬೇಕು, ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಗೆ ಮಾಡೋಣವೆಂಬುದಾಗಿ ಇನ್ನೂ ಇದುವರೆಗೆ ವಿಚಾರಮಾಡಲಿಲ್ಲ. ಇಂತಹ ಒಂದು ಅಭಾವ ಪರಿಸ್ಥಿತಿ ಬಂದಾಗ ಕಂಗಾಲು ಹಾಕುವ ಪರಿಸ್ಥಿತಿ ಉಂಟಾಗುತ್ತದೆ. ಈಗ ಕೇಂದ್ರಸರ್ಕಾರ ಕೊಡುವ ೨೧ಕೋಟಿ ರೂಪಾಯಿಗಳು ಹಾಗೂ ೫ನೇ ಪಂಚವಾರ್ಷಿಕ ಯೋಜನೆಗಾಗಿ ಕೊಡತಕ್ಕ ಹಣವನ್ನು ಸರದೂಗಿಸಬೇಕು ಎಂದು ಹೇಳುತ್ತಾರೆ. ಕೇಂದ್ರಸರ್ಕಾರದಿಂದ ನಮಗೆ ಈ ಬಾಬಿಗಾಗಿ ಹೆಚ್ಚಿಗೆ ಹಣ ಬರುತ್ತದೆಂದು ನಾವು ನೆಚ್ಚುವುದಕ್ಕೆ ಆಗುವುದಿಲ್ಲ. ಆ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ನಮ್ಮ ಸಂಪನ್ಮೂಲಗಳಿಂದ ನಾವು ಪಡೆಯತಕ್ಕ ೨೧ ಕೋಟಿ ರೂಪಾಯಿಗಳಿಂದೇನೂ ಮಾಡುವುದಕ್ಕಾಗುವುದಿಲ್ಲ. ಇದು ಕೇವಲ ಇನ್ನೆರಡು ಮೂರು ತಿಂಗಳುಗಳಿಗೆ ಮಾತ್ರ ಆಗುತ್ತವೆ. ಈಗ ತಮ್ಮ ಲೆಕ್ಕದ ಪ್ರಕಾರ ೧೫ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಉಂಟಾಗಿದೆ. ಹಿಂದೆ ನಾಲ್ಕು ಜಿಲ್ಲೆಯ ಬರಗಾಲಕ್ಕೆ ೬೫ ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಸಾಧ್ಯತೆ ಈ ಕರ್ನಾಟಕ ಸರ್ಕಾರಕ್ಕೆ ಇತ್ತು. ಇವತ್ತು ೧೦೦ ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡುವ ಪರಿಸ್ಥಿತಿಯಲ್ಲಿದ್ದಾರೆ. ಅಂದಮೇಲೆ ಈಗ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಏನಾದರೂ ಪ್ರಯತ್ನಮಾಡಿದ್ದಾರೆಂದರೆ, ಏನೇನೂ ಸಹ ಇಲ್ಲ. ಇದರ ಬಗ್ಗೆ ಹಣಕಾಸಿನ ಸಚಿವರು ಆಲೋಚನೆಮಾಡಬೇಕು. ಪೇ ಕಮಿಷನ್ ರಿಪೋರ್ಟ್ ಬಗ್ಗೆ ಎಷ್ಟು ಬೇಗ ಹಣವನ್ನೊದಗಿಸಿ ಜಾರಿಗೆ ಕೊಡಲು ಪ್ರಯತ್ನಮಾಡಿದರೋ ಅದರಂತೆಯೇ ಇಲ್ಲಿಯೂ ಮಾಡಬೇಕು. ನೀವು ಕೊಡತಕ್ಕ ಹಣ ಇವತ್ತು ಕಡೆಯಪಕ್ಷ ಹೇಮಾವತಿ ಯೋಜನೆಯನ್ನು ಪೂರ್ಣ ಮಾಡುವುದಕ್ಕಾಗಲೀ ಅಥವಾ ಅಪ್ಪರ್ ಕೃಷ್ಣಾ ಯೋಜನೆಯನ್ನು ಪೂರ್ಣಮಾಡುವುದಕ್ಕೆ ಆಗಲೀ

ಆಗುವುದಿಲ್ಲ. ಅಂತಹ ಒಂದು ಪರಿಸ್ಥಿತಿಗೆ ನೀವು ಬಂದಿಲ್ಲ ಸಂಬಳಗಳನ್ನು ಸರ್ಕಾರದ ನೌಕರರಿಗೆ ಹೆಚ್ಚು ಮಾಡಲು ತೆಗೆದುಕೊಂಡಂತೆ ಕಾರ್ಯಕ್ರಮವನ್ನು ಇಂತಹ ಒಂದು ಪರಿಸ್ಥಿತಿಯಲ್ಲಿಯೂ ತೆಗೆದು ಕೊಳ್ಳಬೇಕು. ಈಗ ಅನೇಕ ಕಡೆಗಳಲ್ಲಿ ಜನ ಅನ್ನವಿಲ್ಲದೆ ಸಾಯುತ್ತಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಅನ್ನವಿಲ್ಲದಿದ್ದರೂ ಎರಡು ಹೊತ್ತು ಗಂಜಿಗೂ ತೊಂದರೆಪಡುತ್ತಿರುವವರೂ ಸಹ ಇದ್ದಾರೆ. ಅಂತಹವರ ಕಡೆ ನಿಮ್ಮ ವಿಚಾರ ಬಿಟ್ಟು ಬೇರೆ ಕಡೆ ನಿಮ್ಮ ಗಮನ ಹೋಗುತ್ತಿವೆ. ಅದು ಸರಿಯಲ್ಲ. ಬಹು ಮುಖ್ಯವಾಗಿ ನಿಮ್ಮ ಗಮನವೆಲ್ಲಾ ಅಭಾವ ಪರಿಸ್ಥಿತಿ ಉಂಟಾಗಿರುವ ಕಡೆಗಳಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಕಡೆಗೆ ಹೋಗಬೇಕೆಂದು ನಾನು ಹೇಳುತ್ತೇನೆ. ಆ ವಿಚಾರದ ಕಡೆಗೆ ನೀವು ಯೋಚನೆಮಾಡಬೇಕು.

4-00 P. M.

ಇವತ್ತು ನಮ್ಮ ರಾಜ್ಯದಲ್ಲಿ ಹೈಸ್ಪೀಡ್ ರಿಗ್‌ಗಳನ್ನು ಉಪಯೋಗಿಸಿ ದಿವಸಕ್ಕೆ ಒಂದು ಬಾವಿಯನ್ನು ತೆಗೆಯಬಹುದು. ಈ ಬಾವಿಗಳನ್ನು ತೆಗೆಯುವುದಕೋಸ್ಕರ ಒಂದು ಕೋಟಿ ಚಿಲ್ಲರೆ ರೂಪಾಯಿಯನ್ನು ಒದಗಿಸಿದ್ದೀರಿ. ಇದು ಏನೇನೂ ಸಾಲದು. ಈ ಸನ್ನಿವೇಶದಲ್ಲಿ ಇಂತಹ ಹೈಸ್ಪೀಡ್ ರಿಗ್ ಮೆಷಿನ್ ಎಲ್ಲೇ ಸಿಕ್ಕಲಿ ಅದು ಎಷ್ಟೇ ಆಗಲಿ ಹಣದ ಚಿಂತೆಯನ್ನು ಮಾಡದೆ ಕೂಡಲೇ ಅವನ್ನು ತರಿಸಿ ಪ್ರತಿಯೊಂದು ಜಿಲ್ಲೆಗೂ ೩-೪ ಮೆಷಿನ್‌ಗಳನ್ನು ಹಾಕಿ ಅದರಿಂದ ಬಾವಿಗಳನ್ನು ತೋಡಿಸಿ ಜನರಿಗೆ ಕುಡಿಯುವುದಕ್ಕೆ ನೀರು ಒದಗಿಸಬೇಕೆಂದು ಹೇಳುತ್ತೇನೆ. ತಾವು ಕೈಯಿಂದ ಬಾವಿ ತೆಗೆದು ನೀರು ಕೊಡುತ್ತೇವೆಂದು ಹೇಳಿದರೆ ಅದು ಎಲ್ಲಿಯಾದರೂ ಸಾಧ್ಯವೇ? ಅನಾವಶ್ಯವಾಗಿ ದುಡ್ಡನ್ನು ಖರ್ಚುಮಾಡುವುದನ್ನು ನಿಲ್ಲಿಸಿ ಹೈಸ್ಪೀಡ್ ರಿಗ್ಸ್‌ಗಳ ಮುಖಾಂತರ ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಸ್ನೇಹಿತರಾದ ಮಾನ್ಯ ಎಚ್. ಟಿ. ಕೃಷ್ಣಪ್ಪನವರು, ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೆ ನಾಲ್ಕು ಆಣೆಗೆ ಅಥವಾ ಸಂತೆಯಲ್ಲಿ ಒಂದು ಪ್ಲೇಟು ಬೋಂಡಾಕ್ಕೆ ಜಾನುವಾರನ್ನು ಕೊಟ್ಟು ಹೋಗುವವರನ್ನು ತಾವು ಕಣ್ಣಾರೆ ನೋಡಿದ್ದೇವೆಂದು ಹೇಳಿದ್ದಾರೆ. ಆದರೆ ಇವತ್ತು ಆ ಜಾನುವಾರುಗಳನ್ನು ಎಲ್ಲಿಗೆ ಒಯ್ಯುತ್ತೀರಿ? ಹೇಗೆ ಬೇರೆ ಕಡೆಗೆ ಒಯ್ಯುತ್ತೀರಿ? ಆಮೇಲೆ ವ್ಯವಸಾಯ ಮಾಡಲಿಕ್ಕೆ ಜಾನುವಾರು ಇಲ್ಲದೆ ಎಷ್ಟು ತೊಂದರೆ ಆಗುತ್ತದೆ ಎನ್ನುವುದನು ಹಿಂದೆ ಬರಗಾಲ ಬಂದಾಗ ನಾವು ನೋಡಿದ್ದೇವೆ ಆದ ರಿಂದ ದಯಮಾಡಿ ಪ್ರತಿಯೊಂದು ಗ್ರಾಮಕ್ಕೂ ಆವಶ್ಯಕವಾಗಿ ಈ ರಿಗ್ ಮೆಷಿನ್ ಮುಖಾಂತರ ಜನರಿಗೆ, ಜಾನುವಾರುಗಳಿಗೆ ನೀರನ್ನು ಒದಗಿಸಿ ಅವರನ್ನು ಉಳಿಸಬೇಕೆಂದು ಹೇಳುತ್ತೇನೆ. ಆಮೇಲೆ ಜಾನುವಾರುಗಳಿಗೆ ಈ ಹೈಸ್ಪೀಡ್ ರಿಗ್ ಮೆಷಿನ್ ಮುಖಾಂತರ ಮೂರು ನಾಲ್ಕು ಸ್ಪ್ರಿಂಗ್‌ಗಳನ್ನು ಹಾಕಿ ನೀರನ್ನು ಜಾಸ್ತಿ ತೆಗೆದು ಹುಲ್ಲನ್ನು ಬೆಳೆಸುವುದಕ್ಕೆ ಸಾಧ್ಯವಿದೆ. ಈಗ ಈ ಕಾರ್ಯವನ್ನು ತೆಗೆದುಕೊಂಡರೆ ಇನ್ನು ಮೂರು ತಿಂಗಳಲ್ಲಿ ಹುಲ್ಲನ್ನು ಬೆಳೆಸಬಹುದು. ಇದಕ್ಕೋಸ್ಕರ ೧೦ ಕೋಟಿ ರೂಪಾಯಿ ಖರ್ಚಾದರೂ ಚಿಂತೆಯಿಲ್ಲ. ಎಲ್ಲೆಲ್ಲಿ ಅಂತರ್‌ಜಲಗಳು ಇವೆಯೆಂದು ಕಂಡುಹಿಡಿದು ಈ ರೀತಿ ಕೆಲಸಮಾಡಿದರೆ ನಿಜವಾಗಿಯೂ ಬಡಜನರು ಮತ್ತು ಜಾನುವಾರು ಉಳಿಸಲು ಸಾಧ್ಯವಾಗುತ್ತದೆ. ಹಿಂದೆ ಬರಗಾಲ ಬಂದಾಗ ಬೇಕಾದಷ್ಟು ವಾಟರ್ ಟ್ಯಾಂಕ್‌ಗಳನ್ನು ಕೊಂಡಿದ್ದೀರಿ, ಟ್ರಾಕ್ಟರ್‌ಗಳನ್ನು ಖರೀದಿ ಮಾಡಿದ್ದೀರಿ ಅವುಗಳು ಎಲ್ಲೆಲ್ಲಿ ಇವೆಯೋ ಅವೆಲ್ಲವನ್ನು ತರಿಸಿ ಈ ಸಮಯದಲ್ಲಿ ಅದರ ಅವಶ್ಯಕತೆ ಎಲ್ಲೆಲ್ಲಿ ಇದೆಯೋ ಅದನ್ನು ಉಪಯೋಗಿಸಿಕೊಳ್ಳಿ. ಇವುಗಳನ್ನು ಕೊಳ್ಳುವಾಗ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದೀರಿ? ಇದರ ಬಗ್ಗೆ ನಮ್ಮ ಅಕೌಂಟೆಂಟ್ ಜನರಲ್‌ರವರು ಕೂಡ ಒಂದು ವರದಿಯನ್ನು ಕೊಟ್ಟಿದ್ದಾರೆ ಹಣವನ್ನು ಯಾವರೀತಿ ತಿಂದು ಹಾಕಿದ್ದಾರೆ ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ. ಟ್ಯಾಂಕ್ಸ್‌ಗಳನ್ನು ಯಾವ ರೀತಿ ಖರೀದಿ ಮಾಡಿದ್ದೀರಿ ಅದನ್ನು ನೋಡಿದರೆ ಸಾರ್ವಜನಿಕರ ದುಡ್ಡನ್ನು ಕಷ್ಟಕಾಲದಲ್ಲಿ ಕೊಡತಕ್ಕಂಥ ದುಡ್ಡು ಅದನ್ನು ಪ್ರಾಮಾಣಿಕವಾಗಿ ಖರ್ಚು ಮಾಡಬೇಕು ಎನ್ನುವುದು ಎಲ್ಲರಲ್ಲಿಯೂ ಬರಬೇಕು. ಯಾರೋ ಒಬ್ಬ ರಿಲೀಫ್ ಆಫೀಸರ್ ಇರುತ್ತಾನೆ. ಅವನ ಕೈಯಲ್ಲಿ ಕೊಟ್ಟರೆ ಕೋಟಿ ರೂಪಾಯಿಯನ್ನು ಅವನು ಯಾವರೀತಿ ಇವುಗಳನ್ನೆಲ್ಲಾ ಕೊಂಡನೋ ಗೊತ್ತಿಲ್ಲ. ಈಗ ಬಂದಿರುವುದು ನಮಗೆ ಈ ತೊಂದರೆ. ಅರ್ಧ ಕೆಲಸ ಆಗಿದ್ದರೂ ಕೂಡ ಆ ವಾಟರ್ ಟ್ಯಾಂಕ್ ಲೆಕ್ಕವೇ ಸಿಕ್ಕುತ್ತಾ ಇಲ್ಲ. ಎಲ್ಲೆಲ್ಲಿ ಅವು ಇವೆ ಅವನ್ನು ತಂದು ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಷ್ಟು ಹಣವನ್ನು ಖರ್ಚುಮಾಡುವಾಗ ಸ್ವಲ್ಪ ಹಾನೆಸ್ಟ್ ವ್ಯಕ್ತಿಗಳನ್ನು ಹಾಕಿ. ಇನ್ನು ಎಸ್‌ಎಫ್‌ಡಿಎ ಏನು ಸಣ್ಣ ರೈತರಿಗೆ ಹಣ ಹಂಚುತ್ತಿದ್ದಾರೆ ಆ ಹಣವನ್ನು ಆ ಬಡ ರೈತನಿಂದ ಒಬ್ಬ ಕಾಂಗ್ರೆಸ್ ಮುಖಂಡರು ಅದರಲ್ಲೂ ಮಂತ್ರಿಗಳ ಹತ್ತಿರದವರು ಆ ದುಡ್ಡನ್ನು ತಮ್ಮ ಸಾಲವನ್ನು

ವಾಪಸ್ ಅವರಿಂದ ವಸೂಲು ಮಾಡುತ್ತಾ ಕೂತಿದ್ದರು. ಆಕಡೆಯಿಂದ ಬಡ ಜನರಿಗೆ ಕೊಡುವುದು ಈ ಕಡೆಯಿಂದ ವಸೂಲು ಮಾಡುತ್ತಿದ್ದಾರೆಂದು ಕೇಳಿದರೆ ನಿಜವಾಗಿಯೂ ಎಂತಹ ಜನರು ಇದ್ದಾರೆ ತಾವೇ ಯೋಚನೆ ಮಾಡಬೇಕು. ಈ ಪ್ರಪಂಚದಲ್ಲಿ ಯಾರಿಗೂ ಅಧಿಕಾರ ಶಾಶ್ವತವಾಗಿರುವುದಿಲ್ಲ ಈ ಕಾಲ ದಲ್ಲಿ ಈ ರೀತಿ ನಡೆಯುತ್ತದೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ನೀವು ನಮಗೆ ಇಲ್ಲಿ ಕೂಡಲು ಅರ್ಹತೆಯಿಲ್ಲವೆಂದು ಹೇಳಿದರೆ ನಾವು ಹೊರಟುಹೋಗುತ್ತೇವೆಂದು. ಆದರೆ ನಾವು ಹೋಗ ಬೇಕಾದರೆ ನಮ್ಮ ಕೊನೆ ಉಸಿರು ಇರುವವರೆಗೆ ಹೋರಾಡುತ್ತೇವೆ. ನಾವು ನೀವು ಎಲ್ಲರೂ ಒಂದೇ. ವಿರೋಧ ಪಕ್ಷದ ನಾಯಕರಾಗಿ ಪ್ರವಾಸ ಮಾಡುತ್ತೇನೆ ಜಿಲ್ಲಾಧಿಕಾರಿಗಳು ಜೊತೆಯಲ್ಲಿ ಬರಬೇಕೆಂದು ಹೇಳಿದರೆ, ಬರುವುದಿಲ್ಲವೆಂದು ಹೇಳಬೇಕಾದರೆ ಆ ಅಧಿಕಾರಿಯು ಯೋಗ್ಯತೆ ಎಷ್ಟು ಎಲ್ಲಿಯವರೆಗೆ ಅಧಿ ಕಾರಿಗಳು ಮುಂದುವರಿದಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕು. ಇವರಿಗೆ ಅಡೆ ತಡೆ ಇದೆಯೆ? ಈ ರೀತಿ ವಿರೋಧಪಕ್ಷದ ನಾಯಕರಿಗೆ ಅಡೆ ತಡೆ ಉಂಟುಮಾಡಿದರೆ ಇದು ಯಾರಿಗೂ ಶೋಭೆ ತರ ತಕ್ಕಂಥಾದ್ದಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಮಲೆ ನಾಡು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮೊದಲು ಬೇರೆ ಕಡೆಯಲ್ಲಿರುವ ಪರಿಸ್ಥಿತಿ ನಮ್ಮ ಮಲೆ ನಾಡು ಭಾಗದಲ್ಲಿದೆಯೆಂದು ಹೇಳುವುದಕ್ಕೆ ತಯಾರಿಲ್ಲ. ಆದರೂ ನಮ್ಮ ಮಲೆನಾಡು ಕೆಲವು ಭಾಗದಲ್ಲಿ ಯಂತೂ ಸ್ವಲ್ಪ ತೊಂದರೆ ಇದೆ. ಆದರೆ ಸಂತೆಯಲ್ಲಿ ಮಳೆ ಬಂದಾಗ ಉಪ್ಪಿನವನು ಕೆಟ್ಟೆ ಎಂದದ್ದಕ್ಕೆ ತೆಂಗಿನ ಕಾಯಿಯವನು ನಾನು ಕೆಟ್ಟೆ ಎಂದು ಹೇಳಿದಹಾಗೆ ನಮ್ಮಲ್ಲಿ ಅಷ್ಟು ತೊಂದರೆ ಇಲ್ಲದಿದ್ದರೂ ಪೂರ್ಣವಾಗಿ ಅನುಕೂಲವಿದೆಯೆಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಮಲೆನಾಡು ಭಾಗದಲ್ಲಿ ಜೂನ್ ತಿಂಗಳಲ್ಲಿ ಪ್ರಾರಂಭವಾಗಬೇಕಾಗಿದ್ದ ಮಳೆಗಾಲ ಜುಲೈವರೆಗೆ ಪ್ರಾರಂಭವಾಗಲಿಲ್ಲ ಕೆಲವು ಭಾಗದಲ್ಲಿ ಹಳಿಯಾಳ, ಮುಂಡಗೋಡ ಭಾಗದಲ್ಲಿ ಮೇ ನಲ್ಲಿ ಸಹಿ ಹಾಕಿರತಕ್ಕಂಥ ಬೆಳೆಗೆ ಹರತೆ ಹಾಕಿದ್ದರೆ ಒಳ್ಳೆಯ ಫಸಲು ಸಿಕ್ಕುತ್ತಿತ್ತು ಆದರೆ ಮಳೆ ಬಾರದೆ ಇರುವ ಕಾರಣ ಅದನ್ನು ಮಾಡಲು ಆಗಲಿಲ್ಲ. ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಹೊಡೆ ಮತ್ತು ಹೂವು ಆಡತಕ್ಕಂಥ ಕಾಲ. ಆದರೆ ಮಳೆಯಿಲ್ಲದೆ ತುಂಬಾ ಬೆಳೆ ನಷ್ಟವಾಯಿತು. ಕೆಲವು ತಗ್ಗಿನ ಪ್ರದೇಶದಲ್ಲಿ ಬೆಳೆ ಪರವಾಗಿಲ್ಲ ಆದರೆ ಅಪ್ಪರ್ ರೀಜನ್‌ಗಳಲ್ಲಿ ಬೆಳೆಗೆ ತೊಂದರೆಯಾಗಿದೆ. ಇನ್ನೂ ಸೊರಬ ತಾಲ್ಲೂಕಿನಲ್ಲಿ ಈ ಪರಿಸ್ಥಿತಿಯೇ ಉಂಟಾಗಿದೆ. ನಮ್ಮ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ಡ್ರೈ ಬೆಳೆಯನ್ನು ಕೂಡ ಸರಿಯಾಗಿ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಇನ್ನು ಚೆನ್ನಗಿರಿ ತಾಲೂಕಿನಲ್ಲಿ ತೀರಾಕೆಟ್ಟಿದೆ. ಅಲ್ಲಿ ಕೆಲವು ಹಳ್ಳಿಗಳಲ್ಲಿ ಸಂಪೂರ್ಣವಾಗಿ ಬೆಳೆ ನಾಶವಾಗಿದೆ. ಕುಂಸಿಯಂಥ ಊರಲ್ಲಿ ಕೂಡ ಬೆಳೆ ಸಂಪೂರ್ಣವಾಗಿ ಹೋಗಿದೆ. ಇವತ್ತು ತಮಗೆ ತಿಳಿಸುವುದೇನೆಂದರೆ ನಿಮ್ಮ ಅಧಿಕಾರಿಗಳಿಗೆ ತಿಳಿಸಿ ಎಲ್ಲಾ ಭಾಗದಲ್ಲೂ ಸರ್ವೆ ನಡೆಸಿ ಎಷ್ಟರ ಮಟ್ಟಿನ ಬೆಳೆ ಯನ್ನು ಇಟ್ಟಿದ್ದಾರೆ ಅದರಲ್ಲಿ ಎಷ್ಟು ಪರ್ಸೆಂಟ್ ಬೆಳೆ ಬಂದಿದೆ ಎಂದು ಪಹಣಿಯಲ್ಲಿ ನಮೂದಿಸಬೇಕು. ಇದರಿಂದ ಲೆವಿ ಮತ್ತು ಕಂದಾಯವನ್ನು ವಸೂಲುಮಾಡುವಾಗ ತೊಂದರೆ ಬರುವುದಿಲ್ಲವೆಂದು ಹೇಳು ತ್ತೇನೆ. ಆದುದರಿಂದ ನಾವು ಎಲ್ಲಾ ಕಡೆಗೂ ಕಾಮಗಾರಿಗಳನ್ನು ಮಾಡಿಸಿ ಎಂದು ಹೇಳುವುದಿಲ್ಲ ಯಾವ ಪಾಕೆಟ್ಸ್‌ಗಳು ತೀರಾ ಅಭಾವಕ್ಕೆ, ತೊಂದರೆಗೆ ಒಳಗಾಗಿದೆ ಅಂಥ ಪ್ರದೇಶವನ್ನು ಐಡೆಂಟಿಫೈ ಮಾಡಿ ಅಂಥಹ ಕಡೆ ಕೂಡ ಪರಿಹಾರ ಕಾಮಗಾರಿಗಳನ್ನು ಮಾಡಲು ನಿರ್ದಿಷ್ಟವಾಗಿ ಮೊದಲು ಸರ್ವೆ ಕೆಲಸವನ್ನು ಮಾಡಿಸಬೇಕು. ಇವತ್ತು ೧೫ ಜಿಲ್ಲೆಗಳು ಮಾತ್ರ ಅಭಾವ ಪರಿಸ್ಥಿತಿಗೆ ಒಳ ಗಾಗಿವೆ ಎಂದು ಹೇಳಿದ್ದೀರಿ ಆದರೆ ನೀವು ಇನ್ನು ಸಾಕಾದಷ್ಟು ರೀತಿಯಲ್ಲಿ ಸರ್ವೆ ಮಾಡಿಸಿದರೆ ಪರಿ ಸ್ಥಿತಿ ಏನೇನು ಆಗಿದೆ ಎನ್ನುವುದರ ಬಗ್ಗೆ ವರದಿಯನ್ನು ಸಂಗ್ರಹಣೆ ಮಾಡಿಸಿದರೆ ತಮಗೆ ಗೊತ್ತಾಗುತ್ತದೆ. ತಮಗೆ ತಮ್ಮ ಅಧಿಕಾರಿಗಳಿಂದ ಬಂದಿರುವ ಮಾಹಿತಿಯ ಆಧಾರದ ಮೇಲೆ ೧೫ ಜಿಲ್ಲೆಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಗೊತ್ತು ಮಾಡಿದ್ದೀರಿ, ಆದುದರಿಂದ ಇನ್ನು ಸರಿಯಾದ ವಿಷಯವನ್ನು ಸಂಗ್ರ ಹಣೆ ಮಾಡಲಿಕ್ಕೆ ತತ್‌ಕ್ಷಣ ನಿಮ್ಮ ಜಿಲ್ಲಾಧಿಕಾರಿಗಳಿಗೆ ಸ್ವಲ್ಪ ಸರಿಯಾದ ನಿರ್ದೇಶನವನ್ನು ತಾವು ಕೊಡಬೇಕು. ಜಿಲ್ಲಾಧಿಕಾರಿಗಳು ಕೇವಲ ಮಂತ್ರಿಗಳು ಬಂದಾಗ ಮಾತ್ರ ಓಡಾಡುವುದು ಅವರು ಹೋಗದೇ ಇದ್ದರೆ ಕಚೇರಿಯಲ್ಲಿಯೇ ಕುಳಿತು ವಿಷಯ ಸಂಗ್ರಹಣೆ ಮಾಡಿ ಸಂಧಿ ಗಳನ್ನು ಕಳುಹಿಸಿ ಕೊಡುತ್ತಾರೆ. ಅವರು ಅಲ್ಲಿಂದ ನಿಮಗೆ ರವಾನಿಸಿದ್ದನ್ನು ನೀವು ನಮಗೆ ಇಲ್ಲಿ ನಮ್ಮ ಮುಂದಿಡುತ್ತೀರಿ. ಇದು ಆಗಬಾರದು. ಮಂತ್ರಿಗಳು ಓಡಾಟ ಮಾಡಿದಷ್ಟು, ಜಿಲ್ಲಾಧಿಕಾರಿಗಳು ಇವತ್ತು ಮಾಡಿದರೆ ಬಹುಶಃ ನಿಮಗೆ ಸಾಕಾದಷ್ಟು ವಿಚಾರಗಳು ಸಿಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ೧೫ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಬಂದಿದೆ ಎಂದು ಹೇಳಿದ ಮೇಲೆ, ರಾಜ್ಯದ ೮೦ ಭಾಗ ಬರಗಾಲಕ್ಕೆ ತುತ್ತಾಗಿದೆ ಎನುವುದು ನಮಗೆ ಗೊತ್ತಾಗುತ್ತದೆ. ಇವತ್ತು ನಮ್ಮ ರಾಜ್ಯ ಬರಗಾಲ ಪೀಡಿತವಾಗಿದೆ

ಎಂದು ಸಾರಬೇಕಾದಂಥ ಪರಿಸ್ಥಿತಿ ಬಂದಿದೆ. ಇದರಲ್ಲಿ ಹಿಂದು ಮುಂದು ಮಾಡಬೇಕಾದಂಥ ಅಗತ್ಯವಿಲ್ಲ. ಕರ್ನಾಟಕ ರಾಜ್ಯ ಈ ಸಾಲಿನಲ್ಲಿ ಕ್ಷಾಮಕ್ಕೆ ಒಳಗಾಗಿದೆಯೆಂದು ಸಾರಿದರೇನೇ ನಮಗೆ ಕೇಂದ್ರ ಸರ್ಕಾರದಿಂದ ಸಹಾಯ ಸಿಗಲು ಸಾಧ್ಯವಿದೆ ಇಲ್ಲದೇ ಹೋದರೆ ಅದು ಸಿಗುವುದಕ್ಕೆ ಸಾಧ್ಯವಿಲ್ಲ. ಇಲ್ಲದಿದ್ದರೆ ಅದರಿಂದ ಬಹಳ ಅನಾಹುತವಾಗುತ್ತದೆ. ತಾವು ಆ ರೀತಿ ಸಾರದಿದ್ದರೆ ಕೇಂದ್ರ ಸರ್ಕಾರದವರು ಮಾಮೂಲು ಕೊಡತಕ್ಕ ಹಣಕ್ಕಿಂತ ಹೆಚ್ಚಿಗೆ ಏನೂ ಕೊಡುವುದಿಲ್ಲ. ಹಿಂದೆ ನೀವು ೪ ಜಿಲ್ಲೆಯಲ್ಲಿ ಮಾತ್ರ ಅಭಾವ ಪೀಡಿತವಾಗಿದೆಯೆಂದು ಸಾರಿದ್ದೀರಿ ಆದರೆ ಇವತ್ತು ೧೫ ಜಿಲ್ಲೆಗಳು ತೊಂದರೆಗೆ ಒಳಗಾಗಿರುವುದರಿಂದ ತಾವು ಕ್ಷಾಮ ಪೀಡಿತ ಪ್ರದೇಶವೆಂದು ಸಾರಿದರೆ ನಮಗೆ ಹೆಚ್ಚಿನ ಹಣ ಸಹಾಯ ಬರುವುದಕ್ಕೆ ಸಾಧ್ಯತೆ ಇದೆ. ಆದುದರಿಂದ ತಾವು ತತ್‌ಕ್ಷಣ ಸರ್ವೆ ಮಾಡಿಸಿ ಜಿಲ್ಲಾಧಿಕಾರಿಗಳಿಗೆ ಬೇರೆ ಕೆಲಸಗಳಿಂದ ಸ್ವಲ್ಪ ದೂರವಿಟ್ಟು ಈ ಕೆಲಸಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಪರಿಸ್ಥಿತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡಿ. ಮತ್ತೆ ಇವತ್ತು ನೀವು ಶಾಸನ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ತಾವು ಶಾಸನ ಸಭೆಯ ವಿರೋಧ ಪಕ್ಷದ ಸದಸ್ಯರನ್ನು ಈ ವಿಷಯದಲ್ಲಿ ವಿಶ್ವಾಸಕ್ಕ ತೆಗೆದುಕೊಂಡು, ಅವರೊಡನೆ ಸಮಾಲೋಚನೆ ಮಾಡಲಿಲ್ಲ ಎನ್ನತಕ್ಕಂಥ ನೇರವಾದ ಆಪಾದನೆಯನ್ನು ನಾನು ಮಾಡಬೇಕಾಗಿದೆ. ಕ್ಷಾಮ ನಿನ್ನೆ ಇವತ್ತು ಪ್ರಾರಂಭವಾಗಿಲ್ಲ, ಇದು ಪ್ರಾರಂಭವಾಗಿ ೩-೪ ತಿಂಗಳು ಆಗಿರುವುದನ್ನು ಕಾಣಬಹುದು ಆದರೆ ನಾವು ಇದನ್ನು ಪತ್ರಿಕೆಗಳ ಮುಖಾಂತರ ನೋಡಿ ತಿಳಿದು ಕೊಳ್ಳುವುದಕ್ಕೆ ಆಗುವುದಿಲ್ಲ. ಅದು ನಿಂತು ಹೋಗಿದೆ ಹೀಗೆ ಬಾಯಿ ಮಾತಿನಲ್ಲಿ ಮಂತ್ರಿಗಳು ಹೇಳಿದ್ದು, ಅವರಿವರು ಹೇಳಿದ್ದು ಕೇಳಿದುದರ ಆಧಾರದ ಮೇಲೆ ನಾವು ಊಹಿಸಿ ಹೆಚ್ಚು ಕಡಿಮೆ ೩-೪ ತಿಂಗಳಿಂದ ಕ್ಷಾಮದ ಪರಿಸ್ಥಿತಿ ಶುರುವಾಗಿದೆಯೆಂದು ಮನವರಿಕೆ ಮಾಡಿಕೊಂಡಿದ್ದಾನೆ. ಇದನ್ನು ಹೇಗೆ ಪರಿಹಾರ ಮಾಡಬೇಕು ಎನ್ನುವ ಬಗ್ಗೆ ಸಮಾಲೋಚನೆ ಮಾಡುವುದಕ್ಕೆ ವಿರೋದ ಪಕ್ಷದವರನ್ನು ಕಡೆಗಣಿಸಿದ್ದಾರೆ ಎನ್ನತಕ್ಕಂಥ ಆಪಾದನೆಯನ್ನು ನೇರವಾಗಿ ಮಾಡುತ್ತಿದ್ದೇನೆ. ಆದರೂ ಕೂಡ ನಮ್ಮನ್ನು ನೀವು ಕಡೆಗಾಣಿಸಿದರೂ ಕೂಡ ನಿಮ್ಮ ಕಾರ್ಯಕ್ರಮದಲ್ಲಿ ನಾವು ಹಿಂದೇಟು ಹಾಕುವವರಲ್ಲ ನಮ್ಮ ಕೈಲಾದ ಸಹಾಯವನ್ನು ಮಾಡಲು ನಾವು ಸಿದ್ಧರಿದ್ದೇವೆನ್ನುವ ಮಾತನ್ನು ಹೇಳಬಯಸುತ್ತೇನೆ, ಈಗಲಾದರೂ ಸಮಾಲೋಚನೆ ಮಾಡತಕ್ಕಂಥ ಕೆಲಸ ಮಾಡಿ, ಅತ್ಯಂತ ವ್ಯವಸ್ಥಿತವಾದ, ಶಾಶ್ವತವಾದ ಕೆಲಸವನ್ನು ಕೈಗೊಳ್ಳತಕ್ಕಂಥ ಕೆಲಸವನ್ನು ಮಾಡಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇಂಥ ಶಾಶ್ವತವಾದ ಕೆಲಸವನ್ನು ಮಾಡಲು ಸಮಯಕ್ಕೆ ಸರಿಯಾಗಿ ಇನ್ನೂ ಹೆಚ್ಚು ಹಣವನ್ನು ಕೇಂದ್ರದಿಂದ ಪಡೆಯುವುದಕ್ಕೆ ಒತ್ತಾಯ ಮಾಡಿ, ಈ ದಿಶೆಯಲ್ಲಿ ನಮ್ಮ ಸರ್ಕಾರದವರು ಇನ್ನು ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಪುಗೌಡ (ಶಹಾಪುರ್).— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ರಾಜ್ಯದಲ್ಲಿ ಹೆಚ್ಚಿನ ಭಾಗದಲ್ಲಿ ಮಳೆಯಾಗದೆ ಅಭಾವ ಪರಿಸ್ಥಿತಿ ಉಂಟಾಗಿದೆ ಇದು ಶೋಚನೀಯ. ನಾನು ಬಳ್ಳಾರಿಯಿಂದ ಬೆಂಗಳೂರುವರೆಗೆ ಬಸ್ಸಿನಲ್ಲಿ ಬಹಳ ವರ್ಷಗಳಿಂದ ಪ್ರವಾಸ ಮಾಡಿದ್ದೇನೆ. ಇಂಥ ಪರಿಸ್ಥಿತಿ ಹಿಂದೆಂದೂ ಕಂಡಿರಲಿಲ್ಲ, ನಮ್ಮ ಕರ್ನಾಟಕದಲ್ಲಿ ಹೆಚ್ಚಿನ ಮಳೆಯಾಗತಕ್ಕಂಥ ಭಾಗಗಳಾದ ಶಿವಮೊಗ್ಗ, ಮಂಗಳೂರು ಜಿಲ್ಲೆಗಳಲ್ಲಿ ಸುಮಾರು ನಾಲ್ಕು ನೂರ ಐದು ನೂರು ಇಂಚುಗಳ ಮಳೆಯಾಗತಕ್ಕಂಥ ಪ್ರದೇಶಗಳಲ್ಲಿ ಮಳೆಯಾಗದೆ ಹೆಚ್ಚಿನ ಪ್ರದೇಶವೆಲ್ಲಾ ಅಭಾವ ಪರಿಸ್ಥಿತಿಗೆ ಈಡಾಗಿದೆ. ಈ ವರ್ಷ ನಮ್ಮ ಗುಲ್ಬರ್ಗ ಬೀದರ್ ಭಾಗಗಳಲ್ಲಿ ಮುಂಗಾರು ಬೆಳೆ, ಬಹಳ ಒಳ್ಳೆಯ ಬೆಳೆ ಬರುತ್ತದೆಂದು ನಾವು ನಮ್ಮ ಮಿತ್ರರೊಡನೆ ಮಾತನಾಡಿಕೊಳ್ಳುತ್ತಿದ್ದೆವು. ೧೨ ಆಣೆ ಬೆಳೆ ಬರಬಹುದೆಂದು ಆಶೆ ಪಟ್ಟುಕೊಂಡಿದ್ದೆವು. ಆದರೆ ಬರಬರುತ್ತಾ ಬೆಳೆ ಕೈಗೆ ಬರುವ ವೇಳೆಗೆ ಮೊದಲನೆಯದಾಗಿ ಜೋಳ ಕೈ ಕೊಟ್ಟಿತು ಆ ಮೇಲೆ ಶೇಂಗಾ ತೊಗರಿ ಬೆಳೆ ಕೈಗೆ ಬರುವ ವೇಳೆಗೆ ಸ್ವಾತಿ, ಹಸ್ತ, ಮಳೆ ಆಗಲಿಲ್ಲ. ಒಟ್ಟಿಗೆ ಮಳೆಯಾಗಲಿಲ್ಲ ಮಳೆ ಹೋದುದರಿಂದ ಶೇಂಗಾ ಎರಡು ಆಣೆಯಾಗುತ್ತದೆ, ತೊಗರಿ ಬೆಳೆ ಎರಡು ಆಣೆಯಾಗುತ್ತದೆ ಇನ್ನು ಜೋಳ ಎರಡು ಆಣೆಯಾಗಬಹುದು. ಇವತ್ತು ಹಳೆ ಮೈಸೂರು ಭಾಗದಲ್ಲೂ ಮಳೆ ಆಗದೇ ಕೆರೆಗಳು ಒಣಗಿರತಕ್ಕಂತ ಒಂದು ದೃಶ್ಯವನ್ನು ನೋಡಿದಾಗ ನನಗನ್ನಿಸುತ್ತದೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಇದೇ ಮೊದಲನೆಯ ಬಾರಿಗೆ ಇಷ್ಟು ಭೀಕರವಾದ ಅಭಾವ ಪರಿಸ್ಥಿತಿ ಉಂಟಾಗಿದೆಂದು ನಮಗೆ ಅನ್ನಿಸುತ್ತದೆ, ಇದಕ್ಕಾಗಿ ಶಾಶ್ವತವಾದ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ಅದೇ ರೀತಿ ತಾವು ಶಾಶ್ವತವಾದ ಕಾಮಗಾರಿಗಳನ್ನು ಗುಲಬರ್ಗ, ಬೀದರ್,

ರಾಯಚೂರು ಜಿಲ್ಲೆಗಳಲ್ಲಿ ತೆಗೆದುಕೊಳ್ಳಬೇಕು. ಮಾನ್ಯ ಘೋರ್ಪಡೆಯವರಿಗೂ ಗೊತ್ತಿದೆ ತುಂಗಭದ್ರಾ ಜಲಾಶಯದಲ್ಲಿ ೨ ತಿಂಗಳಿಂದ ನೀರು ಕಡಿಮೆಯಾಗಿದೆ. ಬಳ್ಳಾರಿ, ಗುಲ್ಬರ್ಗ ಬೀದರ್ ಜಿಲ್ಲೆಗಳಲ್ಲಿ ಕಳೆದ ೨-೩ ತಿಂಗಳಿಂದ ಮಳೆಯೇ ಆಗಿಲ್ಲ, ಆದರೆ ಮೊನ್ನೆ ೪ ದಿವಸಗಳ ಹಿಂದೆ ಗುಲ್ಬರ್ಗದಲ್ಲಿ ಮಳೆಯಾಯಿತೆಂದು ಕೇಳಿದ್ದೇನೆ ರಬ್ಬಿ ಕ್ಷೇತ್ರವಾದ ಗುಲ್ಬರ್ಗ ಕ್ಷೇತ್ರದಲ್ಲಿ ಮತ್ತು ಬಳ್ಳಾರಿಯಲ್ಲಿ ಈ ಮಳೆಗಳು ಹೋದುದರಿಂದ ೬೧ ಶೇಕಡ ಆಗತಕ್ಕಂಥ ರಬ್ಬಿ ಕ್ಷೇತ್ರದಲ್ಲಿ ಜೋಳ ಬೆಳೆಯುತ್ತಿದ್ದರು. ಆದರೆ ಇವತ್ತು ಮಳೆಯಾಗದೇ ಇದುದರಿಂದ ಬೆಳೆಯೆಲ್ಲಾ ಒಣಗಿ ಹೋಗಿದೆ. ಈ ಮಾತನ್ನು ನಾನು ಸ್ವಂತವಾಗಿ ಹೇಳುತ್ತಿಲ್ಲ. ಈ ಭಾಗಗಳಲ್ಲಿ ಜೋಳದ ಬಿತ್ತನೆ ಕೇವಲ ಶೇಕಡ ೨೫ರಷ್ಟು ಸಜ್ಜೆ ನೆಡಲಾಗಿದೆಯೇ ಹೊರತು, ಪೂರ್ತ ಕ್ಷೇತ್ರಗಳಲ್ಲಿ ನೆಟ್ಟಿಲ್ಲ. ಇಂಥಾ ಪರಿಸ್ಥಿತಿಯಲ್ಲಿ, ವುತ್ತುಗಿ, ಚಿತ್ತೆ ಮತ್ತು ಇಸಾಕಿ ಮಳೆಯಾದರೂ ಕೂಡ ರಬ್ಬಿ ಬೆಳೆಯಾಗುವುರಲ್ಲಿ ಸ್ವಲ್ಪ ಸಂಶಯವಿದೆ. ಈ ಒಂದು ದೃಷ್ಟಿಯಿಂದ ನಾವು ನೋಡುವುದಾದರೆ, ಏನು ಇಪ್ಪತ್ತೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದು ಹೆಚ್ಚಿನ ಪ್ರಮಾಣದಲ್ಲಿ ಕೊಡಲಾದ ಧನಸಹಾಯವೇನಲ್ಲ. ಮಾನ್ಯ ದೇವೇಗೌಡರವರು ಹೇಳಿದಂತೆ, ಮುಂದಿನ ಒಂಬತ್ತು ತಿಂಗಳುಗಳ ಪರಿಸ್ಥಿತಿಯನ್ನು ಸುಧಾರಿಸಲು, ಕೇಂದ್ರ ಸರ್ಕಾರದಿಂದ ನೂರು ಕೋಟಿ ರೂಪಾಯಿಗಳ ಧನ ಸಹಾಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮಲ್ಲಿ ರಾಬಿ ಬೆಳೆ ಹೋದರೆ ಹುಲ್ಲು ಸಿಕ್ಕುವುದಿಲ್ಲ. ನಮ್ಮಲ್ಲಿ ಹುಲ್ಲು ಬೆಳೆಯದಿದ್ದರೆ, ಸ್ಥಳೀಕರು, ಹುಲ್ಲನ್ನು ಹುಡುಕಿಕೊಂಡು ಪಕ್ಕದ ಇನ್ನಿತರ ರಾಜ್ಯಗಳಿಗೆ ಓಡಿ ಹೋಗಬೇಕಾಗುತ್ತದೆ. ಇಂಥಾ ಪರಿಸ್ಥಿತಿ ಇರುವಾಗ, ಈ ವರ್ಷ ನಮ್ಮ ಭಾಗದ ದನಗಳಿಗೆ ಎಲ್ಲೂ ಹುಲ್ಲು ಸಿಕ್ಕದ ಪರಿಸ್ಥಿತಿ ಉದ್ಭವಿಸಿದೆ. ಇನ್ನು ಮುಂದೆ ಏನಾದರೂ ಮಳೆಯಾದರೆ ನಮ್ಮ ಭಾಗದ ಎರಡು ಮೂರು ಕಡೆಗಳಲ್ಲಿ ಹುಲ್ಲು ಬೆಳೆಯಬಹುದು. ಮತ್ತು ಜೋಳ ರಾಬಿ ಬಿತ್ತಿರುವ ಕಡೆಗಳಲ್ಲಿ ಸ್ವಲ್ಪ ಹುಲ್ಲು ಆಗುವ ಪರಿಸ್ಥಿತಿ ಇದೆ. ಆದರೆ ಕಾಳೂ ಮಾತ್ರ ನಮಗೆ ಸಿಕ್ಕುವುದಿಲ್ಲ. ರಾಯಚೂರು ಭಾಗದಲ್ಲಿ ಮಳೆಯಾಗದೆ, ಆದರ ಸುತ್ತಮುತ್ತಲಿನ ಭಾಗಗಳಲ್ಲಿ ಎಲ್ಲೂ ರಾಬಿ ಬೆಳೆಯಾಗಿಲ್ಲ ಅಷ್ಟೆ ಅಲ್ಲದ್ಯೆ ಡಿಂಡ್ಲೂರು ಭಾಗದಲ್ಲೂ ಮಳೆಯಿಲ್ಲ. ಆದುದರಿಂದ ಬರಗಾಲವನ್ನು ಕೇವಲ ನೂರ ಎಂಟು ತಾಲ್ಲೂಕುಗಳಿಗೆ ಮಾತ್ರ ಸೀಮಿತಗೊಳಿಸುವ ಮಾತು ಬೇಡ. ಇವತ್ತು ದೇಶದಲ್ಲಿ ಮುಂಗಾರು ಮಳೆ ಸರಿಯಾಗಿ ಆಗದೆ, ರೈತನಿಗೆ ತುತ್ತು ಸಿಕ್ಕದಂಥ ಪರಿಸ್ಥಿತಿ ಉದ್ಭವಿಸಿದೆ. ಗುಲ್ಬರ್ಗ ಕಡೆಯಿಂದ ಜನರು ಈ ಕಡೆಗಳಿಗೆ ಸತತವಾಗಿ ಬರುತ್ತಿದ್ದಾರೆ. ನಾನು ಅವರು ಬಂದಾಗ, ಒಳ್ಳೆಯ ಮಳೆ ಬಂದು ಉತ್ತಮವಾಗಿ ಪಸಲು ಬರುತ್ತದೆ, ನೀವೆಲ್ಲಾ ಹೋಗಿ ಎಂದು ಹೇಳಿ ಕಳುಹಿಸಿದೆ. ಆದರೆ, ಮಳೆ ಬಾರದ. ಬೆಳೆಯಾಗದೆ, ಅವರೆಲ್ಲಾ ಪುನಃ ಬಂದು ''ಏನ್ರಿ, ಮಳೆಯೇ ಆಗಿಲ್ಲ.. ಏನು ಮಾಡುವುದು'' ಎಂದು ಕೇಳುತ್ತಿದ್ದಾರೆ. ಅದುದರಿಂದ ಜನರಿಗೆ ಶಾಶ್ವತವಾಗಿ ಕೆಲಸ ಕೊಡಬೇಕಾದರೆ. ಮೊದಲು, ಹೇಮಾವತಿ, ಹಾರಂಗಿ ಕೃಷ್ಣ ಮೇಲ್ದಂಡೆ ಯೋಜನೆಗಳಲ್ಲಿ ಹಣ ತೊಡಗಿಸಿ, ಕೆಲಸ ಕಾರ್ಯಗಳನ್ನು ಮಾಡಿಸಬೇಕಾಗಿದೆ. ಹೀಗೆ ಮಾಡಿದರೆ, ಸ್ಥಾಯಿ ಕೆಲಸಗಳು ಲಭ್ಯವಾಗಿ, ಒಂಭತ್ತು ತಿಂಗಳೂ ಕಾಮಗಾರಿಗಳನ್ನು ಮಾಡಿದಂತಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸಗಳನ್ನು ತೆಗೆದುಕೊಂಡರೆ, ಮುಲ್ಲಾಮರಿ ಮತ್ತು ಬಿಜಾಪುರದ ಮೂರು ತಾಲ್ಲೂಕುಗಳಲ್ಲಿರುವ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ಕೃಷ್ಣಾ ಮೇಲ್ದಂಡೆಯಲ್ಲಿ ಒಂದು ಕಡೆ ಎರಡು ಕೋಟೆ ರೂಪಾಯಿಗಳನ್ನು ಖರ್ಚು ಮಾಡಿ ನಾಲೆ ಹೊಡಿಸಿದರು. ಈಗ ಆ ನಾಲೆ ಮುಚ್ಚಿ ಹೋಗುವ ಪರಿಸ್ಥಿತಿ ಬಂದಿದೆ. ದೊಡ್ಡ ದೊಡ್ಡ ಕೆರೆಗಳ ಕೆಲಸ ಪ್ರಾರಂಭವಾಗಿಲ್ಲ, ನಾನು ಮೊನ್ನೆ ಷಹಾಪುರಕ್ಕೆ ಹೋಗಿದ್ದಾಗ, ಅಲ್ಲಿನ ಅಸಿಸ್ಟೆಂಟ್ ಇಂಜಿನಿಯರ್‌ರವರು ಲೆಟರ್ ಆಫ್ ಕ್ರೆಡಿಟ್ ಇವತ್ತು ಬರುತ್ತದೆ ಎಂದು ಹೇಳಿದರು. ಅದುದರಿಂದ, ಅಲ್ಲಿ ಇರುವ ದೊಡ್ಡ ದೊಡ್ಡ ಕೆರೆಗಳ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ರಾಜ್ಯದ ೧೦೮ ತಾಲ್ಲೂಕುಗಳಿಗೆ ಮಾತ್ರ ಈ ಬರಗಾಲ ಸೀಮಿತವಾಗಿಲ್ಲ. ಗುಲ್ಬರ್ಗ ರಾಯಚೂರು ಮತ್ತು ಬೀದರ್ ಕಡೆ ಮುಂಗಾರು ಮಳೆ ಕಾಲಕ್ಕೆ ಸರಿಯಾಗಿ ಬಾರದ ಕಾರಣ, ಅಲ್ಲಿ ಎರಡಾಣೆ ಮೂರಾಣೆ ಮಳೆ ಮಾತ್ರ ಆಗಿದೆ. ಆದರೂ, ಅಲ್ಲಿ ಸಹಕಾರ ಸಂಘಗಳವರು ಮತ್ತು ಸರ್ಕಾರದ ರೆವಿನ್ಯೂ ಖಾತೆಯವರು ಸಾಲ ವಸೂಲಿಯನ್ನು ಬಹಳ ಬಿಗಿಯಾಗಿ ಮಾಡಲಾಗಿದೆ ರೆವಿನ್ಯೂ ಖಾತೆಯವರು ಬಹಳ ಜಬರ್ದಸ್ತು ಮಾಡಿ ಹಣವನ್ನು ವಸೂಲು ಮಾಡುವ ವಾತಾವರಣ ನಿರ್ಮಾಣ ಮಾಡಿದ್ದಾರೆ. ದೊಡ್ಡ ದೊಡ್ಡ ಹಿಡುವಳಿದಾರರು ಮಾತ್ರ ಹಣವನ್ನು ಕೊಡುವ ಸ್ಥಿತಿಯಲ್ಲಿದ್ದಾರೆ ಎಂದು ಹೇಳಬಹುದು. ಅದರೆ, ನನ್ನ ಮನೆಯಲ್ಲಿ ಇಂದು ಮೂವತ್ತು ಸೇರು ಜೋಳವಿಲ್ಲ. ಐವತ್ತು ಎಕರೆ ಇರು

ವಂಥ ಒಕ್ಕಲಿಗ ಇಂದು ಆ ಜಮೀನಿನಲ್ಲಿ ಆತನಿಗೆ ೨೫ ಪರ್ಸೆಂಟ್ ಅಷ್ಟೂ ಬೆಳೆಯಾಗಿಲ್ಲ. ಅಂಥವನು ಎಲ್ಲಿಂದ ಹಣ ತಂದು ಸಾಲವನ್ನು ಮರುಪಾವತಿ ಮಾಡಬೇಕು ? ಅಲ್ಲಿ ಇನ್‌ಸ್ಪೆಕ್ಟರು ಮತ್ತಿತರ ಅಧಿಕಾರಿಗಳು ಜೀಪುಗಳನ್ನು ಹಾಕಿಕೊಂಡು ಓಡಾಡುತ್ತಿದ್ದಾರೆ. ಆದುದರಿಂದ, ಎಲ್ಲೆಲ್ಲಿ ಅಭಾವ ಇದೆ, ಮಳೆಯಿಲ್ಲದೆ ಬೆಳೆಯಾಗಿಲ್ಲ ಅಂಥಾ ಕಡೆ ಕಂದಾಯದ ವಸೂಲಾತಿಯನ್ನು ಮುಂದಕ್ಕೆ ಹಾಕಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು, ಬರಗಾಲ ಕೇವಲ ೧೭೮ ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಜ್ಯದ ಬಹುಭಾಗದಲ್ಲೆಲ್ಲಾ ಆವರಿಸಿದೆ ಎಂದು ಹೇಳಿ, ಅಲ್ಲೆಲ್ಲಾ ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಿಳಿಸಿ, ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the chair.]

† ಕೆ. ಬಿ, ಶಿವಯ್ಯ (ನಂಜನಗೂಡು).—ಸನ್ಮಾನ್ಯ ಉಪಾಧ್ಯಕ್ಷರೇ ನಮ್ಮ ಕರ್ನಾಟಕ ರಾಜ್ಯಕ್ಕೆ ಇಂದು ಬಂದಿರುವ ಬರಗಾಲ ಒಂದು "ಆಪತ್ತು'' ಎಂದು ಹೇಳಿದರೂ ತಪ್ಪಾಗಲಾರದು ಈ ವರ್ಷ ನಮ್ಮ ರಾಜ್ಯದಲ್ಲಿ ಬರಗಾಲ ಎನ್ನುವುದು ಬಹಳ ವ್ಯಾಪಕವಾಗಿ ಆವರಿಸಿದೆ. ನಮ್ಮ ದೇಶದಲ್ಲಿ ಬಹುಪಾಲು ಮಂದಿ ವ್ಯವಸಾಯ ಮಾಡಿ ಜೀವನ ಮಾಡುವವರಿದ್ದಾರೆ. ಒಂದು ವರ್ಷ ಬೆಳೆ ಹೋದರೆ ಶೇಕಡಾ ೮೦-೮೫ ರಷ್ಟು ಗ್ರಾಮಾಂತರ ಪ್ರದೇಶದ ಜನರು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ, ಮಳೆಯಾದರೆ ಅವರ ಜೀವನ ಸುಧಾರಿಸುತ್ತದೆ. ಇಲ್ಲದಿದ್ದರೆ ಅವರ ಕಷ್ಟ ಹೇಳತೀರದಾಗುತ್ತದೆ. ನನ್ನ ೨೦-೨೫ ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ಕ್ಷಾಮದ ಇಕ್ಕಟ್ಟಿಗೆ ಸಿಕ್ಕಿರುವ ರಾಜ್ಯದ ೧೯ ಜಿಲ್ಲೆಗಳಲ್ಲಿ ಬಹಳ ಕಷ್ಟಕ್ಕೆ ಸಿಕ್ಕಿರುವ ಜಿಲ್ಲೆ ಎಂದರೆ, ಅದು ಮೈಸೂರು ಜಿಲ್ಲೆ. ಗುಂಡ್ಲುಪೇಟೆ, ಚಾಮರಾಜನಗರ, ಮತ್ತು ಕೊಳ್ಳೇಗಾಲದ ಕಡೆಗಳಲ್ಲಿ ಸಾಮಾನ್ಯವಾದ ಬರಗಾಲದ ಪರಿಸ್ಥಿತಿ ಇತ್ತು. ಇವುಗಳ ಜೊತೆಗೆ, ನಂಜನಗೂಡು, ಟಿ. ನರಸೀಪುರ ಮತ್ತು ಕೆ. ಆರ್. ನಗರ ತಾಲ್ಲೂಕುಗಳಲ್ಲಿ ನೀರಾವರಿ ಆಶ್ರಯವಿದ್ದರೂ, ಮುಂಗಾರು ಮಳೆಯಾಗದೆ, ಬೆಳೆಯೆಲ್ಲಾ ಹೋಗಿ, ಅಲ್ಲೆಲ್ಲಾ ದೊಡ್ಡ ಪ್ರಮಾಣದಲ್ಲಿ ಬರಗಾಲ ವ್ಯಾಪಿಸಿದೆ. ಇಲ್ಲೆಲ್ಲಾ ಜೋಳದ ಬೆಳೆ ಬಹಳ ಸೊಗಸಾಗಿ ಆಗಬೇಕಾಗಿತ್ತು. ಆದರೆ, ಮಳೆ ಬಾರದ ಕಾರಣ, ಅಲ್ಲಿ ಜೋಳವನ್ನು ಯಾರೂ ಸಹ ಬಿತ್ತಲೇ ಇಲ್ಲ. ಕಾಲುವೆ ನೀರಿನಿಂದ ಸುಮಾರು ೭-೮ ಸಾವಿರ ಎಕರೆಗಳಲ್ಲಿ ನೀರಾವರಿ ಪ್ರದೇಶವಿದ್ದರೂ ಕೂಡ, ಅಲ್ಲಿ ಭತ್ತ ಬಿತ್ತಿದ್ದರೂ, ಅದು ಆಗುತ್ತದೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ಬಂದಿದೆ. ಹೀಗಾಗಿ ಅಲ್ಲಿ ಸರಿಯಾಗಿ ಮಳೆ ಬೀಳದೆ ಜನಗಳಿಗೆ ಕುಡಿಯುವುದಕ್ಕೆ ನೀರಿಲ್ಲದೆ, ದನಗಳಿಗೆ ಮೇವೂ ಸಹ ಇಲ್ಲದಂತಾಗಿದೆ. ಕರ್ನಾಟಕ ರಾಜ್ಯದ ಬರಗಾಲವಿರುವ ಎಲ್ಲ ಜಿಲ್ಲೆಗಳಲ್ಲಿ ಎಷ್ಟು ಕಠಿಣ ಪರಿಸ್ಥಿತಿ ಇದೆ, ಅಷ್ಟೆಲ್ಲಾ ಕಠಿಣ ಪರಿಸ್ಥಿತಿಗಳು ಮೈಸೂರು ಜಿಲ್ಲೆ, ಅದರಲ್ಲೂ ನಂಜನಗೂಡು ಮತ್ತು ಟೀ. ನರಸೀಪುರ ತಾಲ್ಲೂಕುಗಳಲ್ಲಿ ಹೆಚ್ಚು ಇದೆ ಎಂದರೆ ತಪ್ಪಾಗಲಾರದು.

ಸರ್ಕಾರದವರು ದೊಡ್ಡ ಪ್ರಮಾಣದಿಂದ ಕೂಡಿರತಕ್ಕ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾದರೆ, ದೊಡ್ಡ ಪ್ರಮಾಣದ ಪ್ರಯತ್ನವೂ ಪ್ರಾರಂಭದಿಂದಲೂ ಅತ್ಯಾವಶ್ಯಕ ಎಂದು ಹೇಳಿದರೆ ಅದು ತಪ್ಪಾಗಲಾರದು. ಇವತ್ತು ನಮ್ಮ ಭಾಗದಲ್ಲಿ ಇಂಥ ಒಂದು ಪರಿಸ್ಥಿತಿ ಪ್ರಾರಂಭವಾಗಿದೆ ಎಂದು ನಾನು ಹೇಳುತ್ತೇನೆ. ನಮ್ಮ ಭಾಗದಲ್ಲಿ ನಮಗೆ ಬೆಳೆ ಬರಬೇಕಾದರೆ ಇನ್ನೂ ೮-೯ ತಿಂಗಳದರೆಗೆ ನಾವು ಕಾಯಬೇಕಾಗುತ್ತದೆ. ಈಗ ನಮಗೆ ಜೋಳ ಆಗದೇಹೋದರೆ ಮತ್ತೆ ನಾವು ಮುಂದೆ ರೇವತಿ ಮಳೆಯಾಗುವವರೆಗೆ ಕಾಯಬೇಕು. ಆಗಸ್ಟ್ - ಸೆಪ್ಟೆಂಬರ್ ತಿಂಗಳವರೆಗೆ ರೈತನು ಯಾವ ಬೆಳೆಯನ್ನು ನೋಡುವುದಕ್ಕಾಗುವುದಿಲ್ಲ. ಅಲ್ಲಿಯವರೆಗೆ ರೈತನ ಪರಿಸ್ಥಿತಿ ಏನಾಗುತ್ತದೆಂದು ತಾವೇ ಯೋಚನೆ ಮಾಡಬೇಕು. ನೂರಕ್ಕೆ ೮೦ ಭಾಗ ಜನ ಕೂಲಿಯಿಂದ ಅಥವಾ ಇತರೆ ಕಸುಬಿನಿಂದ ಜೀವನ ಮಾಡುವವರಾಗಿದ್ದಾರೆ. ಅವರಿಗೆ ಆಹಾರವನ್ನಾದರೂ ನಾವು ಎಲ್ಲಿಂದ ಕೊಂಡುಕೊಳ್ಳುವುದು ? ಹೇಗೆ ಅವರು ಜೀವನ ಮಾಡಬೇಕಾಗಿದೆ. ಕೂಲಿ ಸಿಕ್ಕಬೇಕಾದರೆ ವ್ಯವಸಾಯದ ಕೂಲಿ ಮಾಡಿಸುವವರು ಯಾರಿದ್ದಾರೆ ? ಈ ಒಂದು ಪರಿಸ್ಥಿತಿಯಲ್ಲಿ ರೈತರು ಸಣ್ಣ ಸಣ್ಣ ಕೆಲಸಗಳನ್ನು ಮಾಡಿಸೋಣ ಎಂದರೂ ಇವರಿಗೆ ಯಾವ ಕೆಲಸವೂ ಇಲ್ಲದಂತಾಗಿದೆ ಎನ್ನುವ ವಿಷಯವನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ನಮ್ಮ ಭಾಗದಲ್ಲಿ ಮಳೆಯಾದರೆ ವ್ಯವಸಾಯದ ಕೆಲಸ ಇರುತ್ತದೆ. ಮಾನ್ಯ ಸದಸ್ಯರುಗಳು ಅನೇಕರು ತಿಳಿಸಿದ ಹಾಗೆ, ನಮ್ಮ ಜಿಲ್ಲೆಯಲ್ಲಿಯೂ ಜನರಿಗೆ ಕೆಲಸ ಸಿಕ್ಕದೆ ಎಲ್ಲಿಗೋ ಹೋಗುತ್ತಿದ್ದಾರೆ. ಇವರನ್ನು ಕೆಲಸಕ್ಕೆ ಕರೆಯುವವರು ಯಾರಿದ್ದಾರೆ ? ಇಂಥ ಪರಿಸ್ಥಿತಿ ಇರುವಾಗ ಸರ್ಕಾರದವರು ಅತಿ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಬೇಕಾದರೆ

ಸರ್ಕಾರದವರು ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ. ಇಷ್ಟು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಯಶಸ್ಸು ಬರುತ್ತದೆಂದು ನಾನು ಹೇಳಬಯಸುತ್ತೇನೆ. ಇಂಥ ಪರಿಸ್ಥಿತಿಯಲ್ಲಿ ಕಷ್ಟದಲ್ಲಿರತಕ್ಕ ಜನರನ್ನು ಕಾಪಾಡತಕ್ಕದ್ದು ಸರ್ಕಾರದ ಕರ್ತವ್ಯ ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಸರ್ಕಾರದವರು ಬಹುಮುಖ್ಯವಾಗಿ ತಾತ್ಕಾಲಿಕ ಪರಿಹಾರ ಕ್ರಮಗಳನ್ನು ಹೆಚ್ಚಾಗಿ ಕೈಗೊಳ್ಳಬೇಕು ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

4-30 P. M.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಅನೇಕ ಊರುಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಸರ್ಕಾರದವರು ನಾವು ರಿಗ್‌ಗಳನ್ನು ಬಾವಿಗಳನ್ನು ತೆಗೆಯಲಿಕ್ಕೆ ಕಳುಹಿಸಿದ್ದೇವೆ ಎಂದು ಹೇಳಿದರೂ ಕೂಡ ಅನೇಕ ಹಳ್ಳಿಗಳಲ್ಲಿ ಈ ರಿಗ್‌ಗಳು ಸರಿಯಾಗಿ ಕೆಲಸ ಮಾಡದೆ ಬಾವಿಗಳು ಆಗಿಲ್ಲ. ಇದಕ್ಕಿಂತಲೂ ಮುಖ್ಯವಾಗಿ ಬಾವಿಗಳಲ್ಲಿ ನೀರಿನ ಪ್ರಮಾಣವೇ ಕಡಿಮೆಯಾಗಿದೆ. ಸರ್ಕಾರದವರು ತಾತ್ಕಾಲಿಕವಾದಂಥ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಲ್ಲದೆ ಲಾಂಗ್ ಟರ್ಮ್ ಪರಿಹಾರ ಕಾರ್ಯಗಳು ಏನು ಇವೆಯೋ ಅವುಗಳನ್ನು ತೆಗೆದುಕೊಳ್ಳಬೇಕು ಮೈಸೂರು ಜಿಲ್ಲೆಯಲ್ಲಿ ಕಬಿನಿ ಪ್ರಾಜೆಕ್ಟಿನ ಕೆನಾಲ್ ತೆಗೆಯುವ ಕೆಲಸ ಸರ್ಕಾರದಲ್ಲಿದೆ. ಇಂಥ ದೊಡ್ಡ ಕೆಲಸಕ್ಕೆ ಸರ್ಕಾರದವರು ಹಣವನ್ನು ಹಾಕಿ ಕೆಲಸವನ್ನು ತ್ವರಿತಗೊಳಿಸಿದರೆ, ಇದರಿಂದ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಸಿಕ್ಕಂತಾಗುತ್ತದೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧಿಕಾರಿಗಳು ಸಹ ಕೆಲಸವನ್ನು ತೆಗೆದುಗೊಳ್ಳುವಾಗ ಬಡ್ಜೆಟೆಡ್ ವರ್ಕ್ ಸ್ಕೀಂ ಮಂಜೂರು ಆಗಿಲ್ಲ ಎಂದು ಹೇಳುವುದು, ಹಣ ಇಲ್ಲ ಎಂದು ಹೇಳುವುದು ಮಾಡದೆ, ತಮ್ಮ ಅಧಿಕಾರಶಾಹಿತ್ವವನ್ನು ಬಿಟ್ಟು ಜನಗಳ ಸೇವೆ ಮಾಡಬೇಕು ಎನ್ನುವ ಒಂದು ಸರ್ವೀಸ್ ಆಟಿಟ್ಯೂಡ್ ಅನ್ನು ಇಟ್ಟುಕೊಳ್ಳಬೇಕು. ಜನಗಳು ಕಷ್ಟದಲ್ಲಿರುವಾಗ ಅಧಿಕಾರಿಗಳು ತಮ್ಮ ಟೆಕ್ನಿಕಲ್ ಅಸ್ಪೆಕ್ಟ್ಸ್ ಅನ್ನು ಮುಂದೊಡ್ಡದೆ ಜನರಿಗೆ ಅನುಕೂಲವಾಗುವಂಥ ಕೆಲಸಗಳನ್ನು ತಕ್ಷಣ ಪ್ರಾರಂಭಿಸಬೇಕು. ಸರ್ಕಾರದವರು ಎಷ್ಟೋ ಕೆಲಸಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದರೂ ಕೂಡ, ನಾವು ಪ್ರತಿಯೊಂದು ತಾಲ್ಲೂಕುಗಳಲ್ಲಿ ನೋಡಿದಾಗ ಎಷ್ಟೋ ಕೆಲಸಗಳನ್ನು ಅಧಿಕಾರಿಗಳು ಯಾವುದಾದರೂ ಒಂದು ಕಾರಣದಿಂದ ತೆಗೆದುಕೊಂಡಿರುವುದಿಲ್ಲ. ಯಾವ ಕಾರಣದಿಂದಲೂ ಸರ್ಕಾರಕ್ಕೆ ಚ್ಯುತಿ ಬರದಂತೆ ಅಧಿಕಾರಿಗಳು ಕೆಲಸ ಮಾಡಬೇಕು. ಮತ್ತು ಸರ್ಕಾರದವರು ಹಾಕಿಕೊಟ್ಟ ಕೆಲಸಕಾರ್ಯಗಳನ್ನು ಕಾರ್ಯಗತಮಾಡಬೇಕು. ಅಧಿಕಾರಿಗಳು ಜನಗಳ ಪರಿಸ್ಥಿತಿಯನ್ನು ಅರಿತುಕೊಂಡು ನಾಗಾಲೋಟದಲ್ಲಿ ಕೆಲಸ ಮಾಡಬೇಕು. ಈ ರೀತಿಯಾಗಿ ಅವರು ಕೆಲಸ ಮಾಡಿದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಮತ್ತು ಅಧಿಕಾರಿಗಳಿಗೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲದೆ ಹೋದರೆ ಜನತೆಯ ವಿಕೋಪಕ್ಕೆ ಅಧಿಕಾರಿಗಳೂ ಅಷ್ಟೆ ಅಲ್ಲದೆ ಸರ್ಕಾರದವರೂ ತುತ್ತಾಗಬೇಕಾಗುತ್ತದೆ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ತಾತ್ಕಾಲಿಕವಾದ ಹಾಗೂ ಶಾಶ್ವತವಾದ ಕಾರ್ಯಗಳನ್ನು ಪ್ರತಿಯೊಂದು ಕ್ಷೇತ್ರದಲ್ಲಿ ತೆಗೆದುಕೊಂಡು ನಡೆಸಬೇಕು. ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಗಳಿಸಿಕೊಡಬೇಕು ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI N. B. SIRDESAI (Khanapur).—Mr. Deputy Speaker Sir, on going through the memorandum regarding the scarcity conditions of Karnataka State. I am very much disappointed at the negligence and the carelessness of the Revenue authorities so far as Khanapura Taluka is concerned. I would like to bring to the kind notice of the Hon. Minister for Revenue that the Revenue authorities have not properly conducted the assessment of the affected areas, because through Khanapura Taluka Belgaum and some other Talukas of Karwar district have been affected. No mention is made in the Memorandum as if nothing has happened there or as if those taluks

have not been affected by drought conditions at all. If the Almighty had favoured there areas with bumper crops in those Talukas, there would be no scope for any grumbling or complaint as has been done now in respect of these talukas.

Sir, we had rains no doubt. But we had untimely rains and at the proper time there was complete failure of rains, on account of which the crops have been affected. That has not been taken into consideration by the Revenue authorities.

As regards water position in the existing tanks I would like to bring to the kind notice of the Hon'ble Minister that almost all the tanks in Khanapura Taluka have been silted up. We have been moving the Government very often to desilt all these tanks. But desilting has not yet been taken and with the result there is no storage of water in the existing tanks

While making the statement the Minister for Revenue said that for irrigation purpose power supply wi l be made available very readily. I would like to bring to the kind notice of the Hon. Minister that power supply is not at all made available to the I P. sets which have been installed under the lift irrigation schemes in Khanapur Taluka and power supply is delayed inordinately. Unl ss power supply is made available irrigation would not be possible. Then Sir, Government was kind enough to sanction some amount for giving relief to the Agriculturists. I believe that in Belgaum Division Rs. 5 lakhs were sanctioned, but I regret to say that amount has not been paid to the sufferers for the reason that the existing Government order is bit defective. It say that unless the sufferer is reduced to the state of complete destitution relief cannot be granted. But I would like to s ate here that such rigid condition should not be imposed on the present sufferers.

SRI N, HUTCHAMASTHY GOWDA.—I want to know whether that Government Order applies to scarcity areas also?

SRI N. B. SIRDESAI —My area has been affected and our people have submitted representations to the Hon'ble Revenue Minister and also to the Government.

SRI N HUTCHAMASTHY GOWDA.—It applies to the situations where there are fire accidents or flood affected areas and not to those areas affected by scarcity conditions.

SRI N. B. SIRDESAI.—Alright. Then as regards minor irrigation works in Khanapur Taluka, I would like to say that my taluka is completely neglected. Not only my taluka, Belgaum Taluka and other Taluks in Karwar District has have been completely neglected. Though we have been pressing the Government to take up the minor

irrigation works, I regret to state that the Government has not cared to take sufficient minor irrigation works and thereby irrigation facilities have been denied to the people of our taluka It would be very kind of the Government if they consider taking up of some major Irrigation projects in Khanapur Taluka. The Hon. Minister is aware that the plans and estimates have been prepared for a major irrigation project in the Malaprabha region at Asoga. If that is done, it will irrigate thousands of acres of land in Khanapur, Bailahongal and Dharwar Talukas.

Now, Sir, I would like to request the Government that under the existing circumstances, to again conduct proper assessment of the affected areas and see that some relief is given to the affected people of our talukas I request the Government to atleast exempt them from the payment of levy completely this year. Our agriculturists have willingly and voluntarily paid the levy uptill now even without grumbling but if now under the impression that we have got bumper crop, levy is imposed and is recovered by coercive measures, it would result in causing injustice to our poor people That is why I appeal to the Hon'ble Minister that payment of levy should be exempted and also water rate should not be recovered from the poor farmers.

With these words, I thank the Chair for having given me an opportunity to speak and conclude my speech.

† ಶ್ರೀ ಎಂ ಮಲ್ಲಪ್ಪ (ಬೀರೂರು).— ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಈ ಸದನದಲ್ಲಿ ಕರ್ನಾಟಕ ರಾಜ್ಯದಲ್ಲಿ ತಲೆ ದೋರಿರುವ ಕ್ಷಾಮ ಪರಿಸ್ಥಿತಿ ಬಗ್ಗೆ ಮಂಡಿಸಿರುವ ಮಸೂದೆಯನ್ನು ಹಾಗೂ ಕೇಂದ್ರ ಸರ್ಕಾರದವರು ಕೊಟ್ಟಿರುವ ಅಂಕಿಅಂಶದ ವರದಿಗಳನ್ನೂ ಸ್ವಾಗತ ಮಾಡಿ ಇದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಆಗಾಗ್ಗೆ ಈ ಕ್ಷಾಮದ ಪರಿಸ್ಥಿತಿ ತಲೆದೋರಲಿದೆ ಈಗ ಇದು ನಮ್ಮ ರಾಜ್ಯದಲ್ಲಿ ೧೫ ಜಿಲ್ಲೆಗಳಲ್ಲಿ, ಹಾಗೂ ೧೦೮ ತಾಲ್ಲೂಕುಗಳಲ್ಲಿ ಈ ಅಭಾವಕ್ಕೆ ಜನಗಳು ಒಳಗಾಗಿದ್ದಾರೆ. ನಮ್ಮ ಚಿಕ್ಕಮಗಳೂರು ಪರಿಸ್ಥಿತಿ ಬಗ್ಗೆಯೂ ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕಡೂರು, ತರೀಕೆರೆ ಹಾಗೂ ಚಿಕ್ಕಮಗಳೂರಿನ ಕೆಲವು ತಾಲ್ಲೂಕುಗಳಲ್ಲಿ ಅಲ್ಲಿಯ ಜನರು ಈ ಅಭಾವ ಪರಿಸ್ಥಿತಿಗೆ ಈಡಾಗಿದ್ದಾರೆ. ಅಲ್ಲಿ ಪರಿಸ್ಥಿತಿ ನಿಜವಾಗಿಯೂ ಬಹಳ ಭೀಕರವಾದುದು. ಇಲ್ಲಿಯವರೆಗೂ ಅವರು ಬೀಜ ಬಿತ್ತಿಲ್ಲ, ಮಳೆ ಬಂದಿಲ್ಲ ಹಾಗೂ ರೈತನಿಗೆ ಯಾವ ವಿಧವಾದಂಥಾ ಪ್ರಯೋಜನವೂ ಆಗಿಲ್ಲ. ಇದರ ಜೊತೆಗೆ ಈ ಕ್ಷಾಮ ಪರಿಹಾರಕ್ಕೆ ಸಿಕ್ಕಿರತಕ್ಕಂಥಾ ಮಲೆನಾಡಿನ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಅಲ್ಲೂ ಕೂಡ ಹೀಗೆಯೇ ಆಗಿದೆ. ಆದರೆ ಅಲ್ಲಿ ತಗ್ಗು ಗಾಡಿನಲ್ಲಿ ಸ್ವಲ್ಪಮಟ್ಟಿಗೆ ಮಳೆ ಬಂದರೂ ಕೂಡ ಅದಕ್ಕೆ ತಗ್ಗಿನ ಗದ್ದೆ ಎಂದು ಹೇಳುತ್ತೇನೆ, ಅಲ್ಲೂ ಕೂಡ ಸರಿಯಾಗಿ ಪೈರು ಕೈಸೇರುವಂತೆ ಇಲ್ಲ. ಈಪ್ರೊತ್ತು ಈ ಪರಿಸ್ಥಿತಿಯಲ್ಲಿ ರೈತ ತಾನು ಹೊಟ್ಟೆಪಾಡಿನ ಬವಣೆಗೆ ಸಿಕ್ಕಿರುವುದಲ್ಲದೆ ಜಾನುವಾರುಗಳಿಗೂ ಕೂಡ ಈ ಪರಿಸ್ಥಿತಿ ತಲೆದೋರಿದೆ. ನಮ್ಮ ಅಕ್ಕಪಕ್ಕದ ತಾಲ್ಲೂಕುಗಳಲ್ಲೂ ಕೂಡ ಹಾಗೂ ಹಾಸನ ಜಿಲ್ಲೆಯಲ್ಲಿ ಜನ ಜಾನುವಾರುಗಳನ್ನು ವಲಸೆಗೆ ಬಿಟ್ಟುಬಿಟ್ಟಿದ್ದಾರೆ. ಕೆಮ್ಮಣ್ಣುಗುಂಡಿ ಮತ್ತು ಲಕ್ಕವಳ್ಳಿ ಪ್ರದೇಶಗಳಿಗೆ ಲಕ್ಷಾಂತರ ಜನಜಾನುವಾರುಗಳನ್ನು ಬೀಡು ಬಿಟ್ಟುಬಿಟ್ಟಿದ್ದಾರೆ. ಅಲ್ಲಿಗೆ ಯಾರಾದರೂ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಹೆಚ್ಚಿನ ಒಂದು ಕೆಲಸಗಳನ್ನು ಕೈಗೊಳ್ಳಬೇಕಾದುದು ಅಗತ್ಯ.

ಇನ್ನು ಆಹಾರ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಯಥೇಚ್ಛವಾಗಿ ಆಹಾರಧಾನ್ಯ ಇದೆ. ಅಕ್ಕಿ ರಾಗಿ ಮತ್ತು ಜೋಳ ಯಥೇಚ್ಛವಾಗಿದ್ದರೂ ಕೂಡ ಇದು ಪರದೇಶದಿಂದ ಸಿಕ್ಕಿರುವುದು ಅತಿಶಯೋಕ್ತಿ ಏನೂ ಅಲ್ಲ. ರೈತನಿಗೆ, ಕೃಷಿ ಕಾರ್ಮಿಕನಿಗೆ ಯಥೇಚ್ಛವಾಗಿ ಬೆಳೆಯುವಂತೆ ಆಗಬೇಕು. ಯಾವ ಕೃಷಿ ಕಾರ್ಮಿಕನಿಗೆ ಈವೊತ್ತಿನ ದಿವಸ ಯಾವ ಉದ್ಯೋಗವೂ ಇಲ್ಲದೆ ಅವನ ಜೀವನ ನಡೆಯದೇ ಕಷ್ಟವಾಗಿರುವಾಗ ಅವರಿಗೆ ಈ ಉದ್ಯೋಗವನ್ನು ಒದಗಿಸತಕ್ಕಂಥಾದ್ದು ಸರ್ಕಾರದ ಆದ್ಯಕರ್ತವ್ಯ ಅವರು ಕೊಟ್ಟಿರುವ ಪಟ್ಟಿ ಪ್ರಕಾರ ಈವೊತ್ತು ಸರ್ಕಾರದವರು ಈ ಕೃಷಿ ಕಾರ್ಮಿಕರಿಗೆ ಏನು ಕೆಲಸಗಳನ್ನು ಒದಗಿಸಿದ್ದಾರೋ ಅದು ಅತ್ಯಲ್ಪ ; ಎಂದು ಹೇಳಬಹುದು. ಶೇಕಡ ೫೩ ಭಾಗದ ಜನರು ತೊಂದರೆಗೆ ಒಳಗಾಗಿದ್ದಾರೆ. ಮಲೆನಾಡಿನ ಭಾಗದಲ್ಲಿ ಹೇಳುವುದಾದರೆ ಕಾಫೀ ತೋಟದಲ್ಲಿ ಇರುವ ಕಾರ್ಮಿಕರನ್ನು ಬಿಟ್ಟರೆ ಉಳಿದವರೆಲ್ಲರ ಪರಿಸ್ಥಿತಿ ಚಿಂತಾಜನಕವಾಗಿದೆ. ಆದುದರಿಂದ ಕಂದಾಯ ಮಂತ್ರಿಗಳು ಅವರುಗಳಿಗೆ ಹೆಚ್ಚು ಹೆಚ್ಚು ಹಣ ಒದಗಿಸಬೇಕು. ಅವರು ನಮ್ಮ ಜಿಲ್ಲೆಗೆ ಭೇಟಿ ಮಾಡಿದ ಕಾಲದಲ್ಲಿ ಯಾರು ಉದ್ಯೋಗವನ್ನು ಬಯಸಿ ಬರುತ್ತಾರೋ ಅವರಿಗೆ ಉದ್ಯೋಗವನ್ನು ಕೊಡುತ್ತೇವೆ ಅದಕ್ಕೆ ಹಣದ ಕೊರತೆ ಏನೂ ಇಲ್ಲ ಎಂದು ಹೇಳಿದ್ದಾರೆ. ಅದೇ ರೀತಿ ನಮ್ಮ ಅರ್ಥ ಸಚಿವರೂ ಕೂಡ ಹೇಳಿದ್ದಾರೆ ಯಾವ ಜಿಲ್ಲಾಧಿಕಾರಿಗಳು ಈವೊತ್ತು ಇದಕ್ಕೆ ಹಣದ ಕೊರತೆ ಇದೆ ಇದು ಆಗುವುದಿಲ್ಲ ಎಂದು ಹೇಳುತ್ತಾರೋ ಅದನ್ನು ತಿಳಿಸಿದರೆ ಅವರ ಮೇಲೆ ಉಗ್ರವಾದ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು. ಆದರೆ ನಮ್ಮ ಜಿಲ್ಲೆ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಕಳೆದ ಒಂದು ವಾರದಲ್ಲಿ ಅಲ್ಪಸ್ವಲ್ಪ ಮಳೆ ಏನೋ ಆಗಿದೆ. ಆದರೆ ನಮ್ಮ ಜಿಲ್ಲೆಯಲ್ಲಿ ಕ್ತ ಕಾಲದಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಎಂದು ಹೇಳುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಬಂದಾಗ ಹೇಳಿದರು ರೈತರ ಕಷ್ಟ ಗೊತ್ತಿದೆ ಅದರಲ್ಲೂ ದನಕರುಗಳಿಗೆ ಹುಲ್ಲು ಒದಗಿಸುವುದಕ್ಕೆ ಹೇಳುತ್ತೇನೆ ಅಂತ ಹೇಳಿದರು. ಆದರೆ ಇದುವರೆಗೆ ಈ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಸರ್ಕಾರ ಇದರಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿದೆ ಆದರೆ ಅವರು ಏನು ಒಂದು ತೀರ್ಮಾನ ಕೈಗೊಂಡು ಇಡೀ ಜಿಲ್ಲೆಯಲ್ಲಿ ಅದರಲ್ಲೂ ಅಭಾವ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಹೇಳಿದ್ದರೋ ಆ ಕಾರ್ಯ ಅಷ್ಟಾಗಿ ತ್ವರಿತವಾಗಿ ಆಗಿಲ್ಲ. ೧೦೩ ವೆಲ್‌ಗಳನ್ನು ರಿಗ್‌ನಿಂದ ತೆಗೆಯಬೇಕಾದರೆ ಎಷ್ಟರ ಮಟ್ಟಿಗೆ ತೀವ್ರಗತಿಯಿಂದ ಕೆಲಸ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಆಗಿಲ್ಲ. ಆದುದರಿಂದ ಈ ಕೆಲಸವನ್ನು ತೀವ್ರಗತಿಯಲ್ಲಿ ಮಾಡಿಸಬೇಕು ಎಂದು ಹೇಳುತ್ತೇನೆ. ಅದರಲ್ಲೂ ಕೂಡ ಕೆಲವು ಕಡೆ ರಿಗ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಹ್ಯಾಂಡಲ್ ಮುರಿದು ಹೋಗಿಬಿಟ್ಟಿದೆ. ಅವರು ತಮ್ಮ ಭೇಟಿಯಲ್ಲಿ ಹೇಳಿದರು ನಮ್ಮಲ್ಲಿ ಎಕ್ಸ್‌ಪರ್ಟ್ ಫೋರ್ಮನ್‌ಗಳನ್ನು ಇಟ್ಟಿದ್ದೇವೆ ಈ ಕೆಲಸವನ್ನು ತೀವ್ರಗತಿಯಲ್ಲಿ ಮಾಡಿಸುತ್ತೇವೆ ಅಂತ ಹೇಳಿದರು ಈ ಅಧಿವೇಶನ ನಡೆಯುವುದಕ್ಕೆ ಒಂದು ವಾರ ಮುಂಚೆ ನಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡಿದಂಥಾ ಕಾಲದಲ್ಲಿ ರಿಗ್ ಬೋರ್‌ವೆಲ್ಸ್‌ಗಳನ್ನು ಹಾಕಿದ್ದೇವೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದರು ಆದರೆ ಅದು ಅಷ್ಟು ಉತ್ತಮವಾಗಿ ಕೆಲಸ ನಡೆಯುತ್ತಾ ಇಲ್ಲ ಈ ಕೆಲಸ ತೀವ್ರಗತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕಾದುದು ಅತ್ಯಗತ್ಯ ಎಂದು ಹೇಳುತ್ತೇನೆ,

ಇನ್ನು ಕೃಷಿಕರಿಗೆ ಕೆಲಸ ಒದಗಿಸುವುದಕ್ಕೋಸ್ಕರ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕು ಎಂದು ಹೇಳುತ್ತೇನೆ. ಮತ್ತು ಈವೊತ್ತು ಟ್ರಾಕ್ಟರುಗಳನ್ನು ಕೊಂಡು ಅವರು ಏನು ಕೆಲಸ ಮಾಡುತ್ತಿದ್ದರು ಈವೊತ್ತು ಅವರಿಗೆ ಯಾವ ಕೆಲಸವೂ ಇಲ್ಲದೆ ಬಹಳ ಕಷ್ಟವಾಗಿದೆ. ಅವರು ಈ ಬಗ್ಗೆ ತಮ್ಮ ಇನ್‌ಸ್ಟಾಲ್ ಮೆಂಟ್ಸ್ ಕಟ್ಟುವುದಕ್ಕೆ ಕಷ್ಟವಾಗಿದೆ ಆದುದರಿಂದ ನಾನು ಹೇಳುವುದು ಅವರಿಗೆ ಸ್ವಲ್ಪ ರಿಯಾಯಿತಿ ಕೊಟ್ಟು ಅವರು ಕಟ್ಟತಕ್ಕಂಥಾ ಹಣವನ್ನು ಒಂದು ವರ್ಷ ಮುಂದೂಡಬೇಕು ಅಥವಾ ಅವರು ೭ ವರ್ಷದಲ್ಲಿ ಇದರ ಇನ್‌ಸ್ಟಾಲ್‌ಮೆಂಟ್ಸ್ ಕಟ್ಟಬೇಕಾಗಿದ್ದರೆ ಅದನ್ನು ೮ ವರ್ಷದಲ್ಲಿ ಕಟ್ಟುವಂತೆ ಸ್ವಲ್ಪ ಮಾರ್ಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಅಲ್ಪಾವಧಿ ಮತ್ತು ಧೀರ್ಘಾವಧಿ ಸಾಲದ ಬಗ್ಗೆ ಹೇಳುವುದಾದರೆ ಈ ಬಗ್ಗೆ ಇನ್ನೂ ಏನು ಒಂದೂ ತೀರ್ಮಾನವನ್ನೂ ಕೈಗೊಂಡಿಲ್ಲ. ಅಲ್ಲಿ ಮಳೆ ಇಲ್ಲದೆ ಭೂಮಿಗೆ ಬೀಜವನ್ನೂ ಕೂಡ ಬಿತ್ತಿಲ್ಲ. ಈ ಬಗ್ಗೆ ತೀರ್ಮಾನ ಏತಕ್ಕೆ ಆಗಿಲ್ಲ ಎಂದರೆ ಇನ್ನೂ ಅಣೆವಾರಿ ಬಂದಿಲ್ಲ, ಆದರಿಂದ ಇನ್ನೂ ತೀರ್ಮಾನ ಕೈಗೊಂಡಿಲ್ಲ ಎಂದು ಹೇಳಿದ್ದಾರೆ. ಈ ಅಣೆವಾರಿ ಬರುವುದಕ್ಕೆ ತಿಂಗಳು ಗಟ್ಟಲೆ ವರ್ಷಗಟ್ಟಲೆ ಆಗುತ್ತದೆಯೋ ? ಈವೊತ್ತು ಅದರ ಬಗ್ಗೆ ಬೇಗ ತೀರ್ಮಾನ ಮಾಡಬೇಕು. ಈವೊತ್ತು ಎಲ್ಲೆಲ್ಲೂ

ಮಳೆಯೇ ಬರದೇ ಬೆಳೆಯೇ ಇಲ್ಲದೇ ಇರುವಾಗ ಆಣೆವಾರಿ ಎಲ್ಲಿ ಬರುತ್ತದೆ. ಈವೊತ್ತು ಎಲ್ಲಿಲ್ಲಿ ಪೈರು ಹೋಗಿದೆ, ಮಳೆ ಇಲ್ಲ, ಬೆಳೆ ಇಲ್ಲ, ಎಲ್ಲಿ ಯಾವ ರೈತ ಈ ಅಭಾವ ಪರಿಸ್ಥಿತಿಗೆ ಈಡಾಗಿದ್ದಾನೆ ಅಲ್ಲಿ ಈ ಅಲ್ಪಾವಧಿ ಮತ್ತು ಧೀರ್ಘಾವಧಿ ಸಾಲವನ್ನು ಮುಂದೂಡಬೇಕು, ಅವನಿಗೆ ತಕ್ಕ ಪರಿಹಾರವನ್ನು ನೀಡಬೇಕು ಎಂದು ಹೇಳುತ್ತೇನೆ.

ಇವೊತ್ತು ನಮ್ಮ ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಾಗಿ, ಭತ್ತ, ಜೋಳ ಜನರ ಹತ್ತಿರ ಇಲ್ಲದಿರುವ ಕಾರಣ, ಸರ್ಕಾರದವರು ಡಿಪೋಗಳ ಮೂಲಕ ಒದಗಿಸತಕ್ಕಂಥ ಕಡೆಗಳಲ್ಲಿ ಕೊಂಡು ಜನರಿಗೆ ಒದಗಿಸಬೇಕಾಗಿದೆ. ಈಗ ಸರ್ಕಾರದ ಹತ್ತಿರ ದಾಸ್ತಾನು ಚೆನ್ನಾಗಿ ಇದೆ. ಅದರ ಜೊತೆಗೆ ಜನರಿಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಒದಗಿಸಬೇಕು ಮತ್ತು ಅದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

೧೯೭೨ರಲ್ಲಿ ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾದಾಗ, ಶಾಸಕರ ವಿಶ್ವಾಸವನ್ನು ಸರ್ಕಾರ ತೆಗೆದುಕೊಂಡು, ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ಕಮಿಟಿಯನ್ನು ರಚನೆ ಮಾಡಿತು. ಆ ಕಮಿಟಿ ಯವರು ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಕೈಕೊಳ್ಳುತ್ತಿದ್ದರೋ ಅದರಂತೆ ಸರ್ಕಾರದವರು ಕೆಲಸ ಮಾಡಿಸುತ್ತಿದ್ದರು. ಆದರೆ ಇಂದು ಬಿ.ಡಿ.ಒ. ಅವರು ತಹಶೀಲ್‌ದಾರರು, ಅಸಿಸ್ಟೆಂಟ್ ಕಮೀಷನರ್ ಅವರು ಯಾವ ಕೆಲಸಗಳನ್ನು ಕೈಕೊಳ್ಳಬೇಕೆಂದು ಶಿಫಾರಸ್ ಮಾಡುತ್ತಾರೋ ಅಂತಹ ಕೆಲಸಗಳನ್ನು ಮಾತ್ರ ಕೈಕೊಳ್ಳುತ್ತಿದ್ದಾರೆ. ನಾವೇನಾದರು ಪಟ್ಟಿ ಕೊಟ್ಟರೆ ಅದಕ್ಕೆ ಗಮನ ಕೊಡುತ್ತಿಲ್ಲ. ಆದಕಾರಣ ಈ ಕಾಮಗಾರಿ ಕೆಲಸಗಳು ರಚನಾತ್ಮಕವಾಗಿ ಮತ್ತು ಸುವ್ಯವಸ್ಥಿತವಾಗಿ ನಡೆಯಬೇಕಾಗಿದ್ದರೆ, ಈ ಹಿಂದೆ ರಚನೆ ಮಾಡಿದಂತಹ ರೀತಿಯಲ್ಲಿ ಕಮಿಟಿಗಳನ್ನು ರಚನೆ ಮಾಡಿ, ಆ ಮೂಲಕ ಕೆಲಸಗಳನ್ನು ಮಾಡಿಸಿದರೆ, ಕೆಲಸ ಸಮರ್ಪಕವಾಗಿ ಆಗುತ್ತದೆಂದು ಹೇಳುತ್ತೇನೆ. ಈಗಿನ ಒಂದು ಪರಿಸ್ಥಿತಿಯನ್ನು ಸರ್ಕಾರ ಚೆನ್ನಾಗಿ ಅರಿತುಕೊಂಡಿದೆ. ಮತ್ತು ಕೇಂದ್ರದಿಂದ ಹಣದ ನೆರವನ್ನು ಪಡೆಯುವುದಕ್ಕಾಗಿ ಮಾಡಿರುವಂತಹ ಪ್ರಯತ್ನ ತುಂಬಾ ಶ್ಲಾಘನೀಯವಾದುದೆಂದು ಹೇಳುತ್ತೇನೆ. ಮಲೆನಾಡು ಪ್ರದೇಶಗಳಲ್ಲಿ ಮತ್ತು ಬಯಲುಸೀಮೆಗಳಲ್ಲಿ ಕೆಲಸಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಕೊಂಡು ಜನರಿಗೆ ಉದ್ಯೋಗ ಒದಗಿಸಬೇಕು. ಮುಖ್ಯವಾಗಿ ಜನತೆಗೆ ಶಾಶ್ವತ ಪರಿಹಾರ ದೊರಕ ಬೇಕಾದರೆ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕು. ಅಪ್ಪರ್ ಭದ್ರಾ ಯೋಜನೆಯ ಬಗ್ಗೆ ಸರ್ವೆ ನಡೆದಿದೆ. ಆದರೆ ಆ ಕೆಲಸ ಪೂರ್ಣವಾಗದೆ ಅರ್ಧಕ್ಕೇ ನಿಂತಿದೆ. ಸೋಮವಾಹಿನಿ ಯೋಜನೆಯ ಕೆಲಸ ವನ್ನು ಜಾಗ್ರತೆ ಪ್ರಾರಂಭ ಮಾಡಬೇಕೆಂದು ಚಿತ್ರದುರ್ಗ ಮತ್ತು ಚಿಕ್ಕಮಂಗಳೂರು ಜಿಲ್ಲೆಯವರು ಹೇಳು ತ್ತಿದ್ದಾರೆ. ಆದರಂತೆ ಇಂತಹ ಯೋಜನೆಗಳ ಕೆಲಸವನ್ನು ಕೈಕೊಂಡು ಶಾಶ್ವತವಾದಂಥ ಪರಿಹಾರವನ್ನು ಒದಗಿಸುವುದಾದರೆ ನಿಜಕ್ಕೂ ನಾವು ಕ್ಷಾಮ ಬರದಂತೆ ಸವಾಲು ಹಾಕುವುದಕ್ಕೆ ಸಮರ್ಥರಾಗುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).— ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ವಿಚಾರವಾಗಿ ಕೆಲವು ವಿಚಾರಗಳನ್ನು ತಿಳಿಸುತ್ತೇನೆ. ನಮ್ಮ ಬಂಗಾರಪೇಟೆಯ ಬಗ್ಗೆ ಹೇಳಬೇಕೆಂದರೆ, ನಮ್ಮ ತಾಲ್ಲೂಕ್‌ನಲ್ಲಿ ಬಿತ್ತನೆಯಾಗುವವರೆಗೆ ಅಲ್ಪಸ್ವಲ್ಪ ಮಳೆ ಯಾಯಿತು. ಖುಷ್ಕಿ ಬೆಳೆಗಳಾದ ರಾಗಿ ಜೋಳ, ಕಡಲೆ, ಸಜ್ಜೆ ಮುಂತಾದವನ್ನು ಬಿತ್ತಿದ ಮೇಲೆ ಸರಿ ಯಾಗಿ ಮಳೆಯಾಗದೆ ಎಲ್ಲವೂ ಒಣಗಿ ಹೋಗಿರುತ್ತದೆ. ಈ ವಿಚಾರದ ಬಗ್ಗೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಕಾಗದದ ಮೂಲಕ ತಿಳಿಸಿರುತ್ತೇನೆ ಡಿವಿಜನಲ್ ಕಮೀಷನರ್ ಅವರು, ಡೆಪ್ಯೂಟಿ ಕಮೀಷನರ್ ಅವರೂ ಒಟ್ಟಾಗಿ ಸೇರಿಕೊಂಡು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ ಇರತಕ್ಕಂಥ ಪರಿಸ್ಥಿತಿ ಯನ್ನೆಲ್ಲಾ ಅವರು ಅರಿತುಕೊಂಡರು. ಕೆಲವು ಹಳ್ಳಿಗಳಲ್ಲಿ ಜನರಿಗೆ ಮತ್ತು ದನಕರುಗಳಿಗೆ ಕುಡಿಯುವ ನೀರಿಗೂ ಅಭಾವವಿರುವುದನ್ನು ಅವರು ಅರಿತುಕೊಂಡು ಹೋದರು. ಈಗ ಅಲ್ಲಿ ಜನರಿಗೆ ಮಾಡಲು ಕೆಲಸ ಇಲ್ಲವಾಗಿದೆ ಕೆಲಸ ಮಾಡಿಸಲು ಸರ್ಕಾರದವರು ಹೆಚ್ಚು ಹಣ ಒದಗಿಸಿಲ್ಲ. ಡಿ.ಪಿ.ಎ.ಪಿ. ಪ್ರೋಗ್ರಾಮ್‌ನಲ್ಲಿ ಅಲ್ಪಸ್ವಲ್ಪ ಕೆಲಸ ನಡೆದಿದೆ ರಿಲೀಫ್ ಕಾಮಗಾರಿ ಕೆಲಸಕ್ಕೆ ಕಡಿಮೆ ಹಣ ಒದಗಿಸಿದ್ದಾರೆ. ಅದನ್ನು ಜಾಸ್ತಿ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮುಖ್ಯವಾಗಿ ಜನಸಂಖ್ಯೆಗೆ ತಕ್ಕಂತೆ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲವಿರುವ ಪ್ರದೇಶಗಳಲ್ಲಿ ರೈತರಿಂದ ಕಂದಾಯ, ನೀರಿನ ಕಂದಾಯ, ಬೆಟರ್‌ಮೆಂಟ್ ಲೆವಿ ಮತ್ತು ಸಾಲದ ಹಣವನ್ನು ವಸೂಲಿ ಮಾಡದೆ ಮುಂದಕ್ಕೆ ಹಾಕಬೇಕು. ಮತ್ತು ಸಾಲದ ಮೇಲೆ ಪೀನಲ್ ಇಂಟರೆಸ್ಟ್ ಹಾಕುವುದನ್ನು ವಜಾ ಮಾಡಬೇಕು ಕೆಲವು ಬಾವಿಗಳಲ್ಲಿ ನೀರೇ ಇಲ್ಲದೆ ಪಂಪ್‌ಸೆಟ್ಟು ಗಳು ಕೆಲಸ ಮಾಡುತ್ತಿಲ್ಲ. ಆದರೂ ಸಹ ರೈತರಿಂದ ಮಿನಿಮಮ್ ಚಾರ್ಜನ್ನು ವಸೂಲಿ ಮಾಡು ತ್ತಿದ್ದಾರೆ. ಇದನ್ನು ತಪ್ಪಿಸಿ ಅವರು ಎಷ್ಟು ಕರಂಟ್‌ನ್ನು ಉಪಯೋಗ ಮಾಡಿರುತ್ತಾರೆ ಅಷ್ಟನ್ನು ಮಾತ್ರ ವಸೂಲಿ ಮಾಡುವಂತೆ ಆರ್ಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಪಂಪ್‌ಸೆಟ್ಟು ಇರುವ ವರು ಕ್ಯಾಪಾಸಿಟರ್ ಹಾಕಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅದನ್ನು ಹಾಕಿಸದವರಿಗೆ ದಂಡ ಹಾಕುತ್ತಾರೆ ಈ ಪೆನಾಲ್ಟಿಯನ್ನು ವಜಾ ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಜನರಿಗೆ ಆಹಾರಧಾನ್ಯವನ್ನು ಮತ್ತು ದನಕರುಗಳಿಗೆ ಮೇವನ್ನು ಒದಗಿಸಲು ತಕ್ಕ ಏರ್ಪಾಡು ಮಾಡಬೇಕು ಜನರಿಗೆ ಬೇಕಾದ ಆಹಾರಪದಾರ್ಥಗಳನ್ನು ಬೇರೆ ಕಡೆಗಳಿಂದ ಬೇಕಾದರೆ ತರಿಸಿಕೊಳ್ಳಬಹುದು ; ಆದರೆ ನೀರನ್ನು ಬೇರೆ ಕಡೆಗಳಿಂದ ತರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ ಕಾರಣ ಕುಡಿಯುವ ನೀರಿನ ತೊಂದರೆ ಇಲ್ಲದಂತೆ ಕೊಳವೆ ಬಾವಿಗಳನ್ನು ತೆಗೆಸಬೇಕೆಂದು ಮತ್ತು ಕುಂಟೆಗಳನ್ನು ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನು ಎಲ್ಲೆಲ್ಲಿ ಕೆರೆಗಳು ಒಣಗಿಹೋಗಿವೆಯೋ ಅಂತಹ ಕಡೆಗಳಲ್ಲಿ ರೈತರು ಕಡಲೆ, ಮುಸುಕಿನ ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆಯಲು ಅವಕಾಶ ಮಾಡಿ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.— ಈಗ ಕೆರೆಗಳಿಗೆ ನೀರು ಬರುತ್ತಿದೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.— ನೀರು ಬಾರದೆ, ಒಣಗಿಹೋಗಿರುವ ಜಾಗಗಳಲ್ಲಿ ಈ ಬೆಳೆ ಗಳನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಮುಖ್ಯ ವಾಗಿ ಕೋಲಾರ ಜಿಲ್ಲೆ ಯಾವಾಗಲೂ ಬರಗಾಲ ಪೀಡಿತ ಪ್ರದೇಶವಾಗಿಯೇ ಉಳಿದಿರುವುದರಿಂದ ಅದನ್ನು ಕ್ಷಾಮ ಪೀಡಿತ ಪ್ರದೇಶವೆಂದು ಸಾರಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. (ಪಾಟೀಲ್ ಸಿಂದಗಿ).—ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒಂದು ವಿಷಯವನ್ನು ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ, ಏನೆಂದರೆ, ನಮ್ಮ ಭಾಗದಲ್ಲಿ ಯಾವಾಗಲೂ ದುಷ್ಕಾಳ ಪರಿಸ್ಥಿತಿ ಉಂಟಾಗುತ್ತಿತ್ತು, ಆದರೆ ಇಂದು ಅದು ರಾಜ್ಯಕ್ಕೇ ಆವರಿಸಿ, ನಿಸರ್ಗದ ಕಲ್ಪನೆ ಯಾವ ರೀತಿ ಇರುತ್ತದೆಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿ ಕೊಟ್ಟಿದೆ. ಆದಕಾರಣ ನಮ್ಮ ಸಮಸ್ಯೆ ಏನೆಂಬುದು ಎಲ್ಲರಿಗೂ ಚೆನ್ನಾಗಿ ಚೆನ್ನಾಗಿ ಅರ್ಥವಾಗಿದೆ. ಈ ದೇಶದಲ್ಲಿ ನಮ್ಮಂತಹ ದುರ್ದೈವಿಗಳು ಯಾರೂ ಇಲ್ಲವೆಂದು ಹೇಳಬಹುದು. ಮಾನ್ಯ ಮುಖ್ಯಮಂತ್ರಿ ಗಳಿಗೆ ಬಡವರನ್ನು ಕಂಡರೆ ಕನಿಕರವಿದೆ. ಆದರೆ ಅವರ ಕಷ್ಟವನ್ನು ತಿಳಿದುಕೊಳ್ಳುವುದಕ್ಕೆ ಬಿಡುವು ಇಲ್ಲ ವಾಗಿದೆ. ನಿಮ್ಮಿಂದಲೇ ನಮ್ಮ ಕಲ್ಯಾಣವಾಗಬೇಕಾಗಿದೆ. ಆದರೆ ಆ ಕೆಲಸ ಇನ್ನೂ ಆಗಿಲ್ಲ. ಜನರ ಕಷ್ಟವೇನೆಂಬುದನ್ನು ತಿಳಿದುಕೊಳ್ಳುವಂತಹ ಸೌಜನ್ಯ ನಿಮಗೆ ಇಲ್ಲವಾಗಿದೆ. ಈಗತಾನೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಕೊಡಿ ಎಂದು ಹೇಳಿದರು. ಹಿಂದೆ ತಾ: ೩೧ನೇ ಆಗಸ್ಟ್ ೧೮೭೪ರಲ್ಲಿ ನಮ್ಮ ಭಾಗದಲ್ಲಿ ಬರಗಾಲ ಬಂದಾಗ ಬ್ರಿಟಿಷ್ ಸರ್ಕಾರದವರು ಹಣ ಖರ್ಚು ಮಾಡಿದಂತೆ ನೀವು ಹಣ ಖರ್ಚು ಮಾಡಬೇಡಿ, ಶಾಶ್ವತವಾದಂಥ ನೀರಾವರಿ ಯೋಜನೆಗಳಿಗೆ ಹಣ ಖರ್ಚು ಮಾಡಿ ಎಂದು ಸಲಹೆ ಕೊಟ್ಟಿವು. ನಮ್ಮ ದೇಶದ ಪರಿಸ್ಥಿತಿಯನ್ನು ಸರ್ಕಾರ ಅರಿತುಕೊಂಡು ೩೦೦– ೪೦೦ ಕೋಟಿ ರೂ.ಗಳು ಖರ್ಚಾಗುವಂತಹ ಅಪ್ಪರ್–ಕೃಷ್ಣಾ ಯೋಜನೆಯನ್ನು ಕೈಕೊಂಡಿದೆ. ಅದರ ಕೆಲಸ ೧೯೮೫ರಲ್ಲಿ ಮುಗಿಯುತ್ತದೆಂದು ಹೇಳುತ್ತಿದ್ದಾರೆ. ಆದರೆ ಅದು ೧೯೯೦ಕ್ಕೆ ಮುಗಿಯಬಹುದೆಂದು ಕಾಣುತ್ತಿದೆ. ಇದರ ಜೊತೆಗೆ ಕಮ್ಯುನಿಟಿವೆಲ್ಸ್ ಕೆಲಸವನ್ನು ಸಹ ನಮ್ಮ ಭಾಗದಲ್ಲಿ ಮಾಡಿಸಿಕೊಡ ಬೇಕೆಂದು ಕೇಳಿಕೊಂಡಿದ್ದೇವೆ. ಆದರೆ ಮಾನ್ಯ ನಗರಾಳ್ ಅವರು ಅದರ ಕಡೆಗೆ ಇನ್ನೂ ಗಮನ ಕೊಡ ಲಿಲ್ಲ. ಸರ್ಕಾರ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ನಿಮ್ಮಲ್ಲಿ ಹಣವಿಲ್ಲದಿದ್ದರೆ ಹಣದ ಮೇಲಾದರೂ ತೆರಿಗೆ ಹಾಕಿ ಅಥವಾ ಬೇರೆ ಬಾಬುಗಳ ಮೇಲೆ ಟ್ಯಾಕ್ಸ್ ಹಾಕಿ, ಒಟ್ಟಿನಲ್ಲಿ ನಮಗೆ ನೀರಾ ವರಿ ಸೌಲಭ್ಯಗಳನ್ನು ಕಲ್ಪಿಸಿಕೊಡಿ. ಮಾನ್ಯ ರಾಥೋಡ್ ಅವರು ಕೊಟ್ಟಂತಹ ಒಂದು ಸ್ಟೇಟ್‌ಮೆಂಟು ಉದಯವಾಣಿ ಪತ್ರಿಕೆಯಲ್ಲಿ ೭ನೇ ತಾರೀಖಿನ ದಿವಸ ಬಂದಿದೆ. ನಮ್ಮ ಭಾಗದಲ್ಲಿ ೩೩,೭೦೦ ಜನರು

ಕೆಲಸ ಮಾಡುತ್ತಿದ್ದಾರೆಂದು ಅವರು ಹೇಳಿದ್ದಾರೆ. ನಾನು ಬೇಕಾದರೆ ಛಾಲೆಂಜ್ ಮಾಡುತ್ತೇನೆ, ಅಷ್ಟೊಂದು ಜನರು ಕೆಲಸ ಮಾಡುತ್ತಿದ್ದಾರೆಂದರೆ, ಯಾವ ಕೆರೆ ಅಥವಾ ಛಾನಲ್ಸ್ ಕೆಲಸ ನಡೆಯುತ್ತಿದೆ ಎಂಬುದನ್ನು ನನಗೆ ತೋರಿಸಲಿ.

5-00 P. M.

ಅಂಥಾ ಒಂದು ಕೆಲಸವನ್ನು ತೋರಿಸಿ ಕೊಡಿರಿ. ಅಧಿಕಾರಿಗಳು ಒಳ್ಳೆಯ ಜನ ಇದ್ದಾರೆ. ಕೆನಾಲ್ ವರ್ಕ್ಸ್‌ಗೆ ಹಣ ಕೊಟ್ಟರೆ ಎಕ್ಸಿಕ್ಯೂಟೀವ್ ಇಂಜನಿಯರ್ ಇಲ್ಲ. ಸುಮ್ಮನೆ ಬಂಡಿಂಗ್ ಬರುತ್ತದೆ ಎಂದು ಹೇಳುತ್ತಾರೆ. ಹೋದ ವರ್ಷ ಫೆಬ್ರವರಿ ತಿಂಗಳಲ್ಲಿ ಮಳೆ ಇಲ್ಲದೆ ತೊಂದರೆ ಬಂತು. ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ. ಮಾನ್ಯ ಘೋರ್ಪಡೆಯವರು ಮುಂಧೋಳನಲ್ಲಿ ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟರು. ಅಧಿಕಾರಿಗಳು ಇವತ್ತಿನವರೆಗೂ ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ. ನಾನು ಆಸೆಂಬ್ಲಿಗೆ ಬರುವಾಗ ನಿನ್ನೆ ಸಂಜೆ ೬ ಗಂಟೆವರೆಗೆ ನೋಡಿದೆ. ನಿನ್ನೆ ಹತ್ತಾರು ಲಂಬಾಣಿ ಜನರು ಹಿಪ್ಪರಗಿ ಬಸ್ ಸ್ಟ್ಯಾಂಡಿನಲ್ಲಿ ನಮಗೆ ಬಸ್ ಚಾರ್ಜ್ ಕೊಡಿ ನಾವು ಮಹಾರಾಷ್ಟ್ರಕ್ಕೆ ಹೋಗುತ್ತೇವೆ ಎಂದರು. ಹರಿಜನ ಕೇರಿಯಲ್ಲಿ ಇರತಕ್ಕ ಜನರು ಬಹಳ ಬಡವರೇ ಸರಿ, ಮಾನ್ಯ ರಾಥೋಡ್‌ರವರು ೮ ದಿವಸಗಳಿಗೊಮ್ಮೆ ಬಿಜಾಪುರಕ್ಕೆ ಬರುತ್ತಾ ಇದ್ದಾರೆ. ಅವರು ನಮ್ಮ ಸಮಸ್ಯೆಯನ್ನು ನೋಡುತ್ತಾ ಇದ್ದಾರೆ. ಏನು ಮಾಡಿದ್ದೀರಿ ಎನ್ನುವುದನ್ನು ಹೇಳಿರಿ. ಕಳೆದ ೪ ವರ್ಷಗಳಿಂದ ನಿಮಗೂ ನಮಗೂ ಸಂಬಂಧ ಇದೆ. ಮಾನ್ಯ ಮುಖ್ಯ ಮಂತ್ರಿಗಳು, ಫೈನಾನ್ಸ್‌ಮಿನಿಸ್ಟರ್ ನಮ್ಮ ಜಿಲ್ಲೆಗೆ ಬಂದು ನೋಡಿ. ಕೆಲಸ ಆಗಿದ್ದರೆ ಅದಕ್ಕೆ ಅಡ್ಡಿಯಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಮೇಲೆ ಕನಿಕರ ಇದೆ, ಆದರೆ ನನ್ನ ವಿಷಯದ ಕಡೆ ಕನಿಕರ ಇಲ್ಲ. ಇದೇ ನನ್ನ ದುರ್ದೈವ. ನಮ್ಮ ಜಿಲ್ಲೆಯ ಮಂತ್ರಿಗಳಿದ್ದಾರೆ, ಅಲ್ಲಿರತಕ್ಕ ಲಂಬಾಣಿಗಳು, ಎಲ್ಲಾ ಜನರು ಮಹಾರಾಷ್ಟ್ರಕ್ಕೆ ಹೋದರೆ ಅಲ್ಲಿ ಜನರೇ ಇರುವುದಿಲ್ಲ. ಸಿಂಧಗಿ ತಾಲ್ಲೂಕಿನಲ್ಲಿ ಯಾರೂ ಲಂಬಾಣಿಗಳು ಇಲ್ಲವೇ ಇಲ್ಲ. ಅಪ್ಪರ್‌ಕೃಷ್ಣಾದಿಂದ ಏನೂ ಪ್ರಯೋಜನವಾಗಿಲ್ಲ, ಬೇಗನೆ ಅದರಿಂದ ಪ್ರಯೋಜನವಾಗುವಂತೆ ಮಾಡಿಸಿರಿ. ಮಾನ್ಯ ನಾಗರಾಳ್‌ರವರು ಮೈನರ್ ಇರಿಗೇಷನ್ನು ಮಾಡಿಸಿದರೆ ಸಾವಿರಾರು ಎಕರೆ ನೀರು ಉಣ್ಣುತ್ತದೆ. ನಿಮ್ಮ ಅಧಿಕಾರಿಗಳು 'ಎಸ್' ಅಂದರೆ ಚಾಲು ಮಾಡಿ. ಕಮ್ಯೂನಿಟಿ ವೆಲ್ಸನ್ನು ನಮ್ಮ ಕಡೆ ಮಾಡಿ. ನೀವು ಅಧಿಕಾರಿಗಳಿಗೆ ಹೇಳಿ ಬಿಡಿ, ನನ್ನನ್ನೂ ಕೂಡಿಸಿಕೊಂಡು ಹೋಗಿ, ಎಲ್ಲಿ ನೀರು ಇದೆ ಎನ್ನುವುದನ್ನು ನಾನು ತೋರಿಸುತ್ತೇನೆ. ಮಾನ್ಯ ಉಪಾಧ್ಯಕ್ಷರು ಗಂಟೆ ಬಾರಿಸುತ್ತಿದ್ದಾರೆ. ನಮ್ಮ ಬಳಿಗೆ ಗಂಟೆ ಬಂತು. ನಿಮ್ಮ ಮನೆಯೊಳಗೆ ಗಂಟೆ ಇಲ್ಲ. ಆದುದರಿಂದ ನಿಮ್ಮ ಮನೆಯೊಳಗೆ ನನಗೆ ಟೈಂ ಕೊಡಿ. ಅಲ್ಲಿ ಫೈನಾನ್ಸ್‌ಮಿನಿಸ್ಟರ್ ಇರಲಿ, ಮಾನ್ಯ ನಾಗರಾಳ್‌ರವರನ್ನು ಕರೆದುಕೊಳ್ಳಿರಿ. ನಾನು ಇದರ ಬಗ್ಗೆ ಒಂದು ತಾಸು ಹೇಳುತ್ತೇನೆ, ಅದನ್ನು ಕೇಳಿರಿ. ಈಗ ಬೇಡಿಕೊಳ್ಳುವುದಕ್ಕೆ ಬಹಳ ತೊಂದರೆಯಾಗಿದೆ. ನೀವು ಹೇಳತಕ್ಕಂಥ ಮಾತು ಬೇರೆ, ನಾವು ಪರ್ಮನೆಂಟ್ ತೊಂದರೆಗೆ ಒಳಗಾದವರು. ನೀವು ನಮ್ಮಲ್ಲಿ ಹುಟ್ಟಿಲ್ಲ, ಹುಣಸೂರಿನಲ್ಲಿ ಏಕೆ ಹುಟ್ಟಿದಿರಿ? ನಮ್ಮ ಸಿಂದಗಿ ತಾಲ್ಲೂಕಿನಲ್ಲಿ ನೀವು ಹುಟ್ಟಿದ್ದರೆ, ಅದು ಈ ರೀತಿ ಕ್ಷಾಮಪೀಡಿತ ಪ್ರದೇಶವಾಗಿ ಉಳಿಯುತ್ತಿರಲಿಲ್ಲ. ಮಾನ್ಯ ರೆವಿನ್ಯೂ ಮಿನಿಸ್ಟರ್ ನಮ್ಮ ತಾಲ್ಲೂಕಿನಲ್ಲಿ ಹುಟ್ಟಿದ್ದರೆ ಈ ರೀತಿ ಆಗುತ್ತಾ ಇರಲಿಲ್ಲ. ನಾನು ಹುಟ್ಟಿದುದರಿಂದ ನಮ್ಮ ತಾಲ್ಲೂಕು ದುರ್ದೈವವಾಗಿದೆ. ನಾನು ಒಂದು ಸಂಕಲ್ಪ ಮಾಡಿದ್ದೆ. ಮಾನ್ಯ ಮುಖ್ಯ ಮಂತ್ರಿಗಳ ಮನೆಯೊಳಗೆ ಅವರ ಮನಸ್ಸು ಕರಗುವ ಹಾಗೆ ಇದರ ಬಗ್ಗೆ ಹೇಳಬೇಕು ಎಂದು. ಈ ಕೆಲಸವನ್ನು ಮುಖ್ಯ ಮಂತ್ರಿಗಳಲ್ಲದೆ ಇನ್ಯಾರು ಮಾಡಬೇಕು. ಅವರು ಬಡವರ ಬಂಧು ಎಂದು ನನ್ನ ಮನಸ್ಸಿನಲ್ಲಿ ಕಲ್ಪನೆ ಇದೆ. ಅದು ಖರೆ ಆಗಬೇಕಾದರೆ ೧೮ನೇ ತಾರೀಖು ಅಥವಾ ಇನ್ನೂ ೪ ದಿವಸ ತಡವಾಗಲೀ ಪರ್ವಾಗಿಲ್ಲ, ಫೈನಾನ್ಸ್ ಮಿನಿಸ್ಟರ್, ರೆವಿನ್ಯೂ ಮಿನಿಸ್ಟರು, ಎಲ್ಲಾ ಮಿನಿಸ್ಟರುಗಳೂ ಕೂಡ ನಿಮ್ಮ ಮನೆಯೊಳಗೆ ನನ್ನ ಸ್ಟೇಟಮೆಂಟನ್ನು ತೆಗೆದುಕೊಳ್ಳಿರಿ. ಇಲ್ಲದೇ ಹೋದರೆ, ನಾನ ನಿಜವಾಗಿಯೂ ಹೇಳುತ್ತಾ ಇದ್ದೇನೆ, ನಾನು ಎಂ.ಎಲ್.ಎ. ಕು ಹುಚ್ಚ ಆಗುತ್ತೇನೆ. ಅದರ ಪರಿಣಾಮ ಕೆಟ್ಟದ್ದು ಆದೀತು. ನಿಮ್ಮ ಪ್ರೀತಿಯಿಂದ ನನ್ನನ್ನು ಹುಚ್ಚನನ್ನಾಗಿ ಮಾಡಿಬಿಟ್ಟಿರಿ. ಮೊದಲು ನಮ್ಮ ಸಮಸ್ಯೆಯನ್ನು ತೆಗೆದುಕೊಳ್ಳಿರಿ. ಇದೇ ನನ್ನ ಕೊನೆಯ ಪ್ರಾರ್ಥನೆ, ಇದೇ ಕೊನೇ ಗಂಟೆ. ನನಗೆ ಇದರ ಬಗ್ಗೆ ಹೇಳುವುದಕ್ಕೆ ಒಂದು ಡೇಟ್ ಫಿಕ್ಸ್ ಮಾಡಿಕೊಡಿ. ಇಷ್ಟು ಕೆಲಸ ಆಗುವುದಿಲ್ಲ. ಇಷ್ಟು ಕೆಲಸ ಮಾಡುತ್ತೇವೆ ಎಂದು ಹೇಳಿರಿ. ನಾನು ಹೋಗಿ ಜನರಿಗೆ ನಿಮ್ಮ ಸಂದೇಶವನ್ನು ತಿಳಿಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಕಮ್ಯೂನಿಟಿ ವೆಲ್ಸ್ ಮಾಡಬಹುದು.

ಶ್ರೀ ಎಸ್.ವೈ. ಪಾಟೀಲ್.—ಅಷ್ಟೇ ಸಾಲದು, ಕೆನಾಲ್ ವರ್ಕ್ಸ್ ಪ್ರಾರಂಭ ಆಗಬೇಕು, ಮೈನರ್ ಇರಿಗೇಷನ್ ಪ್ರಾರಂಭವಾಗಬೇಕು. ಸರ್ಕಾರಿ ಏಜನ್ಸಿಯಿಂದ ಬಡವರ ಕಲ್ಯಾಣ ಆಗುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ಹೇಳಿದರು. ಯಾವುದೇ ಭಾಗ ಇರಲಿ, ಯಾವುದೇ ಪ್ರಾಂತ ಇರಲಿ ನೀವು ಪರ್ಮನೆಂಟ್ ಮೇಷರ್ಸನ್ನೂ ತೆಗೆದುಕೊಳ್ಳಿರಿ. ಅದಕ್ಕೆ ಸೆಂಟ್ರಲ್‌ಗವರ್ನಮೆಂಟ್ ಸಹಾಯ ತೆಗೆದುಕೊಳ್ಳಿರಿ. ಕೇಂದ್ರದ ಸಹಾಯ ಸಿಕ್ಕದಿದ್ದರೆ ಇರಿಗೇಷನ್ ಸೆಸ್ ಹಾಕಿ ಏನಾದರೂ ಮಾಡಿ, ಹಣ ಪಡೆದುಕೊಂಡು ಇದರ ಜೊತೆ ಇನ್ನೊಂದು ಕೋಟಿ ರೂಪಾಯಿ ತುರುಕಿ ಪರ್ಮನೆಂಟ್ ಕೆಲಸಗಳನ್ನು ತೆಗೆದುಕೊಳ್ಳಿ, ನಾನು ತಾಳಲಾರದೆ ಒಂದು ಎಮ್ಮೆಯನ್ನೂ ೫೦ ರೂಪಾಯಿಯನ್ನು ಕಟುಕರ ಕೈಗೆ ಕೊಟ್ಟು ಬಂದಿದ್ದೇನೆ. ಮೊದಲು ನನ್ನ ಇಂಟರ್‌ವ್ಯೂ ತೆಗೆದುಕೊಳ್ಳಿರಿ. ನಾನು ಚೀಫ್ ಮಿನಿಸ್ಟರ್ ಆಗಿದಿದ್ದರೆ ಹಣಸೂರು ಸಹಿತವಾಗಿ ಮಾರಿ ಬಿಡುತ್ತಿದ್ದೆ. ಇದು ಭಾಷಣ ಅಲ್ಲ, ಹೃದಯವಿದ್ರಾವಕವಾದ ಮಾತು. ಚೀಫ್ ಮಿನಿಸ್ಟರ್‌ರವರು ಹೇಳಿದರೆ ನಾನು ಬರುತ್ತೇನೆ. ಅಲ್ಲಿ ರೆವಿನ್ಯೂ ಮಿನಿಸ್ಟರ್ ಇರಲಿ, ಫೈನಾನ್ಸ್ ಮಿನಿಸ್ಟರ್ ಇರಲಿ, ಅಲ್ಲಿ ನನ್ನ ಸಾಧಕಬಾಧಕಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಕೊಡಿ. ಇಷ್ಟನ್ನು ಹೇಳಿ, ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ: (ತರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ೬೦ ವರ್ಷಗಳಿಂದ ಕಾಣದೇ ಇದ್ದಂಥ ಬರ ಈಗ ತಲೆದೋರಿದೆ. ಅದರಲ್ಲೂ ಕೂಡ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಾಮೂಹಿಕವಾಗಿ ಈ ಕ್ಷಾಮ ತಲೆದೋರಿದೆ. ಕೇಂದ್ರದ ಪ್ರತಿನಿಧಿಗಳು, ನಮ್ಮ ರಾಜ್ಯದ ಮಾನ್ಯ ರೆವಿನ್ಯೂ ಮಂತ್ರಿಗಳು ಹಾಗೂ ಇತರೇ ಮಂತ್ರಿಗಳು ಬಂದು ನಮ್ಮ ಜಿಲ್ಲೆಯಲ್ಲಿ ಉಂಟಾಗಿರತಕ್ಕ ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ. ಬಹಳ ಕಠಿಣ ಪರಿಸ್ಥಿತಿ ನಮ್ಮಲ್ಲಿದೆ ಎಂದು ನಾನು ಬಹಳ ವ್ಯಸನದಿಂದ ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ದನಕರುಗಳು ರೈತನ ಸ್ವತ್ತು. ಆ ದನಕರಗಳನ್ನು ಅವನು ಕಳೆದುಕೊಂಡರೆ ಇನ್ನು ೧೦ ವರ್ಷಗಳಾದರೂ ಕೂಡ ದನಗಳನ್ನು ಕೊಂಡುಕೊಳ್ಳತಕ್ಕ ಚೈತನ್ಯ ಅವನಿಗೆ ಬರುವುದಿಲ್ಲ ಎನ್ನುವುದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ತಿಳಿದುಕೊಳ್ಳಬೇಕು; ಇದು ಅವರಿಗೆ ಗೊತ್ತಿಲ್ಲದೇ ಇರತಕ್ಕ ವಿಚಾರವೇನಲ್ಲ, ಗೊತ್ತಿರತಕ್ಕ ವಿಚಾರ. ನನಗಿಂತಲೂ ಅವರಿಗೆ ಹೆಚ್ಚು ತಿಳಿದಿದೆ. ನಿನ್ನೆ ಸರ್ಕಾರದಿಂದ ಒಂದು ಪತ್ರ ಬಂತು, ಒಂದು ಜೊತೆ ಎತ್ತನ್ನು ಹೊಂದಿರತಕ್ಕ ಸಣ್ಣ ರೈತನಿಗೆ ೨೦೦ ರೂಪಾಯಿಗಳನ್ನು ಬ್ಯಾಂಕುಗಳ ಮೂಲಕ ಕೊಡಿಸುತ್ತಾರೆ ಎಂದು, ಅರ್ಜಿಗಳನ್ನು ತಾಲ್ಲೂಕು ಆಫೀಸಿನಿಂದ ತಹಸೀಲ್ದಾರರಿಗೆ ಕೊಡಬೇಕೆಂದು ಕಳುಹಿಸಿಕೊಟ್ಟಿದ್ದಾರೆ ಇವತ್ತು ಉದಾಹರಣೆಗೆ ಹೇಳುತ್ತೇನೆ. ಮೈಸೂರು ಬ್ಯಾಂಕ್ ಮತ್ತು ಇತರ ಬ್ಯಾಂಕುಗಳ ಮೂಲಕ ಬಡವರಿಗೆ ಸಾಕಷ್ಟು ಹಣವನ್ನು ಸಾಲವಾಗಿ ಕೊಡುತ್ತಾ ಇಲ್ಲ. ಈ ರೀತಿ ಆದರೆ ರೈತನಾದವನು ತನ್ನ ದನಕರುಗಳನ್ನು ಉಳಿಸುವುದು ಹೇಗೆ? ಮಾನ್ಯ ಮಂತ್ರಿಗಳು ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕು. ತಕಾವಿ ಸಾಲವನ್ನು ಕೊಡಿಸುವ ವ್ಯವಸ್ಥೆಯನ್ನು ತಾಲ್ಲೂಕು ಆಫೀಸು ಮತ್ತು ರೆವಿನ್ಯೂ ಇಲಾಖೆಯ ಮುಖಾಂತರ ಮಾಡಿಸಬೇಕು. ಪ್ರತಿಯೊಂದು ಸಂಸಾರಕ್ಕೆ ಕೊನೆಯ ಪಕ್ಷ ೫೦೦ ರೂಗಳನ್ನಾದರೂ ಅಥವಾ ಒಂದು ಸಾವಿರ ರೂಪಾಯಿಗಳನ್ನು ಕೊಡಿಸಿದರೆ, ಅದರಿಂದ ರೈತನಾದವನು ಹುಲ್ಲನ್ನು ಕೊಂಡು ರಾಸುಗಳನ್ನು ಉಳಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಈ ವಿಚಾರದಲ್ಲಿ ನಾನು ರೆವಿನ್ಯೂ ಮಂತ್ರಿಗಳಲ್ಲಿ ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೂಡ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನು ದನಕರುಗಳ ಮೇವಿನ ವಿಚಾರದಲ್ಲಿ ಹೇಳುವುದಾದರೆ, ಈಚಲು ಗರಿಗಳನ್ನು ಕಡಿದು ದನಕರುಗಳಿಗೆ ಹಾಕುವುದಕ್ಕೆ ಸರ್ಕಾರ ಅಪ್ಪಣೆಯನ್ನು ಕೊಡಬೇಕೆಂದೂ ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹುಲ್ಲು ತರುವುದಕ್ಕೆ ಪಿ.ಡಬ್ಲ್ಯು.ಡಿ. ಯವರು ಅವರ ಲಾರಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಆದರೆ ಲಾರಿಗಳು ಅಷ್ಟು ಹೆಚ್ಚು ಸಂಖ್ಯೆಯಲ್ಲಿಲ್ಲ. ಅದರಿಂದ ಖಾಸಗೀ ಲಾರಿಗಳಿಂದಲೂ ಸಹ ಅವರು ಹುಲ್ಲು ತರುವ ವ್ಯವಸ್ಥೆ ಹಾಗೂ ಅದನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು. ತನ್ಮೂಲಕ ಸಣ್ಣ ಹಿಡುವಳಿದಾರರು ರೈತರಿಗೆ ಹುಲ್ಲನ್ನು ತರುವ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಮಾಡಿ ರಾಸುಗಳನ್ನು ಉಳಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಇತ್ತೀಚೆಗೆ ಕೇವಲ ೧೮-೧೨ ರೂಪಾಯಿಗಳಿಗೆ ಒಳ್ಳೆಯ ರಾಸುಗಳನ್ನು ಕಟುಕರಿಗೆ ಮಾರುವ ದೃಶ್ಯವನ್ನು ನಾವು ಕಾಣುತ್ತಿದ್ದೇವೆ. ಅದನ್ನು ಸರ್ಕಾರ ಕೂಡಲೇ ತಪ್ಪಿಸಬೇಕು. ರೈತರು ತಮ್ಮ ಸಂಪತ್ತನ್ನು ಉಳಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ ರಿಗ್ ವ್ಯವಸ್ಥೆ ಮಾಡಿದೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎರಡೆರಡು ರಿಗ್‌ಗಳನ್ನು ಇಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಅದು ಅವಶ್ಯವಾಗಿ ಬೇಕಾದರೆ ಕೊಂಡುಕೊಂಡು ಬರುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ೧೯೭೩ನೇ ಇಸವಿಯಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಕ್ಷಾಮ ಬಂದಾಗ ಏನು ತ್ವರಿತವಾದ ಕ್ರಮಗಳನ್ನು ತೆಗೆದುಕೊಂಡಿತ್ತೋ ಅದೇ ಪ್ರಮಾಣ ದಲ್ಲಿ ಇವತ್ತೂ ಸಹ ತೆಗೆದುಕೊಳ್ಳಬೇಕು. ಆ ಒಂದು ಪ್ರಮಾಣದಲ್ಲಿ ಕ್ರಮ ತೆಗೆದುಕೊಂಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಿದರೆ ಅದೇನೂ ತಪ್ಪಾಗಲಾರದೆಂದು ನಾನು ಹೇಳುತ್ತೇನೆ. ಈಗ ಬಹಳ ಕಠಿಣವಾದ ಪರಿಸ್ಥಿತಿ ಇದೆ. ಅಂದು ತೆಗೆದುಕೊಂಡಂಥ ನಿಲುವು ಕ್ರಮ ಇವತ್ತು ತೆಗೆದುಕೊಂಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅಷ್ಟೇ ಪ್ರಮಾಣದಲ್ಲಿ ಅಲ್ಲ, ಅದಕ್ಕಿಂತಲೂ ಇನ್ನೂ ಹೆಚ್ಚು ಪ್ರಮಾಣದಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಕೆಲವು ಕಡೆಗಳಲ್ಲಿ ರಿಗ್ ಹಾಕುವುದರಲ್ಲಿ ಸಮರ್ಪಕವಾಗಿ ಕೆಲಸ ನಡೆಯುತ್ತಿದೆ. ಆದರೆ ಇನ್ನು ಕೆಲವು ಕಡೆ ಗಳಲ್ಲಿ ಈಗಾಗಲೇ ಹಾಕಿರತಕ್ಕ ಸ್ಥಳಗಳಲ್ಲಿ ನೀರನ್ನು ಸರಿಯಾಗಿ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಆದರೆ ದಿನೇ ದಿನೇ ಕೆಲವು ಕಡೆಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಆದರೂ ಕೂಡ ೨೪೯ನೇ ಹೆಡ್‌ನಲ್ಲಿ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರ ಹೆಚ್ಚಿಗೆ ನಿಗಾ ಕೊಟ್ಟು ಆದಷ್ಟು ಜಾಗ್ರತೆಯಾಗಿ ಹೆಚ್ಚಿಗೆ ಹಣವನ್ನು ಒದಗಿಸಿಕೊಡಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ನಾನಾ ರೀತಿಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿ ಅಲ್ಲಿನ ಜನರಿಗೆ ಉದ್ಯೋಗಗಳನ್ನು ಕೊಡಿಸಲು ಪ್ರಯತ್ನ ಮಾಡಬೇಕು. ನಮ್ಮ ಜಿಲ್ಲೆಯವರು ಬೆಳಗಾಂ ಜಿಲ್ಲೆಯ ಲೋಂಡಾಕ್ಕೆ ಹೋಗುತ್ತಿದ್ದಾರೆ. ಅಲ್ಲಿ ಮೈನ್ಸ್‌ಗಳಲ್ಲಿ ಕೆಲಸ ಮಾಡುವ ಚಿತ್ರವನ್ನು ನಾವು ದಿನೇದಿನೇ ಕಾಣುತ್ತಿದ್ದೇವೆ. ಇಂತಹ ಕಠಿಣ ಪರಿಸ್ಥಿತಿ ಯನ್ನು ಹೋಗಲಾಡಿಸಲು ಮಾನ್ಯ ಮಂತ್ರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ ಸರ್ಕಾರದವರು ಈಗಾಗಲೇ ಮೈನರ್ ಇರ್ರಿಗೇಷನ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಮಾಡಿದ್ದ ರೂ ಇನ್ನು ಕೇವಲ ಮೂರು ತಿಂಗಳುಗಳಲ್ಲಿ ಆ ಕೆಲಸಗಳು ಮುಗಿದುಹೋಗುತ್ತವೆಂದು ಹೇಳಬಹುದು. ಕಳೆದ ೭೩ನೇ ಇಸವಿಯಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರೇ ಇಲ್ಲಿ ಒಂದು ಮಾತನ್ನು ಹೇಳಿದ್ದರು, ಬಿಜಾಪುರ ರಾಯಚೂರು, ಗುಲ್ಬರ್ಗಾದಲ್ಲಿ ಮಾಡುವುದಕ್ಕೆ ಸಾಕಷ್ಟು ಕೆಲಸವಿಲ್ಲದೆ ರಸ್ತೆಗಳನ್ನು ಅಲ್ಲಿ ಎರಡೆರಡು ಸಾರಿ ಮಾಡಿಸಿದ್ದಾರೆ. ನಾನು ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಪ್ರಾರ್ಥನೆ ಮಾಡಿದ್ದೇನೆ. ತುಮಕೂರು ಜಿಲ್ಲೆಗೆ ಖಾಯಂ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು. ಹೇಮಾವತಿ ಚಾನಲ್‌ನಿಂದ ತುಮಕೂರು ಜಿಲ್ಲೆಗೆ ಹಾಗೂ ನಾಗಮಂಗಲ ತಾಲ್ಲೂಕಿಗೆ ಹೆಚ್ಚಿಗೆ ನೀರನ್ನು ಒದಗಿಸುವ ಕಾರ್ಯವನ್ನು ಮಾಡಬೇಕು. ನಮ್ಮ ಜಿಲ್ಲೆಗೂ, ತಿಪಟೂರು, ತುರುವೇಕೆರೆ, ಗುಬ್ಬಿ, ಕುಣಿಗಲ್ ಮತ್ತು ತುಮಕೂರು ಜಿಲ್ಲೆಗಳಿಗೆ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು. ಏಕೆಂದರೆ ಈಗ ಅಲ್ಲೆಲ್ಲಾ ತೆಗೆದುಕೊಂಡಿರುವ ಕಾರ್ಯಕ್ರಮಗಳು ಬಹಳ ಕಡಿಮೆ. ಆದ್ದರಿಂದ ಅಲ್ಪ ಪ್ರಮಾಣದಲ್ಲಿ ಕೇವಲ ಒಂದು ವರ್ಷದಲ್ಲಿಯೇ ೩೦ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಆಗತಕ್ಕ ಯೋಜನೆಗಳನ್ನಾದರೂ ಕೈ ಗೊಳ್ಳಬೇಕೆಂದು ನಾನು ಹೇಳುತ್ತೇನೆ. ಆಗ ನಮ್ಮ ಜನರು ಅಲ್ಲಿಗೆ ಹೋಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ನಾವೆಲ್ಲರೂ ಕೂಡ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಕೆಲಸಮಾಡಿ ಸುತ್ತೇವೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಆಮೂಲಾಗ್ರವಾಗಿ ವಿಚಾರಮಾಡಿ ಕಡೆಯ ಪಕ್ಷ ಹೇಮಾವತಿ ಎಡ್‌ನಾಲೆಯನ್ನಾದರೂ ಕೂಡಲೆ ಪ್ರಾರಂಭ ಮಾಡಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿಯೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿಯೂ ನಾನು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ವಿಚಾರ. ಇದು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಇವನ್ನು ಕೇವಲ ೮-೯ ತಾಲ್ಲೂಕುಗಳಲ್ಲಿ ಮಾತ್ರ ಪ್ರಾರಂಭ ಮಾಡಿದ್ದಾರೆ. ಅಲ್ಲಿಗೆ ಪ್ರತಿ ದಿವಸ ಸುಮಾರು ೩೦೦-೬೦೦ ಜನರು ಬರುತ್ತಿದ್ದಾರೆ. ಅವರಿಗೆ ಕೆಲಸಗಳನ್ನು ನಿಜವಾಗಿ ಒದಗಿಸಲು ಸಾಧ್ಯವಾಗಿಲ್ಲ. ಅದರಿಂದಾಗಿ ಅನೇಕರು ಕೆಲಸಗಳು ಇಲ್ಲದೆ ವಾಪಸ್ಸು ಹೋಗುತ್ತಿದ್ದಾರೆ. ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲಿದ್ದಾರೆ. ಹೆಚ್ಚು ಸಂಖ್ಯೆಯಲ್ಲಿ ಕೆಲಸಗಳನ್ನು ಒದಗಿಸಿ ಅನೇಕ ಜನರನ್ನು ಆ ಕೆಲಸಗಳಿಗೆ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ರೆವಿನ್ಯೂ ಸಚಿವರಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ. ನನಗೆ ಮಾನ್ಯ ರೆವಿನ್ಯೂ ಸಚಿವರಲ್ಲಿ ಒಂದು ನಂಬಿಕೆ ಇದೆ. ಅವರು ಖಂಡಿತವಾಗಿ ಅನೇಕರನ್ನು ಕೆಲಸಗಳಿಗೆ ತೆಗೆದುಕೊಳ್ಳುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಾರೆ. ಆದರೆ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ನನಗೆ ತಿಳಿದು ಬಂದಿರುವ ಹಾಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಈಗ ಇರತಕ್ಕ ಸಿಬ್ಬಂದಿ ಏನೇನು ಸಾಲದು. ಅವರು ಹೇಳುವ ಒಂದು ಮಾತಿನಲ್ಲಿಯೇ ನಮಗೆ ಅರ್ಥವಾಗುತ್ತದೆ. ಇರತಕ್ಕ ಸಿಬ್ಬಂದಿ ಯೇನೋ ಸಾಲದು. ಆ ಸಿಬ್ಬಂದಿಯನ್ನು ಹೆಚ್ಚಿಗೆ ಮಾಡುವ ವಿಚಾರವನ್ನು ಅಧಿಕಾರಿಗಳು ಗಮನಿಸ ಬೇಕು. ಎಲ್ಲೆಲ್ಲಿ ಸಿಬ್ಬಂದಿ ಕಡಿಮೆ ಇದೆಯೋ ಅಂತಹ ಕಡೆಗಳಲ್ಲಿ ಹೆಚ್ಚಿಗೆ ಸಿಬ್ಬಂದಿಯನ್ನು ಒದಗಿಸಿಕೊಡ ಬೇಕೆಂದು ಹೇಳಿ, ನನಗೆ ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದ ಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) —ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ 14 ಜಿಲ್ಲೆಗಳಲ್ಲಿ ಬಂದಿರತಕ್ಕ ಭೀಕರ ಬರಗಾಲದ ಬಗ್ಗೆ ಇದುವರೆಗೆ ಮಾತನಾಡಿದಂಥ ಸದಸ್ಯರು ವಿವರವಾಗಿ ತಿಳಿಸಿದ್ದಾರೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನಾನೂ ಕೂಡ ನಮ್ಮ ಜಿಲ್ಲೆಯ ಅಭಾವ ಪರಿಸ್ಥಿತಿ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅನೇಕ ಬಾರಿ ಪತ್ರ ಬರೆದಿದ್ದೇನೆ. ಅನೇಕಸಾರಿ ಶಾಸನಸಭೆಗಳಲ್ಲಿಯೂ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ನಿನ್ನೆ ಅನಿರೀಕ್ಷಿತವಾಗಿ ಮುಖ್ಯಮಂತ್ರಿ ಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸಮಾಡಿದಾಗ ನಾನೂ ಸಹ ಮಾನ್ಯ ಶ್ರೀ ನಂಜೇಗೌಡರ ಜೊತೆಯಲ್ಲಿ ಹೋಗಿದ್ದೆ. ಆದರೆ ಈ ವರ್ಷ ಸುಮಾರು ನೂರು ವರ್ಷಗಳ ಹಿಂದೆಯೂ ಬಾರದೇ ಇರತಕ್ಕ ಭೀಕರ ಕ್ಷಾಮ ಈ ರಾಜ್ಯದಲ್ಲಿ ಬಂದಿದೆ. ಅದರಲ್ಲಿಯೂ ಹಾಸನ ಜಿಲ್ಲೆಯಲ್ಲಿ ಅಭಾವಪರಿಸ್ಥಿತಿ ಬಹಳ ಹೆಚ್ಚಾಗಿದೆ, ಮಾನ್ಯ ಮುಖ್ಯಮಂತ್ರಿಗಳು ಪ್ರವಾಸ ಕಾಲದಲ್ಲಿ ಅಲ್ಲಲ್ಲಿಯೇ ಜನರ ಜೊತೆಯಲ್ಲಿ ಮಾತನಾಡಿ ಅಲ್ಲಿ ಬಂದಿರತಕ್ಕ ಭೀಕರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕೆಂದು ಆಯಾ ಸ್ಥಳೀಯ ಅಧಿಕಾರಗಳಿಗೆ ಸೂಕ್ತ ನಿರ್ದೇಶನವನ್ನು ಕೊಟ್ಟು ಎಷ್ಟು ಜನರು ಕೆಲಸಕ್ಕೆ ಬಂದರೂ ಯಾರಿಗೂ ಕೆಲಸವಿಲ್ಲವೆಂದು ಹೇಳ ಬೇಡಿ, ಅವರನ್ನೆಲ್ಲಾ ಕೆಲಸಕ್ಕೆ ತೆಗೆದುಕೊಳ್ಳಿ ಎಂಬುದಾಗಿ ಹೇಳಿದ್ದಾರೆ ಕೊನೆಯಪಕ್ಷ ಪ್ರತಿಯೊಬ್ಬರಿಗೂ ದಿನಕ್ಕೆ ನಾಲ್ಕೈದು ರೂಪಾಯಿಗಳಷ್ಟು ಕೂಲಿ ಸಿಗುವ ಹಾಗೆ ಸ್ಥಳೀಯ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಆದೇಶ ಕೊಟ್ಟು ಸರ್ಕಾರದ ವಾಹನಗಳಲ್ಲಿಯೋ ಆಹಾರವನ್ನು ವಿತರಣೆ ಮಾಡಬೇಕೆಂದು ಹೇಳಿದ್ದಾರೆ,

ಇನ್ನು ನಮ್ಮ ಹಾಸನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ, ಹೇಳುವುದಾದರೆ ಅಲ್ಲಿನ ಸಾವಿರಾರು ಜನರು ಸ್ಥಳಬಿಟ್ಟು ಮಲೆನಾಡುಪ್ರದೇಶಕ್ಕೆ ಅಲ್ಲಿ ಕೆಲಸಗಳು ಸಿಗುತ್ತವೆ ಎಂಬುದಾಗಿ ವಲಸೆ ಹೋಗಿದ್ದಾರೆ. ಆದರೆ ಅನೇಕ ಜನರು ಅಲ್ಲಿಯೂ ಕೂಡ ಕೆಲಸಗಳು ಸಿಗದೆ ವಾಪಸ್ಸು ಬಂದಿರುತ್ತಾರೆ. ಇದರಿಂದ ಅಲ್ಲಿನ ಜನರಿಗೆ ತುಂಬಾ ಚಿಂತಾಜನಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಸರ್ಕಾರದವರು ಅಲ್ಲಿನ ಜನಗಳಿಗೆ ಕೆಲಸಗಳನ್ನು ಕೊಡಿಸುವುದಕ್ಕೆ ತಕ್ಕ ವ್ಯವಸ್ಥೆಮಾಡಿ ಸಾಕಷ್ಟು ಹಣವನ್ನು ಕೊಡುವುದಕ್ಕೆ ಏರ್ಪಾಡುಮಾಡು ತ್ತಾರೆಂದು ನಾನು ನಂಬಿದ್ದೇನೆ. ಬಹುಶಃ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಪ್ರಕಾರ ಈ ರಾಜ್ಯದಲ್ಲಿ ಒಂದು ಕೋಟಿ 19 ಲಕ್ಷ ಜನರು ಇಂತಹ ಒಂದು ತೊಂದರೆಗೊಳಗಾಗಿದ್ದಾರೆ. ಸುಮಾರು 10 ಲಕ್ಷ ಕೃಷಿ ಕಾರ್ಮಿಕರೂ ಸಹ ಈ ಒಂದು ಬಾಧೆಗೊಳಗಾಗಿದ್ದಾರೆ, ಈಗಾಗಲೇ ಸರ್ಕಾರದವರು 3ಲಕ್ಷ 35ಸಾವಿರ ಜನಗಳಿಗೆ ಕೆಲಸಗಳನ್ನು ಒದಗಿಸುವ ವ್ಯವಸ್ಥೆಮಾಡಿದ್ದೇವೆಂದು ಹೇಳಿದರು.

ನನಗೆ ತಿಳಿದ ಮಟ್ಟಿಗೆ ಕೃಷಿ ಕಾರ್ಮಿಕರೇ ಸುಮಾರು 10ಸಾವಿರ ಜನ ಇರುವಾಗ ಇನ್ನೂ ಸಣ್ಣ ಕೃಷಿ ಮಾಡತಕ್ಕಂಥ ಜನ ಇನ್ನೂ ಹೆಚ್ಚು ಇರಬಹುದು. ಇದರಿಂದ ಲಕ್ಷಾಂತರ ಜನ ತೊಂದರೆಗೆ ಸಿಕ್ಕಿಕೊಂಡು ಒದ್ದಾಡುತ್ತಿರುವುದನ್ನು ನೋಡುತ್ತಿದ್ದೇವೆ. ಈ 6 ತಿಂಗಳಲ್ಲಿ ಸುಮಾರು 15–20 ಲಕ್ಷ ಜನಗಳಿಗೆ ಅನ್ನ ನೀರನ್ನು ಒದಗಿಸಬೇಕಾದರೆ 80-90 ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ಇಡಬೇಕಾಗುತ್ತದೆ. ಇನ್ನು ಕುಡಿಯುವ ನೀರಿಗೆ ಇರುವ ತೊಂದರೆಯನ್ನು ಹೇಳಬೇಕಾದರೆ ನಮ್ಮ ಹಾಸನ ಜಿಲ್ಲೆಗೆ ನಾಲ್ಕು ರಿಗ್ ಮಿಷನ್‌ಗಳನ್ನು ಕೊಟ್ಟಿದ್ದಾರೆ ಅದು ಸಾಲದು. ಇನ್ನು ಎರಡು ರಿಗ್ ಮೆಷಿನ್‌ಗಳನ್ನು ಕೊಡ ಬೇಕೆಂದು ಹೇಳಿ ಜನತೆಯ ಪರವಾಗಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಅನಿರೀಕ್ಷಿತ ವಾಗಿ ನಮ್ಮ ಹಾಸನ ಜಿಲ್ಲೆಗೆ ಅವರೇ ಸ್ವತಃ ಬಂದು ಅಲ್ಲಿನ ಜನರ ಕಷ್ಟಗಳನ್ನು ಮನಗಂಡು ಬಂದಿದ್ದಾರೆ ಅದಕ್ಕೆ ಅವರನ್ನು ನಾನು ವಂದಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಒಂದು ವಿಷಯ ಏನೆಂದರೆ ನಮ್ಮ ಜಿಲ್ಲೆಗಳಾದ ಮೈಸೂರು, ಚಿಕ್ಕಮಗಳೂರು ಹಾಸನ, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಗೆ ಯಾವಾಗಲೂ ಮಳೆ ಕಡಿಮೆ ಸುಮಾರು 10 ವರ್ಷಗಳಿಂದ ಸರಿಯಾದ ಮಳೆ ಇಲ್ಲದೆ ತೊಂದರೆಪಡುತ್ತಿ

ದ್ದಾರೆ. ಆದರಲ್ಲಿ ಕಳೆದ ಎರಡು ವರ್ಷಗಳು ಮಾತ್ರ ಸುಮಾರಾಗಿ ಬೆಳೆ ಬಂದಿದೆ. ಅದನ್ನು ಬಿಟ್ಟರೆ ಆ ಭಾಗದಲ್ಲಿ ಸರಿಯಾಗಿ ಮಳೆಯಾಗದೆ ಅಲ್ಲಿನ ಜನರ ಸ್ಥಿತಿ ಚಿಂತಾಜನಕವಾಗಿದೆ. ಶಾಶ್ವತವಾಗಿ ಕ್ಷಾಮದ ದವಡೆಗೆ ಸಿಕ್ಕಿಕೊಳ್ಳುತ್ತಿರುವ ಈ ಜಿಲ್ಲೆಗಳಿಗೆ ಸರ್ಕಾರ ಶಾಶ್ವತವಾದ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನ ಪೂರ್ವ ಭಾಗಕ್ಕೆ ಅಂದರೆ ನಾಗಮಂಗಲ ಪಶ್ಚಿಮ ವೃತ್ತ ಅಂದರೆ ಸಕಲೇಶಪುರ ಮತ್ತು ಹಾಸನಕ್ಕೆ ಮಳೆ ಬಂದು ನಿಂತುಹೋಗುತ್ತದೆ. ಅರಬ್ಬಿ ಸಮುಂದ್ರದ ಅಥವಾ ಬಂಗಾಲಕೊಲ್ಲಿಯಿಂದ ಏನಾದರೂ ಡಿಪ್ರಷನ್ ಆದರೆ ಇಲ್ಲಿ ಸ್ವಲ್ಪ ಮಳೆಯಾಗುತ್ತದೆ. 10–20ವರ್ಷಗಳಿಂದ ಈ ಭಾಗದ ಜನರು ಸರಿಯಾಗಿ ಬೆಳೆಯಂದೆ ಸೊಸೈಟಿಗಳಲ್ಲಿ ಸಾಲಗಳನ್ನು ತೆಗೆದುಕೊಂಡು ವ್ಯವಸಾಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಅವರು ಬಹುವಿಧವಾದ ಕಷ್ಟಕ್ಕೆ ಒಳಗಾಗಿದ್ದಾರೆ. ಜೊತೆಗೆ ಕಡು ಬಡವರು ಇದ್ದಾರೆ. ಮಳೆ ಇಲ್ಲದೆ ಇರತಕ್ಕಂಥ ಜನ ಅವರಿಗೆ ಶಾಶ್ವತವಾದ ಪರಿಹಾರಕ್ಕೆ ಸರ್ಕಾರ ಯಾವುದಾದರೂ ಒಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳುತ್ತೇನೆ. ಆ ಭಾಗದಲ್ಲಿ ಮಳೆ ಹೆಚ್ಚು ಬಾರದೆ ಇದ್ದರೂ ಕೂಡ ಭೂಗರ್ಭದ ಜಲಯೋಜನೆ ಇರುವುದರಿಂದ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು ಕೂಡ ಸರ್ವೆ ಮಾಡಿದ್ದಾರೆ. ಅವರ ಸರ್ವೆ ಪ್ರಕಾರ ಬೋರ್ ಹಾಕಿದರೆ ಸುಮಾರು 5 ರಿಂದ 10 ಸಾವಿರ ಲೀಟರ್ ಒಂದು ಗಂಟೆಗೆ ದೊರೆಯುತ್ತದೆಂದು ಕೇಳಿದ್ದೇನೆ. ಆದ್ದರಿಂದ ಒಂದೊಂದು ಬೋರ್‌ಗೆ ಸುಮಾರು 20 ಎಕರೆ ಜಮೀನು ಸಿಕ್ಕುತ್ತದೆ. ಆದ್ದರಿಂದ ಸಾಮಾನ್ಯ ಬಡ ರೈತರು ಅಡಮಾನ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಜಮೀನು ಸಾಗುಮಾಡುವ ಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಕಳೆದಸಾರಿ ನಾನು ಹರಿಯಾಣಕ್ಕೆ ಹೋದಾಗ ಅಲ್ಲಿ ಅಂಡರ್‌ಗ್ರೌಂಡ್ ವಾಟರ್ ಲಿಫ್ಟಿಂಗ್ ಸ್ಕೀಮ್ ಎಂದು ಮಾಡಿದ್ದಾರೆ. ಅದಕ್ಕೆ ಒಂದು ಕೋಟಿರೂಪಾಯಿ ತನಕ ಹಣವನ್ನು ಕೊಟ್ಟಿದಾರೆ, ಎಲ್ಲೆಲ್ಲಿ ಬರಗಾಲಕ್ಕೆ ತುತ್ತಾಗಿದ್ದಾರೆ ಅಂತಹ ಕಡೆ ಬೋರ್ ಮೆಷಿನ್ ಹಾಕಿ ವ್ಯವಸಾಯ ಮಾಡಲು ಹಣದ ನೆರವನ್ನು ಒದಗಿಸುತ್ತಿದ್ದಾರೆ. ಅದಕ್ಕೆ ಕರೆಂಟ್ ರೂಪದಲ್ಲಿ ವ್ಯವಸಾಯ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಅದಕ್ಕೆ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಎಲ್ಲಿ ಮಳೆಯ ನೆರಳಿನಿಂದಲೇ ವ್ಯವಸಾಯವನ್ನು ನಂಬಿಕೊಂಡಿರುತ್ತಾರೆ ಅಂತಹ ಸಂಧರ್ಭದಲ್ಲಿ ಈ ಕಾರ್ಪೊರೇಷನ್ ಮುಖಾಂತರ ಸರ್ಕಾರ ಸಹಾಯ ಮಾಡಬೇಕು. ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಈ ಭಾಗದ ಭೂಮಿ ಅಷ್ಟು ಫಲವತ್ತಾದ ಭೂಮಿಯಲ್ಲ. ಆದ್ದರಿಂದ ಈ ಭಾಗದಲ್ಲಿ ರೇಶ್ಮೆ ವ್ಯವಸಾಯ ಕೂಡ ಉತ್ತಮವಾಗಿ ಬೆಳೆಯಬೇಕಾದರೆ ತಕ್ಕ ಪ್ರೋತ್ಸಾಹ ಕೊಡುವುದರ ಜೊತೆಗೆ ಗ್ರ್ಯಾಂಟ್ ರೂಪದಲ್ಲಿ ಸಹಾಯಮಾಡಬೇಕೆಂದು ಹೇಳುತ್ತೇನೆ. ಇನ್ನು ತೋಗು ಮತ್ತು ಬೋರ್‌ವೆಲ್ ಮುಖಾಂತರ ಈ ರೇಶ್ಮೆ ವ್ಯವಸಾಯಕ್ಕೂ ಸಹಾಯ ಮಾಡಬೇಕು. ಇನ್ನು ಕುರಿ ಸಾಕುವುದಕ್ಕೆ ಸಹಾಯ ಒದಗಿಸಬೇಕು. ಇನ್ನು ಈ ಕ್ಷಾಮದ ದವಡೆಯಿಂಥ ತಪ್ಪಿಸುವುದಕ್ಕೆ ಸಮಗ್ರವಾದ ಒಂದು ಯೋಜನೆಯನ್ನು ತಕ್ಷಣ ತಯಾರಿಸಿ ಕಾರ್ಯಗತ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್. (ಹುಮ್ನಾಬಾದ್) —ಸನ್ಮಾನ್ಯ ಉಪಾಧ್ಯಕ್ಷರೇ, ನಾಲ್ಕು ವರ್ಷಗಳ ಹಿಂದೆ ಕ್ಷಾಮ ಬಂದಾಗ ಸಾಧಾರಣವಾಗಿ 60 ಕೋಟಿ ರೂಪಾಯಿ ಸರ್ಕಾರ ಖರ್ಚು ಮಾಡಿ ಕ್ಷಾಮದ ಪರಿಹಾರವನ್ನು ಒಗ್ಗಟ್ಟಿನಿಂದ ನಾಲ್ಕು ಡಿಸ್ಟ್ರಿಕ್ಟ್ ಇಡೀ ಸ್ಟೇಟ್ ಎನ್ನುವ ಒಂದೇ ಮನೋಭಾವನೆಯಿಂದ ಯಾವ ತೊಂದರೆಯಿಲ್ಲದಂತೆ ಕೆಲಸ ಕಾರ್ಯಗಳನ್ನು ಒದಗಿಸಿ ಬರಗಾಲಕ್ಕೆ ತುತ್ತಾಗಿದ್ದ ಜನರನ್ನು ಕಾಪಾಡಿದ್ದಾರೆ ಅವತ್ತಿನದಿವಸ ಜನರಿಗೆ 90 ಪೈಸೆಗೆ ಒಂದು ಕೆಜಿ ದವಸವನ್ನು ಹಂಚಿದ್ದಾರೆ. ಮತ್ತೆ ಅದೇ ರೀತಿಯಾದ ಕ್ಷಾಮವನ್ನು ನಮ್ಮ ಜನರು ನೋಡುವ ಪರಿಸ್ಥಿತಿ ಬಂದಿದೆ ಆದರೆ ಆಗ ಮಾತ್ರ ಕೇವಲ ನಾಲ್ಕು ಜಿಲ್ಲೆಗಳಿಗೆ ಈ ಪರಿಸ್ಥಿತಿ ಬಂದೊದಗಿತ್ತು. ಆದರೆ ಇವತ್ತಿನದಿವಸ ಸ್ಟೇಟ್‌ನಲ್ಲಿ ಸುಮಾರು 15 ಜಿಲ್ಲೆಗಳಿಗೆ ಬಂದಿರುವುದರಿಂದ ಇದಕ್ಕೆ ಪರಿಹಾರ ಕೊಡಬೇಕಾದರೆ ಸೆಂಟರ್‌ನಿಂದ 50 ಕೋಟಿ ರೂಪಾಯಿ ಯನ್ನಾದರೂ ಸಹಾಯ ಪಡೆಯಲೇ ಬೇಕು ಅದು ಸಿಕ್ಕದೆ ಇದ್ದರೆ ಹೆಮಿ ಡ್ರೈ ಆದ ಗುಲ್ಬರ್ಗಾ ಬೀದರ್ ಡಿಸ್ಟ್ರಿಕ್ಟ್‌ಗಳಿಗೆ ಪರಿಹಾರ ಕೊಡಲು ಸಾಧ್ಯವಾಗುವುದಿಲ್ಲ. ನಾನು ಒಂದು ಮಾತ್ರ ತಮ್ಮ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಇದಕ್ಕೆ ಒಂದು ಶಾಶ್ವತವಾದ ಪರ್ಮನೆಂಟ್ ರಿಲೀಫ್ ಕಂಡುಹಿಡಿದು ಜನರಿಗೆ ರಕ್ಷಣೆ ಕೊಡಬೇಕು. ಲಾಂಗ್ ಡ್ಯುರೇಷನ್ ರಿಲೀಫ್ ಕೊಡಬೇಕೆ ? ಹೊರತು ಕೇವಲ ತಾತ್ಕಾಲಿಕವಾಗಿ ಸಹಾಯಮಾಡಿದರೆ

ಸಾಲದು. ಇದಕ್ಕೆ ಪರಮನೆಂಟ್ ಏಜೆನ್ಸಿಯನ್ನು ಕಂಡಹಿಡಿಯಬೇಕು. ಆದ್ದರಿಂದ ತಮ್ಮ ಪ್ಲ್ಯಾನನ್ನು ಅಪ್ಲೈ ಮಾಡಿ ಕ್ಷಾಮ ಬರತಕ್ಕಂಥದು ಲಿಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಮಾಡಿದರೆ ಸಾಲದು. ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಹಾರಂಗಿ ಯೋಜನೆ ದಂಡೆಯಲ್ಲಿ ಸುಮಾರು 5–6 ಸಾವಿರ ಗ್ರೀನ್‌ಬೆಲ್ಟ್ ಇದೆ ಆದರಿಂದ ಕೆಲವರಿಗೆ ರಿಲೀಫ ಸಿಕ್ಕುತ್ತಿಲ್ಲ ಅವರವರಭಾಗವನ್ನು ಸಿಗುವಂತೆ ಮಾಡಿಅವರಿಗೆ ರಿಲೀಫ್ ಕೊಡಬೇಕು ಕೊನೆಯದಾಗಿ ನಾನು ಹೇಳುವುದು ಇದಕ್ಕೆ ಒಂದು ಪರಮ ನೆಂಟ್ ಏಜೆನ್ಸಿಯನ್ನು ಕ್ರಿಯೇಟ್ ಮಾಡಿ ಇದರ ಬಗ್ಗೆ ಡ್ರೈ ಮತ್ತು ಸೆಮಿಡ್ರೈ ಎಂದು ಬೇದವಿಲ್ಲದೆ ಮಾಡ ಬೇಕು. ಇದರ ಆಫ್ಟರ್ ಎಫೆಕ್ಟ್ ಇನ್ನು ನಮ್ಮ ಭಾಗದಲ್ಲೂ ಬಿಡಲಿಲ್ಲ. ಇನ್ನು ನಾಲ್ಕು ವರ್ಷಗಳ ಇದು ಬಿಡುವುದಿಲ್ಲ. ಮಿನಿಮಮ್ 10 ಎಕರೆಯೊಳಗೆ ಇರುವವರಿಗೆ ಕೊಂಚ ಲ್ಯಾಂಗ್ಸಿಟಿ ತೋರಿಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5–30 P. M.

† ಶ್ರೀ ವಿ. ಎನ್. ಘಾಡಿ (ಹಳಿಯಾಳ).—ಮಾನ್ಯ ಸಭಾಪತಿಗಳೆ ಕಾರವಾರ ಜಿಲ್ಲೆಯು ಸಾಧಾರಣ ವಾಗಿ 3 ತಾಲ್ಲೂಕಿನಲ್ಲಿ ಎಂದೂ ಬರದೇ ಇದ್ದಂಥ ಬರಗಾಲ ಬಂದಿರುವುದರ ಬಗ್ಗೆ ಹೇಳಲು ಬಹಳ ವಿಶಾದವಾಗುತ್ತದೆ. ಕಾರವಾರ ಜಿಲ್ಲೆಯಲ್ಲಿ ಘಟ್ಟದ ಮೇಲೆ ಮತ್ತು ಘಟ್ಟದ ಕೆಳಕ್ಕೆ ಈ ಪ್ರಕಾರ 5 ತಾಲ್ಲೂಕುಗಳು ಕೆಳಕ್ಕೆ ಮತ್ತೆ ಕೆಲವು ಮೇಲಕ್ಕೆ ಬರುತ್ತವೆ, ಆದರೊಳಗೆ ಹಳಿಯಾಳ, ಮೇಲುಗಡೆ ಭಾಗ ದಲ್ಲಿರುವುದರಿಂದ ಆಗಸ್ಟ್ ತಿಂಗಳಲ್ಲಿ ಸುಮಾರು ಮಳೆ ಬಿದ್ದುದರಿಂದ ಬೆಳೆಬಂದಿದೆ, ಈ ವರ್ಷ ಭತ್ತದ ಬೆಳೆ ಚೆನ್ನಾಗಿ ಬಂತು ಒಕ್ಕಲಿಗ ಲೆವಿಯನ್ನು ಕೊಡಬಹುದು ಎಂದು ಅಂದು ಕೊಳ್ಳುತ್ತಿರುವಾಗಲೇ ಆಗಸ್ಟ್ ತಿಂಗಳಲ್ಲಿ ಮಳೆಯಾದದ್ದು ಇಲ್ಲಿಯವರೆಗೆ ಮಳೆಯಾಗಿಲ್ಲ. ಭತ್ತದ ಪೀಕು ಕೂಡ ನಷ್ಟವಾಗಿ ಹೋಗಿದೆ, ಹೊಳತಳಿ ಬರುವ ಹಾಗಿಲ್ಲ, ಇದರಿಂದ ಬಹಳ ನಷ್ಟವಾಗಿ ಹೋಗಿದೆ, ಇವೊತ್ತು ನಮ್ಮ ಕಡೆ ಕೆರೆಗಳಲ್ಲಿ, ಬಾವಿಗಳಲ್ಲಿ ನೀರು ಬತ್ತಿಹೋಗಿದೆ. ದನಕರುಗಳಿಗೆ ಇನ್ನು 2 ತಿಂಗಳುಗಳಿಗೆ ನೀರು ಸಿಗಬಹುದು. ಆದರೆ ಜನರಿಗೆ ಕುಡಿಯುವುದಕ್ಕೆ ನೀರಿನ ಅಭಾವ ಉಂಟಾಗಬಹುದು. ಸೂಪ ಜಾಗದಲ್ಲಿ ಮತ್ತು ಅದರ ಸುತ್ತಮುತ್ತಲಿನ ಜಾಗದಲ್ಲಿ ಕುಡಿಯುವ ನೀರಿನ ಪರದಾಟ ನಡೆದಿದೆ ಆದುದರಿಂದ ತಾವು ಕುಡಿ ಯುವ ನೀರಿನ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಲು ಅಲ್ಲಿಗೆ ಆದಷ್ಟು ಬೇಗ ರಿಟ್‌ಗಳನ್ನು ಕಳುಹಿಸಿ ಕುಡಿಯುವ ನೀರಿನ ಪೂರೈಕೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. 42 ಸಾವಿರ ಎಕರೆಯಲ್ಲಿ 30 ಸಾವಿರ ಎಕರೆಯಲ್ಲಿ ಭತ್ತವನ್ನು ಬಿತ್ತುತ್ತಾರೆ ಆದರಲ್ಲಿ ಸಾಧಾರಣವಾಗಿ ಹೆಚ್ಚು ಕಡಿಮೆ ಇರಿಗೇಟೆಡ್ ಲ್ಯಾಂಡ್ ಇದೆ. ಇವತ್ತು ಬತ್ತ ಸರಿಯಾಗಿ ಪೀಕು ಕೂಡ ಬಂದಿಲ್ಲ. ಒಂದು ಕ್ವಿಂಟಾಲ್, ಎರಡು ಕ್ವಿಂಟಾಲ್ ನಷ್ಟು ಭತ್ತ ಕೆಲವರಿಗೆ ಸಿಕ್ಕಬಹುದು. ಇನ್ನು ಕೆಲವರಿಗೆ ಭತ್ತ ಕೊಯ್ಯು ಲಿಕ್ಕೆ ಸಾಧ್ಯವಿಲ್ಲ, ಇನ್ನು ಕೆಲವರು ಬೇರೆಯವರಿಗೆ ಸಂಬಳಕ್ಕೆ ಕೊಟ್ಟು ಭತ್ತವನ್ನು ಕೊಯ್ಯಬೇಕಾದಂಥ ಸಂದರ್ಭ ಬಂದಿದೆ. ಆದರೆ ಅವರಿಗೆ ಅದು 2 ತಿಂಗಳ ಕಾಳು ಆಗುವುದಿಲ್ಲ. ಇಂಥ ಒಂದು ಪರಿಸ್ಥಿತಿ ಬಂದಿದೆ. ಇನ್ನು ಕೆಲವರು ಭತ್ತವನ್ನು ಕೊಯ್ಯಲು ಮಾಡಿ ಬೆಂಕಿಗೆ ಹಾಕಬೇಕಾದಂಥ ಒಂದು ಪರಿಸ್ಥಿತಿ ಬಂದಿದೆ. ಇದು ನಿಜವಾಗಿಯೂ ಸೋಚನೀಯವಾದ ಪ್ರಸಂಗವಾಗಿದೆ. ತೆಂಗಿನ ಕಾಯಿಯುವನು ಅತ್ತ ಎಂದು ಎಣ್ಣೆಯುವನೂ ಅತ್ತ ಎಂದು ತಾವು ಭಾವಿಸಬಾರದು. ನಿಜವಾಗಿಯೂ ಮಂತ್ರಿಗಳವರು ನಮ್ಮ ಕಡೆಗೆ ಬಂದು ಖುದ್ದಾಗಿ ಅವರೇ ನೋಡಿದರೆ ಅಲ್ಲಿಯ ಪರಿಸ್ಥಿತಿ ನೋಡಿ ಅವರಿಗೆ ಹೃದಯದಲ್ಲಿ ಕನಿಕರ ಉಂಟಾಗುತ್ತದೆ ಎಂದು ನನಗನ್ನಿಸುತ್ತದೆ. ಈ ರೀತಿಯ ಒಂದು ಬರಗಾಲ ಪರಿಸ್ಥಿತಿಯನ್ನು ನಾವು ಎಂದೂ ಕಂಡಿದ್ದಿಲ್ಲ. ಸರ್ಕಾರದವರಲ್ಲಿ ಇದರ ಬಗ್ಗೆ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಒತ್ತಾಯಮಾಡುತ್ತಿದ್ದೇನೆ. ಕಾರವಾರ ಜಿಲ್ಲೆಯಲ್ಲಿ ಮಧ್ಯಮ ನೀರಾವರಿ ಯೋಜನೆ ಗಳನ್ನು ಮತ್ತು ಸಣ್ಣ ನೀರಾವರಿಯ ಯೋಜನೆಗಳನ್ನು ಕೈಗೊಂಡರೆ ಬರಗಾಲವನ್ನು ಎದುರಿಸಲಿಕ್ಕೆ ಸಾಧ್ಯ ನಮ್ಮ ಹಳಿಯಾಲ ತಾಲ್ಲೂಕಿನಲ್ಲಿ ಅತ್ತಿಗೆರೆ ಯೋಜನೆ ಇದೆ ಅದಕ್ಕೆ ತಾವು 2–3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ 2 ವರ್ಷಗಳಲ್ಲಿ ಮುಗಿಸಿದರೆ ಅಲ್ಲಿಗೆ ಒಂದು ಶಾಶ್ವತವಾದ ಪರಿಹಾರವನ್ನು ಕೈಗೊಂಡಂತೆ ಆಗುತ್ತದೆ. ಹಳಿಯಾಳ ತಾಲ್ಲೂಕಿನಲ್ಲಿ ಇಂಥ ಒಂದು ಯೋಜನೆಯನ್ನು ತಾವು ಕೈ ಕೊಂಡಲ್ಲಿ 30 ಸಾವಿರ ಎಕರೆ ಜಮೀನಿಗೆ ನೀರು ಒದಗಿಸಲಿಕ್ಕೆ ಸಾಧ್ಯವಿದೆ. ಆದುದರಿಂದ ಮುಖ್ಯಮಂತ್ರಿಗಳವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಮುಂದಿನ ವರ್ಷವಾದರೂ ಯಾವುದಾದರೂ ಅಂದರೆ ಮಧ್ಯಮ ಅಥವಾ ಸಣ್ಣ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಪ್ಪರ ಗಟ್ಟ ಯೋಜ ನೆದೆ ಸಾಧಾರಣವಾಗಿ ಎರಡು ಕೋಟಿ ರೂಪಾಯಿಗಳ ಅಂದಾಜು ಇದೆ ಆದರಿಂದ 10–12 ಸಾವಿರ ಎಕರೆಗೆ

ನೀರು ದೊರಕುತ್ತದೆ, ಹಾಗೆಯೇ ಬಾಳಿಗೆರೆ ಯೋಜನೆ ಮತ್ತು ದುರ್ಗದ ಹಳ್ಳ ಯೋಜನೆಗಳಿಂದ ಸಾವಿರಾರು ಎಕರೆಗಳಿಗೆ ನೀರು ದೊರೆಯುತ್ತದೆ. ಇಂಥ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಿಂದ 12 ಸಾವಿರ ಎಕರೆಯಿಂದ ಫಾರೆಸ್ಟಿನ ಉತ್ಪನ್ನ ಬರುತ್ತಿದೆ ಬರಿ ನಮ್ಮ ಕಾರವಾರ ಫಾರೆಸ್ಟಿನಿಂದ 12 ಕೋಟಿ ರೂಪಾಯಿಗಳ ಫಾರೆಸ್ಟ್ ಉತ್ಪನ್ನವಾಗುತ್ತಿರುವಾಗ ಅಲ್ಲಿಯ ಅಭಿವೃದ್ಧಿ ಕಾರ್ಯಗಳಿಗೆ ತಾವು 5-10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಇನ್ನು ಹೆಚ್ಚಿನ ಉತ್ಪನ್ನ ಬರಲು ಸಾಧ್ಯವಿದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹಾಗೂ ಒತ್ತಾಯಮಾಡುತ್ತೇನೆ. ಬ್ರಿಟೀಷರು ಇದ್ದ ಕಾಲದಿಂದ ನೀವು ಮಲೆನಾಡಿನ ಅಭಿವೃದ್ಧಿಗಾಗಿ ಶೇಕಡ 2 ರಷ್ಟು ಮಾತ್ರ ಖರ್ಚುಮಾಡುತ್ತಿದ್ದೀರಿ. ಆದುದರಿಂದ ತಾವು ಇನ್‌ಕಂನಲ್ಲಿಯು ಶೇಕಡ 10-15 ರಷ್ಟನ್ನಾದರೂ ಖರ್ಚುಮಾಡಬೇಕೆಂದು ಒತ್ತಾಯ ಮಾಡಿ ಈ ವರ್ಷ ನಮ್ಮಲ್ಲಿ ಭೀಕರವಾದ ಬರಗಾಲ ಬಂದಿರುವುದರಿಂದ ಸಣ್ಣ ಕೆರೆಗಳ ಅಭಿವೃದ್ಧಿ ಕೆಲಸವನ್ನು ತಕಾವಿ ಸಾಲವನ್ನು ವಸೂಲಿ ಮಾಡುವುದನ್ನು ಮುಂದಕ್ಕೆ ಹಾಕಬೇಕೆಂದು, ಹಾಗೂ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಅಭಾವ ಪರಿಸ್ಥಿತಿ ಬಗ್ಗೆ ಸಮಗ್ರವಾದ ಉತ್ತರ ಹೇಳುವ ಉದ್ದೇಶ ನನಗಿಲ್ಲ. ನಾಳೆ ದಿವಸ ಕಂದಾಯ ಮಂತ್ರಿಗಳು ಪ್ರತಿಯೊಂದು ವಿಷಯಗಳ ಬಗ್ಗೆ ಕೂಲಂಕಷವಾಗಿ ಉತ್ತರ ಹೇಳುತ್ತಾರೆ. ಆದರೆ ಈ ಚರ್ಚೆಯಲ್ಲಿ ಪದೇ ಪದೇ ಹಣಕಾಸಿನ ವಿಷಯ ಪ್ರಸ್ತಾಪ ಮಾಡಿರುವುದರಿಂದ ಸಂಕ್ಷಿಪ್ತವಾಗಿ ಅದರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಅಭಾವ ಪರಿಸ್ಥಿತಿಯಲ್ಲಿ ಕೆಲಸ ಮತ್ತು ಕೂಲಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇದಕ್ಕಾಗಿ ಹಣಕಾಸಿನ ಅಭಾವವೇ ಯಾವ ಕಾಲಕ್ಕೂ ಅಡಚಣೆ ಉಂಟಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳ ಬಯಸುತ್ತೇನೆ, ತಮಗೆ ಗೊತ್ತಿರುವ ಹಾಗೆ ೨-೩ ವರ್ಷಗಳ ಹಿಂದೆ ಭೀಕರವಾದಂಥ ಅಭಾವ ಪರಿಸ್ಥಿತಿ ರಾಜ್ಯದಲ್ಲಿ ಇದ್ದಾಗ ಕೋಟಿ ಗಟ್ಟಲೆ ಹಣವನ್ನು ಸರ್ಕಾರ ಖರ್ಚು ಮಾಡಿದೆ. ಆ ನಂತರ ಕೇಂದ್ರದಿಂದ ಹಣ ಸಹಾಯವನ್ನು ಪಡೆಯಿತು ಈ ಸಲ ಕೇಂದ್ರ ಸರ್ಕಾರದವರು ಈಗಾಗಲೇ ೭ ಕೋಟಿ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಸಾಲದು ಇದಕ್ಕಿಂತ ಹೆಚ್ಚಿನ ಹಣ ಬೇಕು ಎಂದರೂ ಖಂಡಿತವಾಗಿಯೂ ಕೊಡುತ್ತಾರೆ ಇದರ ಬಗ್ಗೆ ಯಾರಿಗೂ ಅನುಮಾನವಿರಬೇಕಾದ್ದು ಇಲ್ಲ. ನಾವು ಕೇಂದ್ರ ಸರ್ಕಾರದಿಂದ ಹಣ ಬರಲಿ ಬಾರದೇ ಇರಲಿ ಕಾಮಗಾರಿಗಳನ್ನು ಮುಂದುವರಿಸುತ್ತೇವೆ. ಈಗ ಅಡವಾನ್ಸ್ ಪ್ಲಾನ್ಡ್ ಅಸಿಸ್ಟೆನ್ಸ್ ಎಂದು ಹೇಳಿ ಇಟ್ಟಿದ್ದಾರೆ. ಆದರಿಂದ ಅಭಾವ ಪೀಡಿತ ಪ್ರದೇಶಗಳಲ್ಲಿ ಎಷ್ಟೇ ಹಣವನ್ನು ನಾವು ಖರ್ಚು ಮಾಡಿದರೂ ಅದಕ್ಕೆ ಈ ಅಡ್ವಾನ್ಸ್ ಪ್ಲಾನ್ಡ್ ಅಸಿಸ್ಟೆನ್ಸ್‌ನಿಂದ ಸಹಾಯ ದೊರಕುತ್ತದೆ ನಮ್ಮ ಯೋಜನೆಗಳಿಗೆ ಯಾವ ಧಕ್ಕೆ ಬರುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಇವತ್ತು ನಾವು ಅದರ ಬಗ್ಗೆ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ ಎಷ್ಟೇ ಜನ ಕೂಲಿ ಕೆಲಸಕ್ಕೆ ಬರಲಿ ಅವರಿಗೆಲ್ಲರಿಗೂ ಕೆಲಸ ಕೊಡತಕ್ಕಂಥ ಶಕ್ತಿ ಸಾಮರ್ಥ್ಯ ನಮ್ಮ ಸರ್ಕಾರಕ್ಕೆ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ೨ ಲಕ್ಷದ ೩೦ ಸಾವಿರದ ಜನರು ಬೇರೆ ಬೇರೆ ಕಾಮಗಾರಿಗೆ ಹೋಗುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಒಡ್ಡು ಹಾಕತಕ್ಕಂಥ ಕೆಲಸ. ಈಗ ೨ ಲಕ್ಷದ ೩೦ ಸಾವಿರ ಜನ ಇರಬಹುದು ನಾಳೆ ೩ ಲಕ್ಷ, ೪ ಲಕ್ಷ ಆಗಬಹುದು ಅದರೂ ಕೂಡ ನಾವು ಹೆದರುವುದಿಲ್ಲ. ೩ ಲಕ್ಷ ಜನ ಎಂದರೆ ಒಂದು ದಿನಕ್ಕೆ ೧೦ ಲಕ್ಷ ರೂಪಾಯಿ ಆಗಬಹುದು, ೧ ತಿಂಗಳಿಗೆ ೩ ಕೋಟಿ ರೂಪಾಯಿ ಆಗಬಹುದು ಇದರ ಜೊತೆಗೆ ನಾನ್ ಲೇಬರ್ ಕಾಂಪೋನೆಂಟ್ ಸೇರಿದರೆ ೪ ಕೋಟಿ ರೂಪಾಯಿ ಆದೀತು. ಆದುದರಿಂದ ತಾವು ಸ್ವಲ್ಪ ನಾನು ಹೇಳುವುದನ್ನು ದಯವಿಟ್ಟು ಸರಿಯಾಗಿ ಕೇಳಬೇಕು. ಹಿಂದೆ ಗುಲ್ಬರ್ಗದಲ್ಲಿ ಭೀಕರ ಕ್ಷಾಮದ ಪರಿಸ್ಥಿತಿ ಬಂದಾಗ ೪-೫ ಲಕ್ಷ ಜನ ಮಾತ್ರ ಕೆಲಸಕ್ಕೆ ಬರುತ್ತಿದ್ದರು. ಆದುದರಿಂದ ಇವತ್ತು ನಮ್ಮ ಸರ್ಕಾರ ೫-೬ ಕೋಟಿ ರೂಪಾಯಿ ಖರ್ಚು ಆಗುವುದಾದರೆ ಅಷ್ಟು ಹಣವನ್ನು ಖರ್ಚು ಮಾಡಲು ಸಾಮರ್ಥ್ಯವನ್ನು ಹೊಂದಿದೆ. ಇವತ್ತು ಯಾರೇ ಆಗಲೀ ನಮಗೆ ೩ ರೂಪಾಯಿ ಕೂಲಿ ಸಿಕ್ಕಿಲ್ಲ, ನಮಗೆ ಕೆಲಸವಿಲ್ಲ, ಕೆಲಸ ಕೊಡಿ ಎಂದು ಬಂದರೆ ಎಷ್ಟೂ ಜನಕ್ಕೂ ಕೆಲಸ ಕೊಡುವ ನಿರ್ಧಾರವನ್ನು ಸರ್ಕಾರ ಮಾಡಿದೆ. ಆ ಕೆಲಸಕ್ಕೆ ಖಂಡಿತ ಹಣದ ಅಭಾವವಿರುವುದಿಲ್ಲ.

ಇನ್ನು ಕಾಮಗಾರಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕೆರೆ ರಿಪೇರಿ ಕೆಲಸ ಮತ್ತು ಹೊಸ ಕೆರೆಗಳ ಬಗ್ಗೆ ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದ್ದಾರೆ ಸಣ್ಣ ಕೆರೆಗಳನ್ನು ಮತ್ತು ಒಂದೊಂದು ತಾಲ್ಲೂಕಿನಲ್ಲಿ ಹೊಸದಾಗಿ ೨-೩ ಕೆರೆಗಳನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ, ಇನ್ನು ಕೆರೆ ರಿಪೇರಿ, ಸಾಯಿಲ್ ಕನ್ಸರ್ವೇಷನ್ ಮತ್ತು ರಸ್ತೆ ರಿಪೇರಿಗಳ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಹೊಸ ರಸ್ತೆಗಳನ್ನು, ಮನಸ್ಸಿಗೆ ಬಂದಂತೆಲ್ಲಾ ಪ್ರಾರಂಭ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಆದರೆ, ಸಧ್ಯಕ್ಕೆ ಯಾವ ರಸ್ತೆಗಳಲ್ಲಿ ಕೆಲಸ ನಡೆಯುತ್ತಿದೆ ಆ ಮಟ್ಟವನ್ನು ಮಾತ್ರ ಕಾಪಾಡಿಕೊಂಡು ಬರಬೇಕು. ನಾನು ಈಗಾಗಲೇ ಎಲ್ಲವನ್ನೂ ತಿಳಿಸಿದ್ದೇನೆ. ಇನ್ನೂ ವಿವರವಾಗಿ ಹೇಳುವ ಅಗತ್ಯವಿಲ್ಲ ಎಂದು ತಿಳಿದು ಕೊಂಡಿದ್ದೇನೆ. ಕೇಂದ್ರ ಸರ್ಕಾರದಿಂದ ನಮಗೆಷ್ಟು ಹಣ ಬಂದರೂ, ಅದರಿಂದೇನೂ ನಮ್ಮ ಕಾರ್ಯಕ್ರಮಗಳಿಗೆ ತೊಂದರೆಯಾಗುವುದಿಲ್ಲ. ಈಗ ಕೇಂದ್ರದಿಂದ ನಮಗೆ ಏಳೂವರೆ ಕೋಟಿ ರೂಪಾಯಿಗಳು ಬಂದಿದೆ. ಮುಂದೆ ಜಾಸ್ತಿ ಬರಬಹುದು. ಆದರೆ, ನಾವು ಯಾವ ವಿಧಾನದಿಂದ ಹಣವನ್ನು ಕೊಡುತ್ತೇವೆ ಎನ್ನುವುದು ನಮಗೆ ಸಂಬಂಧಪಟ್ಟಿದ್ದು. ಆದುದರಿಂದ, ನಾವು ಇದಕ್ಕಾಗಿ ಬೇರೆಯವರನ್ನು ಕಾಯುವುದ ಕ್ಕಾಗುವುದಿಲ್ಲ. ನಮ್ಮ ಜನರಿಗೆ ಬೇಕಾದ ಮೂರು-ನಾಲ್ಕು ಕೋಟಿ ರೂಪಾಯಿಗಳಷ್ಟಂತನ್ನು ನಾವು ಖಂಡಿತವಾಗಿ ಖರ್ಚು ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ರೀತಿ ಖರ್ಚು ಮಾಡುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಮೈನರ್ ಇರಿಗೇಷನ್ ಬಡ್ಜೆಟ್ ಇದೆ, ಸಾಯಿಲ್ ಕನ್ಸರ್ವೇಷನ್ ಮತ್ತು ಕೆರೆ ರಿಪೇರಿ ಬಡ್ಜೆಟ್ ಇದೆ, ರಸ್ತೆ ಬಡ್ಜೆಟ್ ಇದೆ, ಅಫಾರಸ್ಟೇಷನ್ ಬಡ್ಜೆಟ್ ಇದೆ. ಈ ಬಾಬುಗಳೇ ಜನರಿಗೆ ಕೆಲಸ ಕೊಡಲಿಕ್ಕೆ ಮುಖ್ಯವಾದ ಮಾರ್ಗಗಳು. ಇನ್ನೂ ಈ ಬಾಬುಗಳಲ್ಲಿ ಹಣ ಉಳಿದಿದೆ. ಇನ್ನು ಎರಡು ತಿಂಗಳು ಆದಮೇಲೆ ಪೂರ್ತಿ ಹಣ ಖರ್ಚಾಗುತ್ತಿತ್ತು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಮಾನ್ಯ ಮಂತ್ರಿಗಳು ಸಮರ್ಥನೆ ಮಾಡಿಕೊಂಡಿದ್ದಾರೆ, ಬಹಳ ಸಂತೋಷ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಸ್ಪಷ್ಟವಾಗಿ ಹೇಳುತ್ತೇನೆ. ರಾಜ್ಯ ಮಟ್ಟದಲ್ಲಿ ಹಣ ಕೊಟ್ಟರೂ ಕೂಡ ಕೆಲಸಕಾರ್ಯಗಳಲ್ಲಿ ಸ್ವಲ್ಪ ತೊಂದರೆಯಾಗಲಿಕ್ಕೆ ಸಾಧ್ಯವಿದೆ. ಚೀಫ್ ಇಂಜಿನಿಯರ್-ರವರು ಪ್ರತಿಯೊಂದು ತಾಲ್ಲೂಕುಗಳಿಗೂ ಹಣವನ್ನು ಕೊಡುವಾಗ, ಅಲ್ಲಿ ಯಾವ ಕೆಲಸಗಳನು ಮಾಡಿಸಿದರೆ ಯೋಗ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕೊಟ್ಟರೆ ಸರಿ ಹೋಗುತ್ತದೆ. ಆದರೆ, ಇದರಲ್ಲೇನಾದರೂ ಸ್ವಲ್ಪ ವ್ಯತ್ಯಾಸವಾದರೆ ಆಗ ಸ್ವಲ್ಪ ತೊಂದರೆಯಾಗುತ್ತದೆ. ಅದೇನೇ ಇದ್ದರೂ, ರಾಜ್ಯ ಮಟ್ಟದಲ್ಲಿ ಎರಡು-ಮೂರು ಲಕ್ಷ ಜನರಿಗೆ ಸತತವಾಗಿ ಕೆಲಸ ಕೊಡಲಿಕ್ಕೆ ಯಾವ ಹಣದ ಅಭಾವವೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಬಡ್ಜೆಟ್ಟಿನಲ್ಲಿರುವ ಹಣ ಸಾಧ್ಯವಾಗದಿದ್ದರೆ, ಏನು ಮಾಡುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಸಪ್ಲಿಮೆಂಟರಿ ಬಡ್ಜೆಟ್‌ನ್ನು ತರುತ್ತೇವೆ. ಹಿಂದೆಲ್ಲಾ ಸಪ್ಲಿಮೆಂಟರಿ ಬಡ್ಜೆಟ್ ತಂದು, ತಮ್ಮೆಲ್ಲರ ಒಪ್ಪಿಗೆ ಪಡೆದಿಲ್ಲವೆ? ಅಷ್ಟೇ ಅಲ್ಲದೆ, ಕಂಟೆಂಜೆನ್ಸಿ ಇಲ್ಲವೆ ? ಆದುದರಿಂದ ಬಡ್ಜೆಟ್ಟಿನಲ್ಲಿರುವಷ್ಟನ್ನೇ ಖರ್ಚು ಮಾಡಬೇಕೆಂದಿಲ್ಲ. ಅವಶ್ಯಕತೆಗಳು ಬಂದಾಗ, ಬಡ್ಜೆಟ್ಟಿಗಿಂತಲೂ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ, ಎಷ್ಟೇ ಖರ್ಚಾಗಲಿ, ನಾವದನ್ನು ಮಾಡುತ್ತೇವೆ

ಶ್ರೀ ಕಾಗೋಡು ತಿಮ್ಮಪ್ಪ.—ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ಆಯಾಯಾ ಕೆಲಸಕಾರ್ಯಗಳಿಗೆ ಖರ್ಚು ಮಾಡುವ ಬದಲು, ಆ ಕೆಲಸಗಳನ್ನು ನಿಲ್ಲಿಸಿ, ಆ ಹಣವನ್ನು ಪರಿಹಾರ ಕಾಮಗಾರಿಗಳಿಗೆ ಉಪಯೋಗಿಸುವಿರೇನು ?

ಶ್ರೀ ಎಂ. ವೈ. ಘೋರ್ಪಡೆ.—ಹಾಗೇನೂ ಇಲ್ಲ. ನಾವೇನು ಬೇರೆ ಅಭಿವೃದ್ಧಿ ವೆಚ್ಚಗಳನ್ನು ಮೊಟಕು ಮಾಡುವುದಿಲ್ಲ. ಅದನ್ನು ಕಡಮೆ ಮಾಡದೆ, ಇದನ್ನು ಜಾಸ್ತಿ ಮಾಡುತ್ತೇವೆ, ಅಷ್ಟೆ. ಜಾಸ್ತಿ ಮಾಡುವ ಶಕ್ತಿಯೂ ನಮಗಿದೆ. ನಾವು ಎಷ್ಟನ್ನು ಖರ್ಚು ಮಾಡುತ್ತೇವೆಯೋ, ಅಷ್ಟನ್ನು ಕೇಂದ್ರ ಸರ್ಕಾರದಿಂದ ತರುತ್ತೇವೆ. ಈ ಮಾತನ್ನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ, ಯಾವುದೇ

ಕ್ಷೇತ್ರದಿಂದ, ಎಷ್ಟೇ ಜನರನ್ನು, ಅಭಿವೃದ್ಧಿ ಕೆಲಸಗಳಿಗೆ, ಅಫಾರಸ್ಟೇಷನ್ ಕೆಲಸಗಳಿಗೆ, ಕೆರೆ ರಿಪೇರಿ ಮತ್ತು ಹೊಸ ಕೆರೆಗಳ ನಿರ್ಮಾಣದ ಕೆಲಸಗಳಿಗೆ ಬರುವುದಾದರೆ, ಕರೆದುಕೊಂಡು ಬನಿ ಅವರೆಲ್ಲರಿಗೂ ಕೆಲಸ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈಗ ಕೂಲಿಕಾರರಿಗೆ ಪಿ. ಡಬ್ಲ್ಯು. ಡಿ. ದರಗಳನ್ನು ಆಧರಿಸಿ ಕೂಲಿಯನ್ನು ಕೊಡುತ್ತಿದ್ದಾರೆ. ಪಿ.ಡಬ್ಲ್ಯು.ಡಿ ಯು ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆಯಾದ ದರಗಳನ್ನು ಗೊತ್ತು ಮಾಡಿದ್ದಾರೆ. ಉದಾಹರಣೆಗೆ, ಬೆಂಗಳೂರು ವಿಭಾಗದಲ್ಲಿ ಒಂದು ಮೀಟರು ಮಣ್ಣು ತೆಗೆದರೆ ಎರಡು ರೂಪಾಯಿ ತೊಂಬತ್ತು ಪೈಸೆಯಷ್ಟು ಕೂಲಿ ಸಿಕ್ಕುತ್ತದೆ ಅದೇ ಮೈಸೂರು ವಿಭಾಗದಲ್ಲಿ ಒಂದು ರೂಪಾಯಿ ಎಪ್ಪತ್ತು ಪೈಸೆಯಷ್ಟು ಕೂಲಿ ಸಿಕ್ಕುತ್ತದೆ. ಆದುದರಿಂದ, ಪರಿಹಾರ ಕಾಮಗಾರಿಗಳ ಮಟ್ಟಿಗಾದರೂ, ಎಲ್ಲ ವಿಭಾಗಗಳಲ್ಲೂ ಒಂದೇ ಬೆಲೆಯನ್ನು ಅನ್ವಯ ಮಾಡುವುದು ಒಳ್ಳೆಯದು.

SRI M. Y. GHORPADE.—I am making a responsible statement. My Hon'ble. Friends seem to have some doubts. I have no hesitation in saying that the Government is committed to provide as much work as is necessary. If it means spending very much more than the budget, if it means running into an overdraft for a temporary period, Government will not hesitate to do that. It is the primary responsibility of the Government to feed the people and give them work. Last time we did it and this time also we will do it, but I am sure such a situation will not arise. I do not want to go into every detail. I am sure the Revenue Minister will meet all those points. I only want to assure the House that for work, for distribution of frains and for drinking water there shall not be any deficiency of gunds.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳನ್ನು ಪರೀಕ್ಷೆ ಮಾಡಿ ಮುಂದೆ ನೋಡುತ್ತೇವೆ.

ಶ್ರೀ ಎಂ. ವೈ ಘೋರ್ಪಡೆ.—ನೀವು ಕೆಲಸ ಮಾಡಲಿಕ್ಕೆ ಎಷ್ಟು ಜನರನ್ನು ಕರೆದು ಕೊಂಡು ಬರುತ್ತೀರೋ, ನೋಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಿಯ್ಯ.—ಕೆಲಸ ಮಾಡಿದ ಹೆಂಗಸರಿಗೆ ಕೂಲಿ ಕೊಡುವುದಕ್ಕೆ ನಿಮ್ಮ ಕೈಯಲ್ಲಾಗುತ್ತಿಲ್ಲ, ಸವಾಲು ಬೇರೆ ಹಾಕುತ್ತೀರಿ.

ಶ್ರೀ ಎಂ. ವೈ. ಘೋರ್ಪಡೆ.—ಕೆಲವು ತಾಲ್ಲೂಕುಗಳಲ್ಲಿ ಮೂರು-ನಾಲ್ಕು ರೂಪಾಯಿ ಕೂಲಿ ಕೊಟ್ಟರೆ, ಯಾರೂ ಕೆಲಸಕ್ಕೆ ಬರುತ್ತಿಲ್ಲ. ಆದರೆ, ಕೆಲವು ತಾಲ್ಲೂಕುಗಳಲ್ಲಿ ಎರಡು ರೂಪಾಯಿ ಕೊಟ್ಟರೂ ಬರುತ್ತಾರೆ. ಕೆಲವು ತಾಲ್ಲೂಕುಗಳಲ್ಲಿ ಅಷ್ಟೊಂದು ಪರಿಸ್ಥಿತಿ ಹದಗೆಟ್ಟಿದೆ. ಆದು ಆಯಾಯಾ ತಾಲ್ಲೂಕುಗಳಿಗೆ ಸಂಬಂಧಪಟ್ಟ ಪರಿಸ್ಥಿತಿಗನುಗುಣವಾಗಿ ಇರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಾಯಿಲ್ ಕನ್ಸರ್ವೇಷನ್ ಕೆಲಸದಲ್ಲಿ ಒಂದು ಮೀಟರು ಮಣ್ಣು ಅಗೆದರೆ, ನಾಲ್ಕು ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ಆದರೆ, ಅಷ್ಟು ಕೆಲಸವನ್ನು ಎರಡು ದಿವಸ ಮಾಡಿದರೂ ಪೂರೈಸುವುದಕ್ಕಾಗುವುದಿಲ್ಲ. ಅಂಥಾ ಪರಿಸ್ಥಿತಿ ಇದೆ.

ಶ್ರೀ ಎಂ. ವೈ. ಘೋರ್ಪಡೆ.—ನಾನು, ನನ್ನ ಜಿಲ್ಲೆಯಲ್ಲಿರುವ ಗ್ರಾಮಗಳಿಗೆ ಮೊನ್ನೆ ಭೇಟಿ ಕೊಟ್ಟಿದ್ದೆ. ಅಲ್ಲಿ ಸುಮಾರು ಹತ್ತಿಪ್ಪತ್ತು ಸಾಯಿಲ್ ಕನ್ಸರ್ವೇಷನ್ ಕೆಲಸಗಳು ನಡೆಯುತ್ತಿದ್ದವು. "ದಿವಸವೂ ನೀವೆಷ್ಟು ದುಡಿಯುತ್ತೀರಿ, ನಿಮಗೆಷ್ಟು ಕೂಲಿ ಕೊಡುತ್ತಾರೆ" ಎಂದು ಆ ಕೂಲಿಯವರನ್ನು ನಾನು ಕೇಳಿದೆ. ಅವರಲ್ಲಿ ಶೇಕಡ ಎಂಭತ್ತರಷ್ಟು ಮಂದಿ ಮೂರು-ನಾಲ್ಕು ರೂಪಾಯಿಗಳನ್ನು ಕೊಡುತ್ತಾರೆ ಎಂದು ಹೇಳಿದರು. ಆದರೆ, ಅಲ್ಲೇ ಕೆಲವು ಕಡೆ, ಕೆಂಪು ಮಣ್ಣಿರುವ

ಭಾಗಗಳುಂಟು. ಅಲ್ಲಿ ಮಣ್ಣನ್ನು ಅಗೆಯುವುದು ಸ್ವಲ್ಪ ಕಷ್ಟ. ಅಲ್ಲಿನ ಕೂಲಿಕಾರರು ಸಹ, ಅಗೆಯಲು ಬಹಳ ಕಷ್ಟಪಡಬೇಕು ಎಂದು ಹೇಳಿದರು, ಅವರಿಗೆಲ್ಲಾ ೫೦ ಪೈಸೆ ಜಾಸ್ತಿ ಮಾಡಲಾಗಿದ್ದು, ಆ ಆರ್ಡರ್ ಇನ್ನು ಮುಟ್ಟಿದಿಲ್ಲ ಎಂದು ಕಾಣುತ್ತದೆ. ೫೦ ಪೈಸೆ ಜಾಸ್ತಿ ಮಾಡಿದರೂ ಕೂಡ ನಾವು ಅದನ್ನು ಸರಿದೂಗಿಸಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಅಲ್ಲಿಗೆ ಹೋದ ದಿವಸ ಆ ಭಾಗಗಳಲ್ಲಿ ಮಳೆಯಾಗಿರಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಈಗೇನೂ ನಮಗೆ ಆಹಾರ ಪದಾರ್ಥಗಳ ಮತ್ತು ಕಾಳಿನ ಅಭಾವವಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾರುಕಟ್ಟೆಯಲ್ಲಿ ಕಲ್ಲು ಮಣ್ಣು ಬೆರಸಿ ರಾಗಿಯನ್ನು ಮಾರುತ್ತಿದ್ದಾರೆ ಎಂದು ಮೊನ್ನೆ ತಾನೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಮೈಲೋ ಬಡ ಜನರಿಗೆ ಅಗತ್ಯವಾಗಿ ಬೇಕು. ಮೈಲೋದಲ್ಲಿ ಕಸ ಬೆರಸಿದ್ದಾರೆ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ, ಕಸವನ್ನು ತೆಗೆದು, ಶುದ್ಧ ಮೈಲೋವನ್ನು ಹಂಚುವುದೇನೂ ದೊಡ್ಡ ವಿಷಯವಲ್ಲ. ಕಸ ತೆಗೆದು, ಮೈಲೋವನ್ನು ಹಂಚಲೇಬೇಕು.

ಈಗ ಮೈಲೋ ಹಂಚುವುದಕ್ಕೋಸ್ಕರ ಬೇಕಾದ ಹಣದ ವ್ಯವಸ್ಥೆಯನ್ನು ಮಾಡಿದ್ದೇವೆ. ಸೊಸೈಟಿಗಳಲ್ಲಿ ಹಣ ಇರಲಿ ಬಿಡಲಿ ತಾಲ್ಲೂಕು ಮಟ್ಟದಲ್ಲಿ ಮಾರ್ಕೆಟಿಂಗ್ ಸೊಸೈಟಿಯವರು ಪಿ. ಡಿ. ಅಕೌಂಟನ್ನು ಉಪಯೋಗಿಸಿ ಮೈಲೋ ತರಲಿಕ್ಕೆ ಹಣವನ್ನು ಕೊಟ್ಟಿದ್ದೇವೆ. ಒಂದೊಂದು ತಾಲ್ಲೂಕಿನಲ್ಲಿ ನಾವು ಹೊಸದಾಗಿ ೧೫೦ ರಿಂದ ೨೦೦ ಹೊಸ ಸಹಕಾರ ಸಂಘಗಳನ್ನು ಮಾಡಿದ್ದೇವೆ. ಇವರೂ ಸಹ ಪಿ. ಡಿ. ಅಕೌಂಟಿನಿಂದ ಮೈಲೋ ತರಲಿಕ್ಕೆ ಕ್ರೆಡಿಟ್ ಫೆಸಿಲಿಟಿ ಎಷ್ಟು ಬೇಕೋ ಅದನ್ನು ನೇರವಾಗಿ ಫ್ರೀ ಆಫ್ ಇಂಟರೆಸ್ಟ್ ಕೊಡಬೇಕು ಎಂದೂ ಕೂಡ ಹೇಳಿದ್ದೇವೆ.

SRI D. DEVARAJ URS.—Many of you please understand one aspect which you don't know. ಸದಸ್ಯರುಗಳು ಊರಿಗೆ ಹೋದಾಗ ಅಲ್ಲಿನ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ನಾವು ಹಾಸನ ಜಿಲ್ಲೆಗೆ ನಾಲ್ಕು ತಿಂಗಳಿಂದ ಒಂದೇ ಸಮನಾಗಿ ಗೋಧಿ, ಜೋಳ, ಮೈಲೋ ಮತ್ತು ಅಕ್ಕಿಯನ್ನು ಒಂದು ತಿಂಗಳಿಗೆ ೬ ರಿಂದ ೭ ಸಾವಿರ ಕ್ವಿಂಟಾಲ್ ವರೆಗೆ ಕಳುಹಿಸುತ್ತಿದ್ದೇವೆ. ಆದರೆ ನಾವು ಕೊಟ್ಟಿದ್ದನ್ನು ಸರಿಯಾಗಿ ತೆಗೆದುಕೊಂಡು ಹೋಗುವುದಿಲ್ಲ. ಇದನ್ನು ಮೊದಲು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರು ತೆಗೆದುಕೊಂಡು ಹೋಗಬೇಕು, ಅವರು ತೆಗೆದುಕೊಂಡು ಹೋಗಿ ಸೊಸೈಟಿಗಳ ಮುಖೇನ ಹಂಚಬೇಕು ಎಂದು ಏನು ಪದ್ಧತಿ ಇದೆ ಈ ಪದ್ಧತಿಯ ಪ್ರಕಾರ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರೇ ಮೊದಲು ನಾವು ಅಲಾಟ್ ಮಾಡಿದ್ದನ್ನು ತೆಗೆದುಕೊಂಡು ಹೋಗುವುದಿಲ್ಲ. ನಾನು ಈ ಮಾತನ್ನು ಬಹಿರಂಗವಾಗಿಯೂ ಹೇಳಿದ್ದೇನೆ. ಇದಕ್ಕೆ ನಾನು ಇನ್ನೇನು ಉತ್ತರ ಹೇಳಬೇಕು ? ಇವರು ಇಲ್ಲಿಂದ ಮೈಲೋ ಅನ್ನು ತೆಗೆದುಕೊಂಡು ಹೋದರೆ ಅದನ್ನು ಅಲ್ಲಿ ಕೊಂಡು ಕೊಳ್ಳುವವರು ಇರುವುದಿಲ್ಲ. ಶಾಸಕರಾದವರು ತಾವುಗಳೇ ಇಂಥ ಸಾರ್ವಜನಿಕ ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಜನಗಳಿಗೆ ಹೇಳಬೇಕು. ಇದಕ್ಕೆ ಕಾರಣ ನಾವು ಕಳುಹಿಸುವಂಥ ಪದಾರ್ಥ ಲೋಕಲ್ ಆಗಿ ಸಿಕ್ಕುತ್ತದೆ ಎಂದೇ ಕೆಲವರು ಹೇಳುತ್ತಾರೆ, ಇನ್ನು ಕೆಲವರು ಸೊಸೈಟಿಗಳಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ದುಡ್ಡು ಇಲ್ಲದಿದ್ದರೆ, ಸೊಸೈಟಿಗಳವರಿಗೆ ಸಕ್ಕರೆಯನ್ನು ೧೦ ಸಾವಿರ ಮೂಟೆಕೊಡಿ ಎಲ್ಲಿಂದಲಾದರೂ ದುಡ್ಡನ್ನು ತಂದು ತೆಗೆದುಕೊಂಡು ಹೋಗುತ್ತಾರೆ ಸಕ್ಕರೆ ನಾವು ಕೊಟಿದ್ದರಲ್ಲಿ ಒಂದು ಬೊಗಸೆಯನ್ನು ಇವರುಗಳು ಬಿಡುವುದಿಲ್ಲ. ನಾವು ಎಷ್ಟು ಅಲಾಟ್ ಮಾಡಿರುತ್ತೇವೆಯೋ ಅಷ್ಟರಲ್ಲಿ ಒಂದು ಚೂರು ಉಳಿಯುವುದಿಲ್ಲ. ಇದನ್ನು ತೆಗೆದುಕೊಂಡು ಹೋಗಿ ಯಾರಿಗಾದರೂ ಮಾರುತ್ತಾರೆಯೋ ಏನೋ ಅದು ನಮಗೆ ಗೊತ್ತಾಗುವುದಿಲ್ಲ. ಆಮೇಲೆ ಕೆಲವು ಕಡೆ ನಿಜವಾಗಿಯಾ ದುಡ್ಡು ಇಲ್ಲ. ಎಂದು ಹೇಳಿದ್ದುದು ನಮ್ಮ ಗಮನಕ್ಕೆ ಬಂದು, ನಾವು ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳವರಿಗೆ ೨೦-೨೫ ಷೇರುಗಳನ್ನು ಕೊಡಿಸಿ, ಹೆಚ್ಚಾಗಿ ದುಡ್ಡು ತೆಗೆದುಕೊಂಡು ಹೋಗಿ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿ ನಮ್ಮ ದುಡ್ಡನ್ನು ನಮಗೆ ವಾಪಸ್ ಕೊಡಿ ಎಂದು ಹೇಳಿದ್ದೇವೆ. ಪಿ. ಡಿ. ಅಕೌಂಟಿನಿಂದ ಸೊಸೈಟಿಗಳಿಗೆ ಹಣವನ್ನು ಕೊಡಿ, ಪಂಚಾಯತಿಗಳಿಗೆ ಕೊಡಿ, ಇವೂ ಇಲ್ಲದೇ ಹೋದರೆ ತಾಲ್ಲೂಕು ಆಫೀಸರ್ಸ್ ಅಂದರೆ ಗುಮಾಸ್ತರನ್ನು

ನೇಮಿಸಿ ಒಂದು ಗಾಡಿಯಲ್ಲಿ ಸಾಮಾನುಗಳನ್ನು ಕಳುಹಿಸಿ ನಾವು ಕೊಟ್ಟ ಪದಾರ್ಥಗಳನ್ನು ಮಾರಾಟ ಮಾಡಿ ಎಂದು ಹೇಳಿದ್ದೇವೆ. ಚಾನಲ್ ಇರುವ ಕಡೆ ದವಸ ಧಾನ್ಯಗಳು ಇಲ್ಲ ಎಂದು ಹೇಳುವುದು ಬೇಕಿಲ್ಲ. ನಾವು ಕೊಟ್ಟದ್ದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿದರೆ ಸಾಕು. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಕ್ಷೇತ್ರದ ಜವಾಬ್ದಾರಿ ತೆಗೆದುಕೊಳ್ಳಿ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿ ಸರಿಯಾಗಿ ಆಹಾರ ಪದಾರ್ಥಗಳ ಹಂಚಿಕೆ ಸರಿಯಾಗಿ ಆಗಿಲ್ಲ, ಅಲ್ಲಿ ಹಂಚಿಕೆಯನ್ನು ಬೇರೆಯವರಿಗೆ ಎಂಟರೆಸ್ಟ್ ಮಾಡಿಯಾದರೂ ಸರಿಯಾಗಿ ಮಾಡಬೇಕು. ಎಲ್ಲೆಲ್ಲಿ ಹೆಚ್ಚಿಗೆ ಜನರು ಕಾನ್ಸೆಂಟ್ರೇಟ್ ಆಗಿದ್ದಾರೆ ಅಂಥ ಕಡೆಗೂ ಹಂಚಿಕೆಯನ್ನು ಸರಿಯಾಗಿ ಮಾಡಬೇಕು ಎಂದೂ ಕೂಡ ನಾವು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಎಲ್ಲೆಲ್ಲಿ ಈ ಸೊಸೈಟಿಗಳು ಇರುವುದಿಲ್ಲ, ಪಂಚಾಯತಿಗಳು ಇರುವುದಿಲ್ಲ, ಅಂಥ ಕಡೆ ನಮ್ಮ ಪಿ.ಡಬ್ಲ್ಯೂ.ಡಿ ಇಲಾಖೆಯ ಅಧಿಕಾರಿಗಳಿಗೆ ಈ ಒಂದು ಕೆಲಸವನ್ನು ಮಾಡಲಿ ಎಂದು ಹೇಳಿದ್ದೇವೆ. Therefore, the question now is not for want of foodgrains. ಕೆಲವರು, ಕೆಲವು ಕಡೆ ಲೋಕಲ್ ಪಾಲಿಟಿಕ್ಸ್‌ನಿಂದ ಇದರಲ್ಲಿ ಹೆಚ್ಚಿಗೆ ಲಾಭ ಇಲ್ಲ ಇದನ್ನು ಮಾಡುವುದಿಲ್ಲ. ಇದು ಬಡವರಿಗೋಸ್ಕರ ಮಾಡುವ ಕೆಲಸ ಯಾರಿಗೆ ಬೇಕಾಗಿದೆ ಎಂದು ಹೇಳತಕ್ಕವರೂ ಇದ್ದಾರೆ. ಮಂತ್ರಿಗಳು ಅಂಥ ಕಡೆ ಹೋದಾಗ ಅವರನ್ನು ಸುಮ್ಮನೆ ಬೈಯುವುದು. ದೂರ ದೃಷ್ಟಿಯಿಂದ ಕೆಲಸ ಮಾಡುವವರು ಬಹಳ ಕಡಿಮೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊನ್ನೆ ಊರಿಗೆ ಹೋದಾಗ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಕೇಳಿದೆ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ನಾನು ತಮ್ಮ ಮುಂದೆ ಇಡುತ್ತೇನೆ ಅವರು ಎರಡು ಲಕ್ಷ ರೂಪಾಯಿಗಳ ಅಡಿಷನಲ್ ಅಮೌಂಟನ್ನು ಕೇಳಿದ್ದಾರೆ. ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕ್‌ನವರು ಕ್ಯಾಷ್ ಕ್ರೆಡಿಟ್ ಲೋನ್ ಕೊಡಲಿಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಇನ್ನೂ ಅವರಿಗೆ ಪಿ. ಡಿ. ಅಕೌಂಟಿನ ಪರವಾನ್‌ಗೆ ಬಂದಿಲ್ಲ, ಬಂದಮೇಲೆ ಹಣವನ್ನು ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಸಕ್ಕರೆಯನ್ನು ತೆಗೆದುಕೊಂಡು ಹೋಗಲಿಕ್ಕೆ ಹಣ ಎಲ್ಲಿಂದ ಬಂತು ನೀವೇ ಹೇಳಿ ?

ಶ್ರೀ ಎಚ್. ಡಿ ದೇವೇಗೌಡ.—ಕೆಲವು ಕಡೆ ಸಣ್ಣ ಸಣ್ಣ ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗಳು ಏನು ಇವೆ ಇವರು, ಮತ್ತು ಯೂತ್ ಕ್ಲಬ್‌ಗಳವರು ಅಲಾಟ್ ಮಾಡಿದ್ದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. ಕೆಲವರು ಸ್ವಂತ ದುಡ್ಡು ಹಾಕಿಕೊಂಡು ೨೦೦-೩೦೦ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಾರೆ. ನಮ್ಮ ಕಡೆ ಈಗ ರಾಗಿ ಬೇಕಾಗಿದೆ, ಮೈಲೋ ಅನ್ನು ಜನ ಅಷ್ಟಾಗಿ ಕೊಳ್ಳುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ಕಡೆ ಈಗ ರಾಗಿ ಇದ್ದರೂ ಅದನ್ನು ಬಿಡುಗಡೆ ಮಾಡುವಂತಿಲ್ಲ. ಮೈಲೋ ಎಷ್ಟು ಬೇಕಾದರೂ ಕೊಡುತ್ತೇವೆ. ರಾಗಿಯನ್ನು ನಾವು ಹೊದ ಸಾರಿ ಜನರಿಂದ ಲೆವಿ ಮೂಲಕ ತೆಗೆದುಕೊಂಡಿರಲ್ಲಿಲ್ಲ So, it is not possible. From where do I bring ? ಓಪನ್ ಮಾರ್ಕೆಟ್ಟನಲ್ಲಿ ನಾವು ಒಂದು ಲಕ್ಷ ಮೂಟೆಯನ್ನು ಕೊಂಡು ಇಟ್ಟಿದ್ದೇವೆ. ಇದಕ್ಕೆ ಸ್ವಲ್ಪ ದುಡ್ಡು ಹೆಚ್ಚಾದರೂ ನಾವೇ ಕೊಂಡಿಟ್ಟಿದ್ದೇವೆ ಇನ್ನೂ ಸ್ವಲ್ಪ ಕಾಲ ರಾಗಿ ನಮ್ಮಲ್ಲಿಯೇ ಇರಲಿ, ಈಗಲೇ ರಿಲೀಸ್ ಮಾಡುವುದು ಬೇಡ ಎಂದು ಇಟ್ಟಿದ್ದೇವೆ, ರಾಗಿಯನ್ನು ಸ್ವಲ್ಪ ಹೆಚ್ಚು ಕಾಲ ಇಟ್ಟರೂ ಏನೂ ತೊಂದರೆ ಇರುವುದಿಲ್ಲ. ಮೈಲೋ ಇದೆ, ಇದನ್ನು ಸ್ವಚ್ಛ ಮಾಡುವುದಕೋಸ್ಕರ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಜಿಲ್ಲಾಧಿಕಾರಿಗಳು, ಇದನ್ನು ಸ್ವಚ್ಛ ಮಾಡಿದಂಥ ಖರ್ಚನ್ನು ವಹಿಸುವುದಕ್ಕೆ ಒಪ್ಪಿಕೊಂಡಿದ್ದಾರೆ, ಇದರ ಬಗ್ಗೆ ಯಾವ ತೊಂದರೆಯೂ ಇಲ್ಲ. ಸಧ್ಯದಲ್ಲಿ ಮೈಲೊ ವೀಟ್, ಮತ್ತು ಅಕ್ಕಿ ನಮ್ಮಲ್ಲಿರತಕ್ಕದ್ದು. ರಾಗಿಯನ್ನು ಸಂದರ್ಭಾನುಸಾರವಾಗಿ ಎಲ್ಲಿಗೆ ಬೇಕೋ ಅಲ್ಲಿಗೆ ರಿಲೀಸ್ ಮಾಡಬೇಕು ಎಂದು ಇಟ್ಟಿದ್ದೇವೆ. ಈಗ ನಾವು ರಾಗಿಯನ್ನು ರಿಲೀಸ್ ಮಾಡಿದರೆ ಎಂಟು ದಿವಸದಲ್ಲಿ ಅದು ಖರ್ಚಾಗಿ ಹೋಗುತ್ತದೆ.

ಶ್ರೀ ಎ. ವಿ ಮುನಿಸ್ವಾಮಿ.—ಡಿ.ಸಿ.ಸಿ.ಬ್ಯಾಂಕಿನವರು ಸಾಮಾನನ್ನು ತೆಗೆದುಕೊಂಡು ಹೋಗುವುದಕ್ಕೆ ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ. ಆದರೆ ಟ್ರಾನ್ಸ್‌ಪೋರ್ಟೇಷನ್‌ಗೆ ಅವರು ಕೊಡತಕ್ಕ ದುಡ್ಡು ಪ್ರಾಕ್ಟಿಕಲ್ ಆಗಿಲ್ಲ. ಅವರು ಕೊಡತಕ್ಕ ಹಣ ಪ್ರಾಕ್ಟಿಕಲ್ ಆಗಿ ವರ್ಕ್‌ಔಟ್ ಆಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.— ಇಂಥ ಕೆಲಸ ಮಾಡುವಾಗ ಸಂಪಾದನೆ ಮಾಡುವುದಕ್ಕೂ ತಯಾರು ಆಗಬೇಕು, ಸಮಯ ಬಿದ್ದರೆ ಕಳೆದುಕೊಳ್ಳುವುದಕ್ಕೂ ತಯಾರಾಗಬೇಕು. ಇದು ಬಿಸಿನೆಸ್ ಪ್ರಪೋಜಿಷನ್ ಲಕ್ಷಗಟ್ಟಲೆ ಸಂಪಾದನೆ ಮಾಡುವಾಗ ಯಾರನ್ನಾದರೂ ಕೇಳುತ್ತೀರಾ ? ಇಂಥ ಪರಿಸ್ಥಿತಿ ಮತ್ತು ವಿಚಾರಗಳು ಬಂದಾಗ ಸ್ವಲ್ಪ ಕಳೆದುಕೊಳ್ಳುವುದಕ್ಕೂ ತಯಾರಾಗಬೇಕು. ಟ್ರಾನ್ಸ್‌ಪೋರ್ಟ್ ಚಾರ್ಜ ಗಿಟ್ಟುತ್ತಿಲ್ಲ ಎಂದು ಸಕ್ಕರೆ ಮಾರಾಟ ಬಿಡುತ್ತೀರಾ ?

SRI M. Y. GHORPADE.—I would like to assure this House that very clear instructions have been sent by the Government in regard to distribution of milo and coarse grains. If the House is interested in the subject I don't mind to read out the extract from this order. It is like this.

Government have been pleased to order the grant required for the purchase and distribution of coarse grains by the Deputy Commissioners of the District from out of the Personal Deposit account-head of account 509 etc., to such of the jurisdictions which are not in a position to meet the necessary amounts required taking in to consideration the various factors, so as to enable the distribution of coarse grains referred to by the Deputy Commissioner through Village Panchayats. or through other officials of Government as may be authorised by Tashildars concerned for this purpose. The Deputy Commissioners may make payments for food-grains directly or wholesale agencies concerned and place sufficient imprest at the disposal of the Tashildars for meeting the essential transport and other distribution costs. This should be utiisea by the society only for the purpose of purchasing and distributing Milo and Jawar and such other coarse grains.

Those advances will be refundable by the Society immediately after the transactions are over or by 31st March 1977 whichever is earlier. In case additional share capital is made available by the Government to Society, the advances will be adjusted out o: the additional share capital.

ಒಟ್ಟಿನಲ್ಲಿ ಈಗ ಇದರ ಇಷ್ಯೂ ಪ್ರೈಸ್ 62 ಪೈಸೇ ಇದೆ. ಇದರಲ್ಲಿ ಕಸ ಏನಾದರೂ ಇದ್ದರೆ ಅದನ್ನು ತೆಗೆಯುವುದಕ್ಕೆ ಸ್ವಲ್ಪ ಹಣ ಖರ್ಚಾದರೂ ಕೂಡ ಅದನ್ನು ಇಷ್ಯೂ ಪ್ರೈಸ್‌ನಲ್ಲಿ ಸೇರಿಸಿಕೊಳ್ಳುವುದಕ್ಕೆ ಆಯಾಯ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದೆ. ಈಗ ಹೋಲ್‌ಸೇಲ್ ಮಟ್ಟದಲ್ಲಿ ಕಾಳು ತರುವುದಕ್ಕೆ ಅಭಾವವಿಲ್ಲ. ಆದುದರಿಂದ ಈಗ ಮಾನ್ಯ ಸದಸ್ಯರುಗಳು ಮಾಡಬೇಕಾದುದು ಏನೆಂದರೆ ಆಯಾಯ ಕ್ಷೇತ್ರದ ಸದಸ್ಯರು ಈಕಡೆ ಗಮನ ಕೊಟ್ಟು ಎಲ್ಲೆಲ್ಲಿ ಕಾಳಿನ ಅಭಾವ ಇದೆಎಂದು ತಿಳಿಸಿದರೆ ಅದನ್ನು ಒದಗಿಸುತ್ತೇವೆ.

6–00 P.M.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕಾದರೆ ಈಗ ನಮ್ಮ ಎಷ್ಟು ರಿಗ್‌ಗಳು ಇವೆ ಅವೆಲ್ಲಾ ಎಲ್ಲಾ ಕಡೆಯೂ ಕೆಲಸ ಮಾಡುತ್ತಾ ಇವೆ. ಓಪನ್ ವೆಲ್ಸ್‌ಗೂ ಕೂಡ ನಮ್ಮಲ್ಲಿ ಹಣ ಅಭಾವ ಇಲ್ಲ. ಓಪನ್‌ವೆಲ್ಸ್‌ಗೆ ಎಷ್ಟು ಹಣ ಬೇಕೋ ಅಷ್ಟನ್ನೂ ಕೊಡುತ್ತೇವೆ, ರಿಗ್ ಉಪಯೋಗಿಸಿದರೂ ನೀರು ಬರುವುದಿಲ್ಲ ಎಂದು ಹೇಳಿದಕ್ಕೆ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದರು, ಒಂದು ವೇಳೆ ಬಂಡಿ, ಟ್ರಕ್‌ಗಳಲ್ಲಿ ತರುವಂಥಾ ಪರಿಸ್ಥಿತಿ ಬಂದರೂ ಕೂಡ ಅದಕ್ಕೂ ನಾವು ಹಿಂಜರಿಯುವುದಿಲ್ಲ ಎಂದು. ನಮಗೆ

ಈ ಬಾಬಿಗೆ ಹಣದ ಅಭಾವ ಇಲ್ಲ ಮತ್ತು [illegible] ಅಡ್ಡಿಯೂ ಇಲ್ಲ. ಈಗ ಸುದೈವದಿಂದ ಮಳೆ ಬಂದಿದೆ. ಈ ಕುಡಿಯುವ ನೀರಿನ ಅಭಾವ [illegible] ಇಲ್ಲ. ಸ್ವಲ್ಪ ಮಟ್ಟಿಗೆ ಅದೂ ಕೂಡ ಕಡಿಮೆ ಯಾಗಿದೆ. ಕೆಲವು ಕಡೆ ಏನಾದರೂ ಕುಡಿಯುವ ನೀರಿನ ಅಭಾವ ಇದ್ದರೆ ಅದನ್ನು ಸರಿಪಡಿಸಲಿಕ್ಕೆ ಏನೇನು ಮಾಡಲಿಕ್ಕೆ ಸಾಧ್ಯವೋ ಅದನ್ನೆಲ್ಲಾ ಮಾಡೋಣ.

ಇನ್ನು ಫಾಡರ್ ಬಗ್ಗೆ ಹೇಳುವುದಾದರೆ ಅದಕ್ಕೆ ಎಷ್ಟು ಹಣ ಕೊಟ್ಟರೂ ಅದನ್ನು ತಯಾರಿಸಲಿಕ್ಕೆ ಆಗುವುದಿಲ್ಲ. ಫಾಡರ್ ಅಭಾವ ಎಲ್ಲಾ ಕಡೆಯೂ ಇದೆ. ಇದನ್ನು ನೀಗಿಸಬೇಕಾದರೆ ಎಲ್ಲಿ ಫಾಡರ್ ಇದೆಯೋ ಅಲ್ಲಿಂದ ಫಾಡರ್ ತಂದು ಒದಗಿಸಬೇಕು. ಒಟ್ಟಿನಲ್ಲಿ ಈಗ ಹೇಳುವುದಾದರೆ ನಮ್ಮಲ್ಲಿ ಈಗ ಕೆಲಸ, ಕಾಳು ಮತ್ತು ಕುಡಿಯುವ ನೀರು ಮುಖ್ಯವಾದುದು. ಈ ಕೆಲಸಗಳಿಗೆ ಖಂಡಿತವಾಗಿಯೂ ಹಣದ ಅಭಾವ ಇಲ್ಲ, ಮುಂದೂ ಕೂಡ ಇದಕ್ಕೆ ಹಣದ ಅಭಾವ ಇಲ್ಲ ಆದರೆ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಒಂದು ಮಾತು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ನಿಮ್ಮ ಸಹಕಾರ ಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮ ಸಹಕಾರ ಬೇಕು ಎಂದು ತಾವು ಹೇಳಿದಿರಿ. ಈಗ ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ನಿಮಗೆ ಯಾವರೀತಿ ಸಹಕಾರ ಬೇಕು, ಯಾವ ತರಹವಾದಂಥಾ ಕೋ ಆಪರೇಷನ್ ಬೇಕು ಅನ್ನುವುದನ್ನು ತಿಳಿಸುತ್ತೀರಾ ?

ನಮ್ಮಲ್ಲಿ ಇನ್ನೂ ಜನರು ಇದ್ದಾರೆ. ಸಕ್ಕರೆ ಮೂಟೆಯನ್ನು ಎತ್ತಿಕೊಂಡು ಹೋಗತಕ್ಕಂಥಾ ಕಳ್ಳರನ್ನು ಹಿಡಿದು ಕೊಡುವುದಕ್ಕೆ ನಮ್ಮ ಸಹಕಾರ ಬೇಕೆ ?

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).— ಈ ವಿಚಾರದಲ್ಲಿ ಅಪೋಸಿಷನ್ ಮೆಂಬರ್ಸ್ ಒಬ್ಬರ ಸಹಕಾರವೇ ಅಲ್ಲ ಎಲ್ಲರದೂ ಬೇಕು. ಆಯಾಯ ಕ್ಷೇತ್ರದ ಪ್ರತಿನಿಧಿಗಳಾಗಿರತಕ್ಕಂಥ ವರು ಇದರ ಬಗ್ಗೆ ಹೆಚ್ಚು ಶ್ರದ್ಧೆ ವಹಿಸಿದರೆ ನಾವು ಹಾಕಿ ಕೊಂಡಿರತಕ್ಕಂಥಾ ಕಾರ್ಯಕ್ರಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಕ್ಕೆ ಸುಲಭವಾಗುತ್ತದೆ. ಅಧಿಕಾರಿಗಳು ಕೆಲಸ ಮಾಡುವುದಕ್ಕೂ ಕೂಡ ನಾನಾ ವಿಧವಾದ ಅಡಚಣೆಗಳು ಬರುತ್ತದೆ. ಅದರಲ್ಲಿ ಅಧಿಕಾರಿಗಳೂ ಇದ್ದಾರೆ, ಅಧಿಕಾರೇತ ರರೂ ಇದ್ದಾರೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ತಮ್ಮ ಸಹಕಾರ ಏನು ಎಂದರೆ ಎಲ್ಲಾ ಕ್ಷೇತ್ರದ ಸದಸ್ಯರು ಆಯಾಯ ತಾಲ್ಲೂಕಿಗೆ ಹೋಗಿ ಈ ಬಗ್ಗೆ ವಿಚಾರಿಸಬೇಕು. ತಹಸೀಲ್ದಾರರಿಗೆ, ಬಿ.ಡಿ.ಓ ಗೆ ಡೆಪ್ಯೂಟಿ ಕಮೀಷನರಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿಸುವುದಕ್ಕೆ ದುಡ್ಡನ್ನು ಕೊಟ್ಟಿರುತ್ತೇವೆ. ಈಗತಾನೆ ತಮಗೆ ಹೇಳಿದ ಬಗ್ಗೆ ೧೫-೨೦ ದಿವಸದಲ್ಲಿ ಮೈನರ್ ಇರ್ರಿ ಗೇಷನ್‌ಗೆ ೨ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆ ಎಂದು, ಎಲ್ಲೆಲ್ಲಿ ಮೈನರ್ ರಿಪೇರಿ ಕೆಲಸ ಗಳನ್ನು ಮಾಡಬೇಕೋ ಅಲ್ಲಿ ರಿಪೇರಿಗೋಸ್ಕರವಾಗಿ ೨ ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಇನ್ನೂ ೪ ಕೋಟಿ ರೂಪಾಯಿ ಖರ್ಚಾದರೂ ಪರವಾಯಿಲ್ಲಾ ಎಷ್ಟೋ ಕೆರೆಗಳಲ್ಲಿ ತೂಬುಗಳಲ್ಲಿ ನೀರೇ ನಿಲ್ಲುವುದಿಲ್ಲ, ಇದನ್ನೆಲ್ಲಾ ರಿಪೇರಿ ಮಾಡಿಸುವುದಕ್ಕೆ ಹಣ ಕೊಟ್ಟಿರುತ್ತೇವೆ, ಇದನ್ನು ರಿಪೇರಿ ಮಾಡಿದರೆ ಒಂದು ಶಾಶ್ವತವಾದ ಪರಿಹಾರ ಆಗುತ್ತದೆ. ನಾವು ಇಂಥಾ ಕೆಲಸಗಳನ್ನೆಲ್ಲಾ ತೆಗೆದುಕೊಳ್ಳಿ ಎಂದು ಹೇಳುತ್ತೇವೆ. ಆದರೆ ಒಂದೊಂದು ಸಂದರ್ಭದಲ್ಲಿ ಒಬ್ಬ ಇಂಜಿನಿಯರ್ ಆ ಕೆಲಸವನ್ನು ಮಾಡದೇ ಇರಬಹುದು, ಅಥವಾ ಬೇಜವಾಬ್ದಾರಿಯಿಂದ ಆ ಕೆಲಸವನ್ನು ಮಾಡಬಹುದು, ಇದನ್ನು ನಾವು ಸ್ವಲ್ಪ ಗಮನಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ತಾವು ಹೋಗಿ ಡೆಪ್ಯೂಟಿ ಕಮೀಷನರಿಗೆ ತಿಳಿಸಬಹುದು ಇಂಥಾ ಕಡೆ ಇಂಥಾ ಕೆಲಸವನ್ನು ತೆಗೆದುಕೊಂಡಿಲ್ಲ, ಇದಕ್ಕೆ ಈ ರೀತಿ ಸಹಾಯ ಮಾಡಬೇಕು ಎಂದು ಅವರಿಗೆ ತಿಳಿಸಬಹುದು. ಅದೇರೀತಿ ಈ ಆಹಾರಧಾನ್ಯಗಳನ್ನು ಹಂಚುವ ವ್ಯವಸ್ಥೆಯಲ್ಲೂ ಕೆಲವು ಕಡೆಗಳಲ್ಲಿ ಏನು ಮಾಡುತ್ತಿದ್ದಾರೆ ಎಂದರೆ ಸರಿಯಾಗಿ ತೆಗೆದುಕೊಂಡು ಹೋಗುವುದಿಲ್ಲ. ಅದರ ಕಡೆಯೂ ಮಾನ್ಯ ಸದಸ್ಯರುಗಳು ಗಮನ ಕೊಡಬೇಕು. ಅವರಿಗೆ ಯಾವುದರಲ್ಲಿ ಫಾಯಿದೆ ಇರುವುದಿಲ್ಲ ಅದನ್ನು ತೆಗೆದುಕೊಂಡು ಹೋಗುವುದಿಲ್ಲ. ಯಾವುದಾದರೂ ಫಾಯಿದೆ ಇರುವುದಾದರೆ ಹೊರಗಡೆ ಯಿಂದ ಹೇಗಾದರೂ ಮಾಡಿ ದುಡ್ಡು ತಂದು ಅದನ್ನು ತೆಗೆದುಕೊಂಡು ಹೋಗುತ್ತಾರೆ. ಈಗ ಕಾಳು ಗಳಿಗೆ ಹೊರಗಡೆ ಹೆಚ್ಚು ಬೆಲೆ ಇಲ್ಲದೇ ಇರುವುದರಿಂದ ಇಲ್ಲಿಂದ ತೆಗೆದುಕೊಂಡು ಹೋಗುವುದಿಲ್ಲ. ಒಂದುವೇಳೆ ಈ ಆಹಾರದ ಧಾನ್ಯಕ್ಕೆ ಹೊರಗಡೆ ಜಾಸ್ತಿ ಬೆಲೆ ಇದ್ದ ಪಕ್ಷದಲ್ಲಿ ದುಡ್ಡು ಹೇಗಾದರೂ ಹೊಂದಿಸಿಕೊಂಡು ತೆಗೆದುಕೊಂಡು ಹೋಗಿ ಬಿಡುತ್ತಿದ್ದರು. ಕಾರಣ ೪೦ ಮೂಟೆಯಲ್ಲಿ ೧೫ ಮೂಟೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದರೂ ಕೂಡ ಅವನಿಗೆ ಫಾಯಿದೆ ಬರುತ್ತಿತ್ತು. ಈಗ ಅದೇ ಸಕ್ಕರೆ ಮೂಟೆ ನೋಡಿ. ಹಾಸನದಲ್ಲಿ ಯಾರೂ ಕೂಡ ಒಂದು ತಿಂಗಳಿನಲ್ಲಿ ಒಂದು ಮೂಟೆ ಸಕ್ಕರೆಯನ್ನು

ತೆಗೆದುಕೊಂಡು ಹೋಗುವುದನ್ನು ಬಿಟ್ಟಿಲ್ಲ. ಈ ಆಹಾರಧಾನ್ಯ ಏನು ಇದೆಯೋ ಅವನು ೫೦ ಮೂಟೆ ತೆಗೆದುಕೊಂಡು ಹೋಗಬೇಕಾಗಿದ್ದರೆ, ೩ ಮೂಟೆಯನ್ನೂ ಸಹ ತೆಗೆದುಕೊಂಡು ಹೋಗಿಲ್ಲ. ಅದೇನಾದರೂ ಕಳ್ಳ ಸಂತೆಯಲ್ಲಿ ವ್ಯಾಪಾರವಾಗುವ ಹಾಗೆ ಇದ್ದರೆ ಅಷಾಗ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು. ಈ ಬಗ್ಗೆ ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಇಷೆ. ತಮ್ಮ ಸಹಾಯ ಕೋರುವುದು ಇಷ್ಟೆ. ಪ್ರತಿಯೊಬ್ಬರ ಸಹಕಾರ ಎಲ್ಲಾ ಕ್ಷೇತ್ರದಲ್ಲೂ ಇರಬೇಕು. ಈಗ ನಮ್ಮ ರಾಜ್ಯದಲ್ಲಿ ೧೭೫ ತಾಲ್ಲೂಕುಗಳಲ್ಲಿ ಸುಮಾರು ೧೦೦ ತಾಲ್ಲೂಕುಗಳಲ್ಲಿ ಈ ಒಂದು ಅಭಾವ ಪರಿಸ್ಥಿತಿ ಇದೆ ಈಗ ಮಳೆ ಬಂದಿದೆ ಅದರಿಂದ ಕೆಲವು ಕಡೆ ಸ್ವಲ್ಪ ನೀರು ಬಂದಿದೆ, ಇನು ಕೆಲವು ಕಡೆ ಬಂದಿಲ್ಲ. ಒಂದು ವೇಳೆ ಈಗ ಮಳೆ ಬಂದರೂ ಕೂಡ ಯಾವ ಆಹಾರಧಾನ್ಯವನ್ನೂ ಬೆಳೆಯುವುದಿಲ್ಲವೋ ಅಂಥಾ ಕಡೆ ಈ ಕಾಮಗಾರಿಗಳನ್ನು ನಿಲ್ಲಿಸಬೇಡಿ, ಅಂಥಾ ಕಡೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ಎಲ್ಲಿ ರಿಗ್ಸ್ ಹಾಕಿಲ್ಲವೋ ಅಂಥಾ ಕಡೆ ರಿಗ್ಸ್ ಹಾಕಿ ಕೆಲಸ ಮಾಡಿಸುವುದು ಇಂಥಾ ಒಂದು ಸಹಾಯವನ್ನು ತಮ್ಮಲ್ಲಿ ಕೋರುತ್ತೇನೆ. ಕೆಲವು ಕಡೆ ಕೆಲಸಗಾರರಿಗೆ ಸರಿಯಾಗಿ ಹಣ ಸಿಕ್ಕದೇ ಇರುವುದೂ ಸಾಧ್ಯ ಇವೆ. ನಾವು ಒಂದು ಪ್ಲಾನ್ ಮಾಡಿ ಆ ಅಸಿಸ್ಟೆಂಟ್ ಇಂಜಿನಿಯರ್‌ಗೆ ಓವರ್‌ಸೀಯರ್‌ಗೆ, ಜೂನಿಯರ್ ಇಂಜಿನೀಯರ್ ಅವರಿಗೆ ಆ ಕೆಲಸಗಾರರಿಗೆ ೪ ರೂಪಾಯಿನಂತೆ ಕೊಡಿ ಎಂದರೆ ಅವರು ೩ ರೂಪಾಯಿ ಕೊಡುವುದೂ ಉಂಟು. ನಾನು ಹೋದಾಗ ಹಾಸನದಲ್ಲಿ ಪಿ. ಡಬ್ಲ್ಯೂ. ಡಿ. ಯವರೇ ಡಿಪಾರ್ಟಮೆಂಟಲ್ ವರ್ಕ್ಸ್ ನಾವೇ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ನಾವು ಇದೇ ರೀತಿಯಾಗಿ ಎಲ್ಲಾ ಕಡೆಯೂ ಇದೇರೀತಿ ಮಾಡಬೇಕಾಗುತ್ತದೆ ಕೆಲವು ಸರ್ಕಲ್‌ನಲ್ಲಿ ಡಿಪಾರ್ಟ್‌ಮೆಂಟಲ್ ವರ್ಕ್ಸ್‌ನಲ್ಲಿ ಬಿಲ್ಡಿಂಗ್ಸ್ ಸಹ ಕಟ್ಟುವುದಕ್ಕೆ ಶುರು ಮಾಡಿದ್ದಾರೆ. ಡಿಪಾರ್ಟ್‌ಮೆಂಟಿನವರೇ ಈ ಕೆಲಸ ಶುರು ಮಾಡಿದ್ದರಿಂದ ಯಾರೂ ಕೂಡ ೩೦-೪೦-೫೦ ಪರ್ಸೆಂಟ್ ಎಕ್ಸೆಸ್ ಟೆಂಡರ್ ಹಾಕುವುದಿಲ್ಲ. ಅದೆಲ್ಲಾ ಈಗ ನಿಂತಿದೆ. ಅಲ್ಲಿಗೆ ಹೋದಾಗ ಸೂಪರಿಂಟೆಂಡೆಂಟ್ ಇಂಜಿನೀಯರ್‌ರವರು ಹೇಳಿದರು ಈ ಎಲ್ಲಾ ಕೆಲಸಗಳೂ ನಮ್ಮ ಷೆಡ್ಯೂಲ್‌ಗೆ ಸೇರಿಬಿಟ್ಟಿರುತ್ತದೆ ಈ ಷೆಡ್ಯೂಲ್ ವರ್ಕ್ಸ್‌ನಲ್ಲಿ ಈ ಬ್ರಿಡ್ಜಸ್ ಆಗುವುದಿಲ್ಲ ಈ ಬಿಲ್ಡಿಂಗ್ ಆಗುವುದಿಲ್ಲ ಎಂದು ಅವರು ಏನು ಹೇಳುತ್ತಿದ್ದರೋ ಅವೆಲ್ಲಾ ಸುಳ್ಳು ಮಾತು ಎಂದು ಹೇಳಿದರು ಈಗ ಹೆಚ್ಚು ಕಡಿಮೆ ಎಲ್ಲಾ ಕೆಲಸಗಳನ್ನು ಡಿಪಾರ್ಟ್‌ಮೆಂಟಿನವರೇ ತೆಗೆದುಕೊಂಡಿದ್ದಾರೆ. ಕೆಲವು ಕಡೆ ನಮ್ಮ ಡಿಪಾರ್ಟ್‌ಮೆಂಟಿನವರು ತೆಗೆದುಕೊಂಡಿರುವ ಕೆಲಸಗಳಲ್ಲಿ ಅಲ್ಲಿಯ ಕೆಲಸಗಾರರಿಗೆ ೫ ರೂಪಾಯಿ ಕೂಲಿ ಕೊಡುತ್ತಿದ್ದಾರೆ.

ಕೆಲಸಗಾರರು ಸಹ ನಾವು ೫ ರೂಪಾಯಿ ಕೂಲಿ ಪಡೆಯುತ್ತಿದ್ದೇವೆಂದು ತಿಳಿಸಿದರು. ಇತ್ತೀಚಿನ ಕಾನೂನು ಪ್ರಕಾರ ಗಂಡಾಳೇ ಆಗಲೀ, ಹೆಣ್ಣಾಳೆ ಆಗಲೀ ಒಂದೇ ರೀತಿಯಾದಂಥ ಕೂಲಿ ಕೊಡಬೇಕಾಗಿದೆ. I do not know in some other places it may be taking place in the same manner. ೮ ಗಂಟೆಗಳ ಕಾಲ ಕೆಲಸ ಮಾಡಬೇಕು, ಮಧ್ಯದಲ್ಲಿ ಒಂದು ಗಂಟೆಯ ವಿಶ್ರಾಂತಿ ಕೊಡಬೇಕೆಂದು ನಿಯಮವಿದೆ ಹಾಸನದಲ್ಲಿ ನಾಲೆಯ ಕೆಲಸವನ್ನು ಟೆಂಡರ್ ಮೂಲಕ ಕಂಟ್ರಾಕ್ಟರ್‌ಗೆ ವಹಿಸಿದ್ದಾರೆ ಆ ಕಂಟ್ರಾಕ್ಟ್‌ದಾರರು ಕೂಲಿಗಳಿಗೆ ಎರಡೂವರೆಯಿಂದ ಮೂರೂವರೆ ರೂಪಾಯಿಗಳವರೆಗೆ ಕೂಲಿಕೊಡುತ್ತಿದಾರೆಂದು ನನಗೆ ತಿಳಿದುಬಂತು. ಕಾನೂನು ರೀತ್ಯಾ ಕಂಟ್ರಾಕ್ಟ್ ಕೆಲಸ ಕೊಟ್ಟ ಮೇಲೆ, ಕಂಟ್ರಾಕ್ಟ್‌ದಾರರು ಕೆಲಸಗಾರರಿಗೆ ಕಡಿಮೆ ಕೂಲಿ ಕೊಡುವುದಕ್ಕೆ ಸಾಧ್ಯವಿಲ್ಲ. ಆದ ಕಾರಣ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಎಷ್ಟು ಕೂಲಿ ಕೊಡಬೇಕೋ ಅಷ್ಟನ್ನು ಕೊಡಲೇಬೇಕೆಂದು ನಾನು ತಾಕೀತು ಮಾಡಿ ಬಂದಿದ್ದೇನೆ. ಈ ರೀತಿ ನಾನು ಹಾಸನಕ್ಕೆ ಹೋಗಿ ನೋಡಿ ಸರಿ ಮಾಡಿ ಬಂದಿರಬಹುದು. ಆದರೆ ಬೇರೆ ಕಡೆಗಳಲ್ಲಿ ಕಡಿಮೆ ಕೊಡುತ್ತಿರಬಹುದು. ಆದಕಾರಣ ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೋಗಿ ನೋಡಿ, ಅಂತಹದ್ದೇನಾದರೂ ನಡೆದಿದ್ದರೆ ನನಗೆ ತಿಳಿಸಬಹುದು. That is the kind of co-operation that I need from our Hon'ble members. That is what we want.

MR. DEPUTY SPEAKER.—The Hon'ble Minister for Revenue will be replying to-morrow.

SRI H. D. DEVE GOWDA.—They said that there is no work in the Council and that some Bills have to be passed there. We have agreed to the programme. Four or Five members will speak on this and then the Minister will reply to-morrow.

MR. DEPUTY SPEAKER.—All that I can say is that the Hon'ble Minister for Revenue will be replying tomorrow.

ಶ್ರೀ ಸಿ. ಬೈರೇಗೌಡ.—ನಮಗೂ ಕೂಡ ನಾಳೆ ಇದರ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

MR. DEPUTY SPEAKER.—There was no unanimity and there was slight divergence of views. All that I can say is to-morrow the Hon'ble Minister for Revenue will reply. There is still scope for unanimity till to-morrow.

Now the House stands adjourned to meet to-morrow at 9 A.M.

The House adjourned at Fifteen minutes past Six of the Clock to meet again at Nine of the Clock on Saturday the 13th November 1976.